# 'ಕಂಬ್ಯಾಣಿಯವರ ಶಿಶು ಕಾವ್ಯ'

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ
ಸಾದರಪಡಿಸಿದ ಸಂಶೋಧನ ಸಂಪ್ರಬಂಧ)


ಸಂಶೋಧಕರು :

**ಶ್ರೀ ಗುರುರಾಜ ಜಿ ಮೇಡಿದಾರ**

ಎಸ್.ಬಿ. ಪದವಿಪೂರ್ವ ವಿದ್ಯಾಲಯ, ಕಲಕೇರಿ

ವಿಜಾಪುರ ಜಿಲ್ಲೆ.

ಮಾರ್ಗದರ್ಶಕರು :

**ಡಾ. ವಿವೇಕಾನಂದ ಸಾಲಿನಮಠ**

ಪ್ರಾಧ್ಯಾಪಕರು ಕನ್ನಡ ವಿಭಾಗ
ಎಂ.ಸಿ.ಮನಗೂಳಿ ಪದವಿ ಮಹಾವಿದ್ಯಾಲಯ, ಸಿಂದಗಿ,

ವಿಜಾಪುರ ಜಿಲ್ಲೆ.



**ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,**
**ಹಾರೂಗೇರಿ, ಜಿ: ಬೆಳಗಾವಿ**
**ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.**
**೨೦೦೯**

708



# ಕಂಬ್ಳ್ಯಾಣಿಯವರ ಶಿಶು ಕಾವ್ಯ

(ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಶೋಧನ ಸಂಪ್ರಬಂಧ)

ಸಂಶೋಧಕರು :

**ಶ್ರೀ ಗುರುರಾಜ ಜಿ ಮೇಡಿದಾರ**

ಎಸ್.ಬಿ. ಪದವಿಪೂರ್ವ ವಿದ್ಯಾಲಯ, ಕಲಕೇರಿ,
ವಿಜಾಪುರ ಜಿಲ್ಲೆ.

ಮಾರ್ಗದರ್ಶಕರು :

**ಡಾ. ವಿವೇಕಾನಂದ ಸಾಲಿನಮಠ**

ಪ್ರಾಧ್ಯಾಪಕರು ಕನ್ನಡ ವಿಭಾಗ
ಎಂ.ಸಿ.ಮನಗೂಳಿ ಪದವಿ ಮಹಾವಿದ್ಯಾಲಯ, ಸಿಂದಗಿ,
ವಿಜಾಪುರ ಜಿಲ್ಲೆ.

**ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರ,**

**ಹಾರೂಗೇರಿ, ಜಿ :ಬೆಳಗಾವಿ.**

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೦೦೯

# ಪ್ರಮಾಣ ಪತ್ರ

'ಕಂಚ್ಯಾಣಿಯವರ ಶಿಶು ಕಾವ್ಯ'ಎಂಬ ಶೀರ್ಷಿಕೆಯ ಸಂಪ್ರಬಂದವನ್ನು ಡಾ. ವಿವೇಕಾನಂದ ಸಾಲಿಮಠ ಅವರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ್ದೇನೆ. ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋದನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಸಂಪ್ರಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ನಾನು ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ :30–09–2009

ಶ್ರೀ ಗುರುರಾಜ ಜಿ ಮೇಡಿದಾರ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ ಆರ್ ದರೂರ ಸಂಶೋಧನ ಕೇಂದ್ರ,
ಹಾರೂಗೇರಿ.

# ದೃಢೀಕರಣ ಪತ್ರ

ಶ್ರೀ ಗುರುರಾಜ ಜಿ ಮೇಡಿದಾರ ಇವರು 'ಕಂಚ್ಯಾಣಿಯವರ ಶಿಶು ಕಾವ್ಯ' ಎಂಬ ಶೀರ್ಷಿಕೆಯ ಸಂಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಹಾರೂಗೇರಿಯ ಶ್ರೀ ಬಿ. ಆರ್. ದರೂರ ಸಂಶೋಧನ ಕೇಂದ್ರದ ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಕನ್ನಡ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಸಂಪ್ರಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟಿಸಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ದೃಢೀಕರಿಸುತ್ತೇನೆ

ಸ್ಥಳ : ಹಾರೂಗೇರಿ

ದಿನಾಂಕ :30-09-2009

ಡಾ. ವಿವೇಕಾನಂದ ಸಾಲಿಮಠ
ಪ್ರಾಧ್ಯಾಪಕರು ಕನ್ನಡ ವಿಭಾಗ,
ಎಂ.ಸಿ. ಮನಗೂಳಿ
ಪದವಿ ಮಹಾವಿದ್ಯಾಲಯ, ಸಿಂದಗಿ.

## [illegible]

[illegible]

[illegible]

[illegible]

# ಕೃತಜ್ಞತೆಗಳು

ಹಲವು ವರುಷಗಳ ಕನಸು ನನಸಾದುದು ನಾನು ಎಂ.ಫಿಲ್ ಪ್ರವೇಶ ಪಡೆದ ದಿನ. ಸಂಶೋಧನ ವ್ಯಾಸಂಗ ಮಾಡುವ ಹಂಬಲ ಕೈಗೂಡಿದ ಶುಭದಿನ. ಡಾ. ವ್ಹಿ.ಎಸ್. ಮಾಳಿ ಗುರುಳಳಿಗೆ ಫೋನ ಮೂಲಕ ನನ್ನ ಪ್ರವರವನ್ನು ತಿಳಿಸಿದಾಗ, ಅವರು ಸಾಂತ್ವನದ ಶುಭ ಸಂದೇಶ ನೀಡಿದಾಗ ಎಂ.ಫಿಲ್ ಪ್ರವೇಶ ಪಡೆಯಲು ಪ್ರೇರಕವಾಯಿತು. ಮುಂದೆ ತರಗತಿಗೆ ಬರಲು ಎಲ್ಲಿಲ್ಲದ ಹರ ಸಾಹಸ. ಆಗ ಅರಿವಾದುದು ಸಂಶೋಧನ ವ್ಯಾಸಂಗ ಎಂಬುದು ಎನ್ನು ಎಂದು. ಆದರು ಛಲ ಬಿಡದೆ ಸಾಹಸ ಮಾಡಿ ಪರೀಕ್ಷೆಯನ್ನು ಮುಗಿಸಿದನ್ನು ಇದಕ್ಕೆ ನನ್ನ ಅಧ್ಯಾಯನ ಹಾಗೂ ಅನುಭವವೇ ಕಾರಣ. ಫಲಿತಾಂಶ ಬಂದ ನಂತರ ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಮಾಳಿ ಅವರ ಅನುಮೋಧನೆಯಂತೆ 'ಕಂಚ್ಯಾಣಿಯವರ ಶಿಶು ಕಾವ್ಯ' ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಶ್ರೀ ವಿವೇಕಾನಂದ ಸಾಲಿಮಠ ಇವರ ಮಾರ್ಗದರ್ಶನದಲ್ಲಿ ಬರಹವನ್ನು ಮುಂದುವರಿಸಿದೆ. ಆತ್ಮಿಯ ಭಾವನೆಯ, ಸರಳತೆಯ ಸಾಕಾರಮೂರ್ತಿಯಾದ ಶ್ರೀ ಸಾಲಿಮಠ ಗುರುಗಳು ತಮ್ಮ ಅನುಭವದ ತುಣುಕುಗಳನ್ನು ಬಿಚ್ಚಿ ನನ್ನನ್ನು ಸಂಶೋಧನೆಯಲ್ಲಿ ತೊಡಗಿಕೊಳ್ಳಲು ರೂಪಿಸಿದ್ದು ಮರೆಯದ ನೆನಪು.

ಅಜ್ಜನ ಹಾಡಿನ ಅಜ್ಜನಾದ ಕಂಚ್ಯಾಣಿ ಶರಣಪ್ಪನವರು ಮೃದ್ದು ಭಾಷೆ, ಮುಗ್ಧ ಮನಸಿನ ಮಕ್ಕಳ ಕವಿ. ನನ್ನನ್ನು ಆಕರ್ಷಿಸಿದ್ದು ಅವರ ಸಂದರ್ಶನದ ಸಂದರ್ಭದಲ್ಲಿ. ನನ್ನ ಸಂಶೋಧನೆಗೆ ಪೂರಕ ಸಹಕಾರ, ಸಾಮಗ್ರಿ ವದಗಿಸಿದ ಅವರಿಗೆ ನಾನು ಚಿರರುಣಿ.

ನನ್ನ ಸಂಪ್ರಬಂಧದ ಎಲ್ಲ ಅಧ್ಯಾಯಗಳನ್ನು ಮನವಿಟ್ಟು ಗಮನಿಸಿದ ಡಾ. ಮಾಳಿ ಗುರುಗಳಿಗು ಹಾಗೂ ಡಾ. ಆರ್.ಬಿ. ಚಿಲುಮ್ಮಿ ಗುರುಗಳಿಗು ಮನದುಂಬಿ ನನೆಯುವೆ. ಹಾಗೂ ಶ್ರೀ ಬಿ.ಆರ್. ದರೂರ ಮಹಾವಿದ್ಯಾಲಯದ ಪ್ರಾಚಾರ್ಯರು ಮತ್ತು ಗ್ರಂಥಾಲಯದ ಮುಖ್ಯಸ್ಥರನ್ನು ಈ ಸಂದರ್ಭದಲ್ಲಿ ಒಂದಿಸುವೆ. ನನ್ನನ್ನು ಎಂ.ಫಿಲ್ ಪದವಿ ಪಡೆಯಲು ಸಹಕಾರ ನೀಡಿದ ನಮ್ಮ ಮಹಾವಿದ್ಯಾಲಯದ ಪ್ರಾಚಾರ್ಯರಾದ ಶ್ರೀ ಎಸ್.ಸಿ. ಗುಮಶಟ್ಟಿ ಅವರಿಗೂ ಮತ್ತು ಎಲ್ಲ ಪ್ರಾಧ್ಯಾಪಕ ಬಂದುಗಳಿಗೆ ಅನಂತ ಒಂದನೆಗಳು.

ಅದೇ ರೀತಿಯಲ್ಲಿ ನನ್ನ ಪ್ರಬಂಧದ ರಚನೆಯಲ್ಲಿ ಪ್ರರಣೆ ನೀಡುತ್ತ ಬಂದಿರುವ ತಾಯಿ-ತಂದೆ, ಅಣ್ಣ-ಅತ್ತಿಗೆ, ಅಕ್ಕ-ಮಾವಂದಿರನ್ನು ಮನದಾಳದಿಂದ ನಮಿಸುತ್ತೇನೆ. ಈ ಕಾರ್ಯದಲ್ಲಿ ನನ್ನಷ್ಟೇ ಪರಿಶ್ರಮಪಟ್ಟು ಸಹಕಾರ ನೀಡಿ ಪ್ರೇರಕ ಶಕ್ತಿಯಾದ ನನ್ನ ಶ್ರೀಮತಿಯನ್ನು ನೆನೆಯದೆ ಇರಲಾರೆ.

ಈ ಪ್ರಬಂಧದ ಮುದ್ರಣ ಸಂದರ್ಭದಲ್ಲಿ ತಮ್ಮೆಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಹಗಲಿರುಳು ಸಹಕರಿಸಿದ ಅಳಿಯ ದೈಹಿಕ ಶಿಕ್ಷಕರಾದ ಶ್ರೀ ಗುರುಸಿದಪ್ಪಾ .ಶ. ಪಾಟೀಲ ಹಾಗೂ ಹಲವು ರಂಗಗಳಲ್ಲಿ ಸಲಹೆ ಸುಚನೆ ನೀಡುತ ಬರುತ್ತಿರುವ ಸಹೋದರ ಡಾ. ಮಲ್ಲಿಕಾರ್ಜುನ ಮೇತ್ರಿ ಅವರನ್ನು ಮನದುಂಬಿ ಸ್ಮರಿಸುತ್ತೇನೆ.

ಸಂಪ್ರಬಂಧವನ್ನು ಅಂದವಗಿ ಅಕ್ಷರ ಜೋಡಣೆ ಮಾಡಿ ಕೃತಿಯ ಮೆರುಗನ್ನು ತಂದು ಕೊಟ್ಟ ಶ್ರೀ. ಮಹಿಬುಬ .ಹ. ಮುಜಾವರ ಗುರುಗಳಿಗೂ, ಈ ಕಾರ್ಯದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷ ಸಾಹಾಯ ಸಹಕಾರ ನೀಡಿದ ಎಲ್ಲರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ :೩೦-೦೯-೨೦೦೯

ಶ್ರೀ. ಗುರುರಾಜ ಜಿ ಮೇಡಿದಾರ
ಸಂಶೋಧನ ವಿದ್ಯಾರ್ಥಿ
ಶ್ರೀ. ಬಿ.ಆರ್. ದರೂರ ಸಂಶೋಧನ ಕೇಂದ್ರ,
ಹಾರೂಗೇರಿ.

# -಼ ಪರಿವಿಡಿ ಃ-

# ಅಧ್ಯಾಯ ಒಂದು

# "ಕಂಚ್ಯಾಣಿಯರ ಶಿಶು ಕಾವ್ಯ"

## ಅಧ್ಯಾಯ ೧ : ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವ್ಯಾಪ್ತಿ :

'ನಾವು ಎಳೆಯರು, ನಾವು ಗೆಳೆಯರು
ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು
ನಮ್ಮ ಕನಸದು ಸುಂದರ'. ೧

ಮಕ್ಕಳ ಸಾಹಿತಿಗಳು ಸಹ ಮಕ್ಕಳ ಮುಗ್ಧ ಮನಸ್ಸಿನ ಅಂತರಂಗದ ನಿರ್ಮಲ ಸೌಂದರ್ಯ ರಸಾನುಭೂತಿಯಲ್ಲಿ ಮುಳುಗಿ ಸಾಹಿತ್ಯ ರಚಿಸುವದು ಅಗತ್ಯ.

"ಇಂದಿನ ಮಕ್ಕಳು ನಾಳಿನ ನಾಡಿನ ಪ್ರಜೆಗಳು. ಒಂದೊಂದು ಮಗುವಿನ ಮುಖದಲ್ಲಿಯೂ ನಾನು ಒಂದೊಂದು ಪುಟ್ಟ ಪ್ರಪಂಚವನ್ನೇ ಕಾಣುತ್ತಿದ್ದೇನೆ" ಎಂದು ಪಂಡಿತ ನೆಹರು ಅವರು ಹೇಳುವ ಮಾತು ಸತ್ಯವಾದುದು. ಚಿಕ್ಕ ಮಕ್ಕಳಲ್ಲಿ ಅಗಾಧವದ ಶಕ್ತಿ ಹುದುಗಿರುತ್ತದೆ. ಅವಕಾಶದೊರೆಯದೆ ಹಲವು ಮಕ್ಕಳು ಮೊಗ್ಗಿನಲ್ಲಿ ಬಾಡಿ ಹೋಗುವ ಹೂವಿನಂತೆ ಅಪ್ರಯೋಜಕರಾಗುವರು. ಮಕ್ಕಳ ಮನಸ್ಸಿನ ಸುಪ್ತ ಶಕ್ತಿಯನ್ನು ಜಾಗ್ರತೆಗೊಳಿಸುವದು ಹಿರಿಯರ ಕರ್ತವ್ಯ. ಮನೆಯಲ್ಲಿ ನೆರೆಹೊರೆಯಲ್ಲಿ ದೊರೆಯುವ, ನೋಡುವ, ಕೇಳುವ ವಿಷಯಗಳಲ್ಲ ಮಗುವಿನ ಬೆಳವಣಿಗೆಗೆ ಪೂರಕವೆನಿಸುತ್ತವೆ. ತಾಯಿ ಹೇಳುವ ಲಾಲಿ ಹಾಡುಗಳು, ಅಜ್ಜಿಯ ಕಥೆಗಳಿಂದ ಅಥವಾ ದೃಶ್ಯ, ಶ್ರವಣ ಮಾಧ್ಯಮಗಳಿಂದ ಮಕ್ಕಳ ಸಾಹಿತ್ಯ ಹುಟ್ಟಿಕೊಳ್ಳಲು ಸಾಧ್ಯವಾದರೂ, ಮಕ್ಕಳ ಸಾಹಿತ್ಯಕ್ಕೆ ಮೂಲ ಪ್ರೇರಣೆ ಜನಪದ ಸಾಹಿತ್ಯ. ಮಕ್ಕಳ ಸಾಹಿತ್ಯವೆಂದು ಕರೆಯಿಸಿಕೊಳ್ಳುವ ಪೂರ್ವದಲ್ಲಿ ಜಾನಪದವೆ ಮಕ್ಕಳಿಗೆ ಪ್ರೀಯವಾಗಿತ್ತು. ಜನಪದ ಹಾಡು-ಕಥೆಗಳನ್ನು ಕೇಳಿ ತೃಪ್ತಿ ಪಡುವ ಕಾಲದಲ್ಲಿ ಅದರ ಪ್ರಭಾವ ಮಕ್ಕಳ ಸಾಹಿತ್ಯದ ಮೇಲೆಯೂ ಆಗದೆ ಹೋಗಿಲ್ಲ.

ಮಕ್ಕಳ ಸಾಹಿತ್ಯ ರಚನೆ ಅಷ್ಟೊಂದು ಸುಲಭದ ಕೆಲಸವಲ್ಲ ಮಕ್ಕಳ ಮನಸ್ಸು, ಅಭಿರುಚಿ, ಆಸಕ್ತಿ ಇವುಗಳನ್ನು ಕುರಿತು ಅದಕ್ಕೆ ತಕ್ಕಂತೆ ಬರೆಯುವದು ಕಠಿಣವಾದುದು. ಬೆಳೆಯುವ ಮಕ್ಕಳಿಗೆ ಒದಗಿಸುವ ಸಾಹಿತ್ಯ ಬಹಳಷ್ಟು ದೂರದೃಷ್ಟಿಯಿಂದ ಕೂಡಿರುವದು ಅವಶ್ಯಕ. ಶಿಶು ಸಾಹಿತ್ಯ ಜೋಗುಳ ಹಾಡಿನಿಂದ ಮೊದಲಾಗಿ ಅದ್ಭುತ, ರಮ್ಯ, ಕಿನ್ನರಿ ಕಥೆಗಳವರೆಗೆ ವಿವಿಧ ಬಗೆಯಲ್ಲಿ ಕಂಡುಬರುತ್ತವೆ'.

"ಸಾಹಿತ್ಯ ಜೀವನದ ಪ್ರತಿಬಿಂಬ. ಜೀವನವೆಂದರೆ ಕೇವಲ ಉಂಡು-ತಿಂದು ಬಾಳುವದಲ್ಲ. ತಾನು ಬಾಳಿ ಇತರರಿಗೂ ಬಾಳಗೂಡುವದೇ ಜೀವನ. ಇಂಥ ಆದರ್ಶವನ್ನು ಎತ್ತಿತೋರುವುದೇ ಸಾಹಿತ್ಯ". ೨

---

೧. ಹೂವಿನ ಹಂದರ-ಶಂ.ಗು. ಬಿರಾದಾರ.
೨. ಯುಗದ ಕವಿ ಕುವೆಂಪು ಜೀವನ ಮತ್ತು ಸಾಹಿತ್ಯ ಸಾಧನೆ-ಕೆ.ಸಿ.ಶಿವಾರೆಡ್ಡಿ ಪುಸ್ತಕ ಪ್ರಕಾಶನ ಮೈಸೂರು.

ಕನ್ನಡದಲ್ಲಿ ಹತ್ತೊಂಬತ್ತನೆಯ ಶತಮಾನದ ಮಧ್ಯಕಾಲದಿಂದ ಈಚೆಗೆ ಮಕ್ಕಳ ಕವಿತೆಗಳು ಕಂಡುಬರುತ್ತವೆ. ಪೂರ್ವ-ಪಶ್ಚಿಮದ ಮುಖಾಮುಖಿಯ ಪರಿಣಾಮದಿಂದ ಹುಟ್ಟಿದ ಮಕ್ಕಳ ಸಾಹಿತ್ಯಕ್ಕೀಗ ನೂರು ವರುಷ. ೧೯೬೨ ರಲ್ಲಿ ಜೆ.ಮ್ಯಾಕ್ ಅವರ 'ಬಾಲಗೀತೆಗಳು' ಎಂಬ ಮೊದಲ ಮಕ್ಕಳ ಕವಿತಾ ಸಂಕಲನವಾದರೆ, ಆ ಕೃತಿ ಲಭ್ಯವಾಗಿಲ್ಲ. ಅಲ್ಲಿಂದ ಸುಮಾರು ಒಂದೂವರೆ ಶತಮಾನ ಗತಿಸಿದೆ. ಈ ಅವಧಿಯಲ್ಲಿ ಮಕ್ಕಳ ಕೃತಿಗಳು ಹೇರಳವಾಗಿ ರಚನೆಯಾಗಿರುವದನ್ನು ಕಾಣುತ್ತೇವೆ.

ಪುಂಗಿಯ ನಾದಕ್ಕೆ ಹಾವು ತಲೆದೂಗುವುದು ವೈಜ್ಞಾನಿಕವಾಗಿ ಅಸತ್ಯವಾಗಿರಬಹುದು. ಆದರೆ ತಾಯಿಯ ಹಾಡಿಗೆ ಮಗು ಮರುಳಾಗುವುದು ಸುಳ್ಳಲ್ಲ. ತೊಟ್ಟಿಲಲ್ಲಿ ಮಲಗಿದ ಎಳೆಯ ಮಗು ಕೂಡಾ ಅಮ್ಮನ ಲಾಲಿಗೆ ಸ್ಪಂದಿಸುತ್ತದೆ; ಅಳುವನ್ನು ನಿಲ್ಲಿಸಿ ಕಣ್ಣರಳಿಸುತ್ತದೆ. ಹಾಡಿನ ಇಂಪಿಗೆ ಬಾಯಿ ತೆರೆದು ನಗುತ್ತದೆ. ಅದರ ಸೊಗಸನ್ನು ಸವಿಯುತ್ತಲೇ ನಿದ್ರೆಗೆ ಜಾರುತ್ತದೆ.

ಹಾಡಿನ ಪ್ರಾಸ, ಲಯ ಹಾಗೂ ಗೇಯ ಗುಣಗಳಿಗೆ ಅಂತಹ ಮಾಂತ್ರಿಕ ಶಕ್ತಿಯಿದೆ. ಬಹುಶಃ ಮಕ್ಕಳ ಕಾವ್ಯ ಲಾಲಿ ಹಾಡಿನಿಂದಲೇ ಶುರುವಾಗಿರಬೇಕು. ಮಕ್ಕಳಂತೂ ಶಿಶು ಪ್ರಾಸಗಳಿಗೆ ಮಾರುಹೋಗುತ್ತವೆ. ಆಡುವ ಮಕ್ಕಳಿಂದ, ಹಾಡುವ ಹಿರಿಯರಿಂದ ಶಿಶು ಗೀತೆಗಳು ಸೃಷ್ಟಿಯಾಗಿರಬೇಕು. ಇದಕ್ಕೆ ಪ್ರೇರಣೆ ನವೋದಯ ಸಾಹಿತ್ಯ. ಶಿಶು ಕಾವ್ಯವನ್ನು ಮುಖ್ಯವಾಗಿ ಎರಡು ವಿಧಗಳಾಗಿ ವಿಂಗಡಿಸಿ ಹೇಳಲು ಸಾಧ್ಯ. ಮೊದಲನೆಯದು ರಂಜನಾತ್ಮಕ ಕವಿತೆಗಳು, ಎರಡನೆಯದು ಬೋಧನಾತ್ಮಕ ಕವಿತೆಗಳು ಲಾಲಿಯ ಹಾಡುಗಳು, ಶಿಶು ಪ್ರಾಸಗಳು, ಅಭಿನಯ ಗೀತೆಗಳು ಮೊದಲನೆಯ ಭಾಗದಲ್ಲಿ ಸೇರಿದರೆ, ಕಥನ ಕವಿತೆಗಳು, ಸಮುದಾಯ ಗೀತೆಗಳು ಮತ್ತು ವೈಜ್ಞಾನಿಕ ಕವಿತೆಗಳನ್ನು ಬೋಧನಾತ್ಮಕ ಅಥವಾ ಉಪದೇಶದ ಗೀತೆಗಳಲ್ಲಿ ಗುರುತಿಸಬಹುದು, ಇಂಥ ಮಕ್ಕಳ ಸಾಹಿತ್ಯ ಸೃಷ್ಟಿಯಾಗಲು ಅವರ ಒಡನಾಡಿಗಳಾಗಿ ಓದು, ಆಟ-ನೋಟಗಳಲ್ಲಿ ಭಾಗಿಯಾದಾಗ ಮಾತ್ರ ಸಾಧ್ಯ. ಮಕ್ಕಳ ಮಾನಸಿಕ ಸ್ಥರ, ಸ್ವಭಾವ, ಅಭಿರುಚಿ, ಕಲ್ಪನೆಗಳನ್ನು ಒಳಗಣ್ಣಿನಿಂದ ತಿಳಿದುಕೊಂಡಿರಬೇಕು. ಪ್ರೀತಿ-ವಿಶ್ವಾಸಗಳಿಂದ ಮಗುವಿಗೆ ರಂಜನೀಯ ವಿಷಯಗಳನ್ನು ಹೇಳಿದರೆ ಕೇಳಬಯಸುತ್ತದೆ. ಕೆಲವೊಂದು ಸಲ ಅಧ್ಯಯನದ ಅನುಕೂಲತೆಗಾಗಿ ಅರ್ಥವಿಲ್ಲದ ಪ್ರಾಸಗಳು, ನಾಲಗೆ ಹೊರಳಿಸುವ ಪದ್ಯಗಳು, ಚುಟುಕುಗಳು, ಒಗಟುಗಳು ಎಂದು ಸ್ಥೂಲವಾಗಿ ಶಿಶು ಕಾವ್ಯವನ್ನು ವಿಂಗಡಿಸಿ ಹೇಳಲೂ ಬಹುದು. ಕಿರಿದರೊಳು ಹಿರಿದಾದ ಅರ್ಥ ನೀಡುವ ಶಿಶು ಪ್ರಾಶಗಳು ಎರಡು ಸಾಲುಗಳಿಂದ ಕೂಡಿದ್ದರೂ ಕಿರಿಯ-ಹಿರಿಯರನ್ನು ಆಕರ್ಷಿಸಬಲ್ಲವು.

ಅಂಗಿಮ್ಯಾಲ ಅಂಗಿ
ಶಾನುಭೋಗರ ತಂಗಿ
*  *  *  *  *
ಆರು ಕಾಸಿನ ಜೀರಿಗೆ
ನಾನೂ ಬರ್‍ತಿನಿ ನೀರಿಗೆ

ಎಂಬ ಶಿಶು ಪ್ರಾಸಗಳು ಹೇಳಿ-ಕೇಳಿ ಹಾಡಿ ಆನಂದಿಸಲು ಎಲ್ಲರಿಗೂ ಸಾಧ್ಯ.

"ಮಕ್ಕಳ ಸಾಹಿತ್ಯದಲ್ಲಿ ಬಳಸುವ ಭಾಷೆ ಆಯಾ ಮಕ್ಕಳ ವಯೋಮಾನಕ್ಕೆ ತಕ್ಕಂತಿರಬೇಕು. ಆ ಮಾತುಗಳಲ್ಲಿ ಸಮಾಸ ಪದಗಳು ಮಾತ್ರವಲ್ಲ, ಪದ ಸಂದಿಯೂ ಬರಬಾರದು. ಮಕ್ಕಳ ತೊದಲು ನುಡಿಯನ್ನು ಸಹ ಈ ಸಾಹಿತ್ಯದಲ್ಲಿ ತರುವಂತಿದ್ದರೆ ಇನ್ನೂ ಒಳ್ಳೆಯದು. ಸರಳತೆಯಿಂದ ಮಕ್ಕಳ ಭಾವನೆಗಳು ಪ್ರತಿಬಿಂಬಿತವಾಗಿರಬೇಕು. ಮಕ್ಕಳ ಸಾಹಿತ್ಯ ರಚನೆಯು ಚಿತ್ರದ ಕೆಲಸ". ೧

ಈ ಮೇಲಿನ ಸಾಲುಗಳಲ್ಲಿ ವಸ್ತು, ಭಾಷೆ, ಶೈಲಿ, ನಿರೂಪಣೆ, ಭಾವ, ಲಕ್ಷಣಗಳೆಲ್ಲ ಶಿಶು ಪದ್ಯಗಳಲ್ಲಿ ಹೋಗಿರಬೇಕು ? ಹೇಗೆ ಬರಬೇಕು ? ಎಂಬ ನಿಖರವಾದ ಸೂಚನೆಗಳು ಕಾಣುತ್ತವೆ. ಗದ್ಯ-ಪದ್ಯ ಯಾವುದೇ ಇದ್ದರೂ ಉಪದೇಶವನ್ನು ಮಾಡಬೇಕೆಂಬ ಹಟ ಮಕ್ಕಳ ಸಾಹಿತಿಗಳಿಗೆ ಇರಬಾರದು. ಮಕ್ಕಳಿಗೆ ಸಂತೋಷ ಕೊಡುವ, ಮನಸ್ಸಿಗೆ ಮುದನೀಡುವ ಭಾಷೆ ಹೊಂದಿರಬೇಕು.

ಪಂಜೆಯವರ 'ತೆಂಕಣಗಾಳಿ, ಬೇಂದ್ರೆಯವರ ಪಾತರಗಿತ್ತಿ ಪಕ್ಕ' ಕರಡಿ ಕುಣಿತ', ಸಿಸು ಸಂಗಮೇಶರ 'ಪುಟಚಂಡು' ಕನ್ನಡ ಮಕ್ಕಳ ಹಾಡುಗಳಲ್ಲಿ ಉತ್ತಮವದವುಗಳೆನ್ನಬಹುದು. ಹಾಗೆಯೇ ಕುವೆಂಪು ಅವರ 'ಬೊಮ್ಮನ ಹಳ್ಳಿಯ ಕಿಂದರ ಜೋಗಿ' ಶಿಖರ ಪ್ರಾಯವಾದ ಮಕ್ಕಳ ಕಥನ ಕವನ. ಇದು ಅನುವಾದವಾಗಿದ್ದರೂ. ಮೂಲಕ್ಕಿಂತ ವಿಶಾಲವಾದುದು ಹಾಗೂ ಮೂಲ ಕವಿತೆಯ ಸೊಗಸನ್ನು ಮೀರಿ ನಿಂತಿದೆ. ಭಾಷೆ, ಬಂಧ, ಔಚಿತ್ಯ,-ಪ್ರಜ್ಞೆ, ಲಯ, ಉತ್ಸಾಹದ ಓಟ ಯಾವ ರೀತಿಯಿಂದ ನೋಡಿದರೂ ಪದ್ಯ ಗೆದ್ದು ನಿಲ್ಲುತ್ತದೆ.

ಮಕ್ಕಳ ಸಾಹಿತ್ಯವು ಮೂರು ಆಯಾಮಗಳ ನೆಲೆಯಲ್ಲಿ ಅಧ್ಯಯನಕ್ಕೆ ಪೂರಕವಾಗುತ್ತದೆ.

೧. ಮಕ್ಕಳು ಎಂದರೆ ಯಾರು ? ಎಷ್ಟು ವಯಸ್ಸಿನವರು ?
೨. ಮಕ್ಕಳಿಗಾಗಿ ರಚಿಸಲ್ಪಡುವ ಸಾಹಿತ್ಯ ಎಂತಹದಿರಬೇಕು ?
೩. ಮಕ್ಕಳ ಸಾಹಿತ್ಯದಲ್ಲಿ ತಾತ್ವಿಕ ನೆಲೆಯನ್ನು ಗುರುತಿಸುವದು.

ಮೂರರಿಂದ ಹದಿನಾರು ವರ್ಷಗಳ ಮಧ್ಯದೊಳಗಿನವರನ್ನು ಮಕ್ಕಳೆಂದು ಸಾಮಾನ್ಯವಾಗಿ ಕರೆಯುವದು ಸಹಜ. ಈ ಮಕ್ಕಳ ಮನೋಭಾವನೆಗಳು ವಿಚಿತ್ರ ಅವರ ಅಭಿರುಚಿಗಳು ಭಿನ್ನ ಭಿನ್ನವಾಗಿದ್ದು. ಏನೆಲ್ಲ ಕಲ್ಪಿಸುವ ಬಯಸುವ ಮನಸ್ಸುಗಳಿಗೆ ಅನುರೂಪವಾಗಿ ಬರೆಯುವದು ಶಿಶು ಸಾಹಿತ್ಯದ ಅತಿ ಮುಖ್ಯ ಸಂಗತಿ.

"ಮಕ್ಕಳ ಮನಸ್ಸನ್ನು ಅರಳಿಸಿ ಕುತೂಹಲವನ್ನು ಕೆರಳಿಸಿ. ಕಲ್ಪನೆಯನ್ನು ರೂಪಿಸಿ ಭಾವನೆಗಳನ್ನು ಪ್ರಚೋದಿಸಿ, ಆನಂದದಲ್ಲಿ ಮೀಯಿಸಿ ಅವರ ವ್ಯಕ್ತಿತ್ವವನ್ನು ರೂಪಿಸುವ ಸಾಹಿತ್ಯವೇ ಮಕ್ಕಳ ಸಾಹಿತ್ಯ". ೩

---

೧. ಮಾಸ್ತಿವೆಂಕಟೇಶ ಅಯ್ಯಂಗಾರ.

೨. ಮೂಲ : ರಾಬರ್ಟ ಬ್ರೌನಿಂಗ್- ದಿ ಪೈಡ್ ಪೈಪರ್ ಆಫ್ ಹ್ಯಾಮೆಲಿನ್.

೩. ವಿಶ್ವಕೋಶ ಸಂಪುಟ-೩ ಪುಟ-೭೪೪ ಹಾಮಾನ.

ಭಾರತೀಯ ಸಾಹಿತ್ಯ ವಲಯದಲ್ಲಿ ಈ ಶತಮಾನದ ಪ್ರಾರಂಭದಲ್ಲಿ ಹೊಸ ಗಾಳಿಬೀಸಿತು. ಇಂಗ್ಲೀಷ ಶಿಕ್ಷಣದ ಕಾರಣದಿಂದಾಗಿ ಜಾಗತಿಕ ಸಂಬಂಧವನ್ನು ಕಲ್ಪಿಸಿಕೊಂಡು ಸಾಹಿತ್ಯ ರಚನೆಯಾಗತೊಡಗಿದ್ದು ಗಮನರ್ಹ. ಕನ್ನಡವು ಇದರಿಂದ ಹೊರತಾಗಿಲ್ಲ. ಕನ್ನಡದಲ್ಲಿ ಮೊದಲು ಅನುವಾದ ರೂಪದಲ್ಲಿ ಬಂದ ಹೊಸಬಗೆಯ ಸಾಹಿತ್ಯ ನಂತರ ತನ್ನ ಅಸ್ತಿತ್ವವನ್ನು ಪಡೆಯಿತು. ಆಗ ಕಥೆ, ಕಾದಂಬರಿ, ಪ್ರಬಂಧ, ವಿಮರ್ಶೆ, ಪ್ರವಾಸ ಸಾಹಿತ್ಯ, ಸಂಶೋಧನೆ, ಮಕ್ಕಳ ಸಾಹಿತ್ಯ ಹೀಗೆ ಮುಂತಾದ ರೂಪಗಳು ಉದಯಿಸಿದವು.

"ಆಧುನಿಕ ಕಾಲದಲ್ಲಿ ಮೊಟ್ಟ ಮೊದಲು ಮಕ್ಕಳ ಸಾಹಿತ್ಯ ರಚನೆಗೆ ತೊಡಗಿದವರಲ್ಲಿ ಪಂಜೆ ಮಂಗೇಶರಾಯರು, ಹೊನ್ನಾಪುರಮಠ ಗದಿಗೆಯ್ಯನವರು ಮತ್ತು ಹರ್ಡೇಕರ ಮಂಜಪ್ಪನವರು ಪ್ರಮುಖರು". ೧

ಹೀಗೆ ಮುಂದುವರೆಸಿಕೊಂಡು ಬಂದ ಮಕ್ಕಳ ಸಾಹಿತ್ಯ ಕೃಷಿ ಮಾಡಿದವರು ಕುವೆಂಪು, ಜಿ.ಪಿ. ರಾಜರತ್ನಂ, ಶಿವರಾಮ ಕಾರಂತ, ದಿನಕರ ದೇಸಾಯಿ, ಡಿ.ಎಸ್. ಕರ್ಕಿ, ಸಿದ್ದಯ್ಯ ಪುರಾಣಿಕ, ತೋನ್ಸೆ ಮಂಗೇಶರಾವ್ ಮೊದಲಾದವರು. ನಂತರ ಶಿಶು ಕಾವ್ಯಕ್ಕೆ ನೀರೆರೆದು ಪೋಷಣೆ ಮಾಡಿದವರಲ್ಲಿ ಸಿಸು ಸಂಗಮೇಶ, ಶಂ.ಗು. ಬಿರಾದಾರ,; ಬಿ.ಎ. ಸನದಿ, ಪರಶುರಾಮ ಚಿತ್ರಗಾರ, ಗುರುಪಾದಸ್ವಾಮಿ ಹಿರೇಮಠ, ರಶಿಕ ಪುತ್ತಿಗೆ, ಎ.ಕೆ. ರಾಮೇಶ್ವರ, ಬಾ.ಇ. ಕುಮಠೆ, ಈಶ್ವರಚಂದ್ರ ಚಿಂತಾಮಣಿ, ಕೆ.ಎಸ್. ಹೆಗಡೆ, ಶ್ರೀನಿವಾಸಶೆಟ್ಟಿ, ಚನ್ನವೀರ ಕಣವಿ, ಕಂಚ್ಯಾಣಿ ಶರಣಪ್ಪ, ಪಳಪಳ ಸೀತಾರಾಮ ಭಟ್ಟ ಹ.ಮ. ಪೂಜಾರ, ಸುಜನಾ ಪ್ರಮುಖರು.

ಲಾಲೀ ಲಾಲೀ ! ಜಯ್ ಲಾಲಿ !! ಜೋಜೋ

* * * * * * * * * * * * * * * * * * * *

ದಟ್ಟಾ ದಾಟ್ಟಾ ದಡಸಾಲಿ ದಡಸಾಲಿ ।
ಪಾಪನ ಕಾಲಾಗ ಹುಲಿಗೆಜ್ಜಿ ಹುಲಿಗೆಜ್ಜಿ ॥ ೨

ಎಂಬ ನಾದ ಮಾಧುರ್ಯದ ಈ ಸಾಲುಗಳು ಮಕ್ಕಳ ಮನವನ್ನು ಸೂರೆಗೊಳ್ಳುವಲ್ಲಿ ಸಂದೇಹವೇ ಇಲ್ಲ.

ಶಿಶು ಕಾವ್ಯ ಪರಂಪರೆಯ ಈ ಸಸಿಗೆ ಆಧಾರ ನೀಡಿ ಅದನ್ನು ಬೆಳೆಸುತ್ತಿರುವ ಈ ಹೊತ್ತಿನ ಕವಿಗಳಲ್ಲಿ ಮುಖ್ಯರಾದವರೆಂದರೆ ಫ.ಗು. ಸಿದ್ದಾಪುರ, ನಾಗರಾಜ ಶೆಟ್ಟಿ, ಲಕ್ಷ್ಮೀನಾರಾಯಣ ಭಟ್ಟ, ಆರ್.ಕೆ. ಶಾನಭಾಗ, ಜಂಬುನಾಥ ಕಂಚ್ಯಾಣಿ, ಡಾ. ಕರವೀರ ಪ್ರಭು ಕ್ಯಾಲಕೊಂಡ, ಗುರುರಾಜ ಬೆಣಕಲ್, ಅಶೋಕ ಚೇಳಚಗುಡ್ಡ, ಚಂದ್ರಗೌಡ ಕುಲಕರ್ಣಿ, ಸಂಗಮೇಶ ಬಾಗಲಕೋಟ, ಕವಿತಾ ಕೃಷ್ಣ ಮೊದಲಾದವರು.

---

೧. ಕರ್ನಾಟಕ ಗಾಂಧಿ– ಪುಟ–೧೬೦ ಡಾ ॥ ಮಲ್ಲಿಕಾರ್ಜುನ ಮೇತ್ರಿ.
೨. ಸಿಸು ಸಂಗಮೇಶ ಸ್ಮರಣೆ : ಸಾಹಿತ್ಯ ಅಕಾಡಮಿ.– ಶರಣಪ್ಪ ಕಂಚ್ಯಾಣಿ

"ಅಜ್ಜನು ಅಂದದ ಹಾಡನು ಬರೆದು
ಅಜ್ಜಿಯ ಮುಂದೆ ಓದುವನು
ಹಾಡನು ಹಾಡಿ ಮೋಜನು ಮಾಡಿ
ತಿಂಡಿಯ ಬೇಡಿ ಕಾಡುವನು". । ೧

ಅಜ್ಜನ ಹಾಡಿನ ಅಜ್ಜನೆಂದೇ ಮನೆ ಮಾತಾಗಿರುವ ಕಂಚ್ಯಾಣಿ ಶರಣಪ್ಪನವರ ಶಿಶು ಕಾವ್ಯದ ಹೊಳಪು ಕಿರಿಯರೆನ್ನದೆ ಹಿರಿಯರನ್ನೂ ಸೂರೆಗೊಳ್ಳುವ ಮಿಂಚು ಹುಳವಿದ್ದಂತೆ. ಇಂಥ ಕಂಚ್ಯಾಣಿಯವರ 'ಶಿಶು ಕಾವ್ಯ'ದ ವಿಶ್ಲೇಷಣೆ ಈ ಅಧ್ಯಯನದ ಉದ್ದೇಶವಾಗಿ ಇಟ್ಟುಕೊಂಡು, ಶಿಶು ಕಾವ್ಯದ ಭಾವ, ಲಯ ಛಂದಸ್ಸು, ಪ್ರಾಸ ಮುಂತಾದ ಕಾವ್ಯ ಸ್ವರೂಪದ ಅವಲೋಕನ ಅಗತ್ಯವೆನಿಸುತ್ತದೆ.

ಕಂಚ್ಯಾಣಿಯವರ ಶಿಶು ಕಾವ್ಯ ವಾತ್ಸಲ್ಯ ಭಾವದ ಸಂಬಂಧವನ್ನು ಗುರುತಿಸಿ, ನೀತಿಯ, ಅನುಭಾವದ, ದೇಸಪ್ರೇಮದ, ಸಮಾಜ ವಿಡಂಬನೆ, ನಿಸರ್ಗ ಪ್ರೇಮದ ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲು ಪ್ರೇರೇಪಿಸುತ್ತವೆ.

"ತಾಯಿ ತೊಡೆಯ ಮೇಲೆ ಕುಳಿತು
ನಗುವ ತೆರದಿ ಮಕ್ಕಳು
ಚಿಕ್ಕ ಚಿಕ್ಕ ಮಡಿಗಳಲ್ಲಿ
ಪುಟ್ಟ ಪುಟ್ಟ ಸಸಿಗಳು". ೨

ತಾಯಿಗಿಂತ ಬಂಧುವಿಲ್ಲ, ತಾಯಿಯ ಪ್ರೀತಿ ಅಪರಿಮಿತ, ತಾಯಿಯೇ ದೇವರು ಎಂಬ ತಾಯಿಯ ಕುರಿತಾದ ಮಾತುಗಳಲ್ಲಿ ಮಮತೆಯ ಮಧುರತೆ, ವಾತ್ಸಲ್ಯದ ಝರಿ ಹರಿದಿದೆ. ಕಂಚ್ಯಾಣಿಯವರ ಶಿಶು ಕಾವ್ಯ ಈ ಮಮತೆಯ ಸುಳಿಯಲ್ಲಿ ಸಿಕ್ಕು ರಸಾನುಭವದ ರಸ ಪಾಕವಾಗಿದೆ. ಕಂಚ್ಯಾಣಿಯವರ 'ಶಿಶುಕಾವ್ಯ' ಅಧ್ಯಯನ ಅವರ ಸಮಕಾಲೀನ ಮಕ್ಕಳ ಕವಿಗಳೊಂದಿಗೆ ತೂಗಿನೋಡಿಬೇಕು. ಆಗ ಮಾತ್ರ ನಿಜವಾದ ಶಿಶು ಕಾವ್ಯದ ಮೌಲ್ಯ ಗುರುತಿಸಲ್ಪಡುವದು. ಈ ದೃಷ್ಟಿಯಿಂದ ಪ್ರಸ್ತುತ ಅಧ್ಯಯನ ಇನ್ನೂ ಮುಖ್ಯವಾಗುವದರಲ್ಲಿ ಸಂದೇಹವಿಲ್ಲ.

ಕಾವ್ಯ ರಚಿಸುವದು ಕವಿಗೆ ಅಂತರಂಗದ ಖುಸಿಯಾದರೆ, ಓದುಗರಿಗೆ ಅದೊಂದು ರೀತಿಯ ಮಾನಸಿಕ ರುಚಿಯಾಗಿ ಒಳಗೊಳ್ಳುತ್ತದೆ. ಕವಿಗಳು ಅಂದಂದಿನ ನಲೆಗಳಲ್ಲಿ ನಿಂತು ಕಾವ್ಯವನ್ನು ಕುರಿತು ನಡೆಯಿಸಿದ ಚಿಂತನೆಗಳು ಆಯಾ ಮಾರ್ಗದ ದೋರಣೆಗಳನ್ನು ನಿರೂಪಿಸುವ ಮತ್ತು ತಮಗೆ ಹಿನ್ನಲೆಯಾದ ಸಾಹಿತ್ಯ, ಸಂಪ್ರದಾಯ, ಹಾಗೂ ಪರಂಪರೆಯ ರೀತಿಯನ್ನು ಸ್ವಾರಸ್ಯಕರವಾಗಿ ನಿರೂಪಿಸುತ್ತವೆ ಎನ್ನುವದಕ್ಕೆ ಕಂಚ್ಯಾಣಿಯವರ ಶಿಶು ಕಾವ್ಯವೆ ನಿದರ್ಶನ.

---

೧. ಆಯ್ದ ನೂರೊಂದು ಕವಿತೆಗಳು. ಪುಟ-೪೯ ಕಂಚ್ಯಾಣಿ ಶರಣಪ್ಪ.

೨. ನನ್ನ ತೋಟ – ಪುಟ-೫೫ ಕಂಚ್ಯಾಣಿ ಶರಣಪ್ಪನವರು.

"ಜನವಾಣಿ ಬೇರಾಗಿ ಕವಿವಾಣಿ ಹೂವಾಗಿ" ಅರಳುತ್ತ ಬಂದಿರುವದು, ಕನ್ನಡ ಸಾಹಿತ್ಯ ರೂಪಗಳಲ್ಲಿಯೇ ಕಾವ್ಯರೂಪ ವಿಶೇಷವಾದುದು. ಇದು ಕುತೂಹಲಪೂರ್ಣವಾದ ಒಂದು ಸಂಕೀರ್ಣ ಮಾಧ್ಯಮ ಎಂದರೂ ತಪ್ಪಾಗಲಾರದು. ಈ ಕಾವ್ಯ ಪ್ರಕ್ರಿಯೆ ಎನ್ನುವದು ಬಲು ವಿಸ್ಮಯಕಾರಿ. ಅಷ್ಟೇ ಸುಂದರ. ಕವಿ ಭಾವದ ರಹಸ್ಯಗಳನ್ನು ಹೊರಹಾಕುವ, ತನ್ನ ಹಾಗೂ ಪರರ ಅನುಭವಗಳನ್ನು ಜೀವನ ಪ್ರೀತಿಯಿಂದ ವ್ಯಕ್ತಪಡಿಸುವ ಸಂಪನ್ಮೂಲವಾಗಿ ಬಳಕೆಯಾದುದು ಕಂಚ್ಯಾಣಿಯವರ ಕವಿತೆಯಲ್ಲಿ. ಇವರ ಕಾವ್ಯ ಸಹಜ ನೈಜತೆಯಿಂದ ಕೂಡಿದೆ. ಸರಳ ರಂಜನೆಯಿಂದ ತುಂಬಿದ ಮಗುವಿಗೆ ಆಕರ್ಷಣೀಯವಾದುದು. ಅವರ ವ್ಯಕ್ತಿತ್ವದಂತೆ ಕಾವ್ಯ ಮೂಡಿದೆ. ಈ ಹಿನ್ನಲೆಯಲ್ಲಿ 'ಕಂಚ್ಯಾಣಿಯವರ ಶಿಶು ಕಾವ್ಯ' ಎಂಬ ಶೀರ್ಷಿಕೆಯನ್ನು ಈ ಸಂಪ್ರಬಂಧಕ್ಕೆ ಇಟ್ಟುಕೊಂಡು ಪ್ರಸ್ತುತ ಅಧ್ಯಯನದಲ್ಲಿ ಏಳು ಅಧ್ಯಾಯಗಳಾಗಿ ವಿಂಗಡಿಸಲಾಗಿದ್ದು, ಕಂಚ್ಯಾಣಿಯವರ ಹನ್ನೆರಡು ಮಕ್ಕಳ ಕವನ ಸಂಕಲನಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

- ❖ ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ ಹಾಗೂ ವ್ಯಾಪ್ತಿಯನ್ನು ಕುರಿತು ವಿವರಣೆ ನೀಡಲಾಗಿದೆ.
- ❖ ಎರಡನೆ ಅಧ್ಯಾಯದಲ್ಲಿ ಕಂಚ್ಯಾಣಿ ಶರಣಪ್ಪನವರ ಬದುಕು ಮತ್ತು ಕಾವ್ಯ ಚಿತ್ರಣವಾಗಿ ಬಳಸಿಕೊಳ್ಳಲಾಗಿದೆ.
- ❖ ಮೂರನೆಯ ಅಧ್ಯಾಯದಲ್ಲಿ ಕಂಚ್ಯಾಣಿಯವರ ಶಿಶು ಕಾವ್ಯ ಸ್ವರೂಪ ವಸ್ತು-ಆಶಯವನ್ನು ವಿವೇಚಿಸಲಾಗಿದೆ.
- ❖ ಅಧ್ಯಾಯ ನಾಲ್ಕರಲ್ಲಿ ಕಂಚ್ಯಾಣಿಯವರ 'ಶಿಶು ಕಾವ್ಯ' ವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.
- ❖ ಅಧ್ಯಾಯ ಐದರಲ್ಲಿ ಕಂಚ್ಯಾಣಿಯವರ 'ಕಥೆಗಳಲ್ಲಿ ಕಾವ್ಯ ನಿರೂಪಣೆ' ವೈಶಿಷ್ಟ್ಯವನ್ನು ವಿವರಿಸಲಾಗಿದೆ.
- ❖ ಆರನೆಯ ಅಧ್ಯಾಯದಲ್ಲಿ ಕಂಚ್ಯಾಣಿ ಶರಣಪ್ಪನವರ 'ಶಿಶು ಪ್ರಾಸಗಳನ್ನು' ಕುರಿತು ವಿವೇಚಿಸಿದರೆ, (ಭಾಷೆ-ಶೈಲಿ)
- ❖ ಏಳನೆಯ ಅಧ್ಯಾಯವನ್ನು 'ಸಮಾರೋಪ' ವಾಗಿಸಿ ಅಧ್ಯಯನದ ಒಟ್ಟು ಫಲಿತಗಳ ಸಂಕ್ಷಿಪ್ತ ರೂಪ ಒಳಗೊಂಡಿದೆ. ಈ ರೀತಿಯಲ್ಲಿ ಪ್ರಸ್ತುತ ಅಧ್ಯಯನವು ಕಂಚ್ಯಾಣಿಯವರ ಶಿಶು ಕಾವ್ಯದ ಮೌಲ್ಯ ಹಾಗೂ ವಿಶ್ಲೇಷಣೆಯನ್ನು ಹೊಂದಿದೆ.

ಕಂಚ್ಯಾಣಿಯವರ ಶಿಶು ಕಾವ್ಯ ವೈವಿಧ್ಯಮಯವಾದುದು. ಅವರ ಶಿಶು ಕವಿತೆಗಳು, ಕಥೆಗಳು ಮಕ್ಕಳ ಸಾಹಿತ್ಯಕ್ಕೆ ಸಲ್ಲಿಸಿದ ಅಪಾರ ಕೊಡುಗೆಯಾಗಿವೆ. ನಮ್ಮ ನಾಡಿನ ಶಿಸು ಸಾಹಿತಿಗಳಲ್ಲಿ ಶ್ರೇಷ್ಠರಾದ ಕಂಚ್ಯಾಣಿಯವರ ೩೦ ಕೃತಿಗಳು (೧೨ ಕವಿತೆಗಳ ಸಂಕಲನ ಮತ್ತು ೮ ಕಥಾ ಸಂಕಲನಗಳು) ಶಿಶು ಸಾಹಿತ್ಯದ ಇತಿಹಾಸದಲ್ಲಿ ಶಿಖರಪ್ರಾಯವಾಗಿ ನಿಂತಿವೆ. ಈ ಕಿರು ಸಂಶೋಧನೆಯಲ್ಲಿ ಕಂಚ್ಯಾಣಿಯವರು ಶಿಶು ಕಾವ್ಯದ ಸೆಲೆಯನ್ನು ಇತಿ-ಮಿತಿಯಾಗಿ ರೂಪಿಸಲಾಗಿದೆ.

ಕಾವ್ಯದ ಅಥವಾ ಶಿಶು ಕಾವ್ಯದ ಅಧ್ಯಯನ ತೀರ ಸುಲಭವಾದುದಲ್ಲ. ಹಲವು ಮುಖಗಳಿಂದ ಶಿಶು ಕಾವ್ಯವನ್ನು ಕುರಿತು ಅಧ್ಯಯನಕ್ಕೆ ತೊಡಗಿಕೊಂಡರೂ ಎಲ್ಲವೂ ಪೂರ್ಣಗೊಳಿಸಲು ಸಾಧ್ಯವಿಲ್ಲ.

ಕಂಚ್ಯಾಣಿಯವರ 'ಶಿಶು ಕಾವ್ಯ' ಮೌಲ್ಯ-ವಿಶ್ಲೇಷಣೆ ಮಾಡುವದು, ಭಾಷೆ, ಶೈಲಿಗಳಿಂದ ಕವಿತೆಗಳ ವರ್ಗೀಕರನಗೊಳಿಸುವದು ಅಷ್ಟೇ ಕಠಿಣವಾದುದು.

ಕಂಚ್ಯಾಣಿಯವರ ಶಿಶು ಕಾವ್ಯದ ಕೇಂದ್ರ ಬಿಂದು ವಾತ್ಸಲ್ಯಭಾವ. ಅವರ ಸಮಗ್ರ ಶಿಶು ಕಾವ್ಯ ಅಧ್ಯಯನಕ್ಕೆ ಹೊಂದುವಂತೆ ವಿಧಾನವನ್ನು ರೂಪಿಸಿ, ಆ ಪರಿಮಿತಿಯಲ್ಲಿ ಈ ಅಧ್ಯಯನ ಸಂಯೋಜನೆ ಹೊಂದಿದೆ.

# ಅಧ್ಯಾಯ ಎರಡು

[illegible]

# "ಕಂಚ್ಯಾಣಿಯವರ ಶಿಶು ಕಾವ್ಯ"

## ಅಧ್ಯಾಯ.೨ : ಕಂಚ್ಯಾಣಿಯವರ ಬದುಕು ಮತ್ತು ಕಾವ್ಯ

(ಪರಂಪರೆ ಹಾಗೂ ವ್ಯಕ್ತಿಚಿತ್ರಣ)

"ಬರುವದೇನುಂಟೊಮ್ಮೆ ಬರುವ ಕಾಲಕೆಬಹುದು
ಯಾರ ಇಚ್ಛೆಗೂ ಅದುವು ನಡೆಯುವದಿಲ್ಲ
ಈಶೀಚ್ಛೆ ಕರೆದಾಗ ಅದರ ಸುಗ್ಗಿಯ ಕಾಲ
ಸ್ವೇಚ್ಛೆಯಲಿ ತರುಬಿದರು ತಡೆಯುವುದಿಲ್ಲ"

ಮಧುರಚೆನ್ನರ ಕಾವ್ಯದ ಸಾಲುಗಳನ್ನು ನೆನೆದುಕೊಂಡು ತಮ್ಮ ಅನುಭವದ ಪಾಕದಿಂದ ವರಕವಿ ಬೇಂದ್ರೆಯವರು ನುಡಿದಂತೆ, ಕಾವ್ಯ ಯಾರ ಇಚ್ಛೆಗೂ ಅದು ನಡೆಯುವದಿಲ್ಲ, ಸ್ವೇಚ್ಛೆಯಲಿ ತರುಬಿದರೂ ನಿಲ್ಲುವದಿಲ್ಲ. ಈಶೇಚ್ಛೆ ಕರೆದಾಗಿನ ಸುಗ್ಗಿಯ ಕಾಲದಂತೆ, ತುಂಬಿ ಹರಿಯುವ ಹೊಳೆಯಂತೆ, ಧುಮ್ಮಿಕುವ ಜಲಪಾತದಂತೆ ಕಾವ್ಯದ ಸ್ವರೂಪ. ಅಂಥ ಸ್ವರೂಪದ ಸೆಲೆ ವಿಜಾಪುರ ಜಿಲ್ಲೆಯ ಶಿಶು ಸಾಹಿತ್ಯ ಹೊಂದಿರುವದು ವಿಸ್ಮಯ ಹಾಗೂ ಚಿನ್ಮಯ.

ಕರ್ನಾಟಕದ ಉತ್ತರ ಭಾಗದ ಕೊನೆಯಲ್ಲಿರುವ ವಿಜಾಪುರ ಜಿಲ್ಲೆ ಅಷ್ಟೊಂದು ಅಭಿವೃದ್ಧಿಯನ್ನು ಹೊಂದದ, ಬರಗಾಲದ ಬವಣೆಯಿಂದ ಹಿಂದುಳಿದ ಪ್ರದೇಶವಾಗಿ ಹಣೆಪಟ್ಟಿ ಕಟ್ಟಿಕೊಂಡರೂ ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ, ಆಧ್ಯಾತ್ಮಿಕವಾಗಿ ಹಾಗೂ ಕಲೆಯ ನೆಲೆಯಾಗಿ ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಂಡಿದೆ.

ನಿಂಬಾಳದ ಗುರುದೇವ ರಾನಡೆಯವರು, ಲಚ್ಯಾಣದ ಸಿದ್ಧಲಿಂಗ ಯತಿಗಳು, ಹಲಸಂಗಿಯ ಅನುಭಾವಿ ಮಧುರಚೆನ್ನರು, ಬಂಥನಾಳದ ಶಿವಯೋಗಿ ಸಂಗನಬಸವ ಸ್ವಾಮಿಗಳು, ವೇದಾಂತ ಕೇಸರಿ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಮೊದಲಾದ ಮಹಾನುಭಾವರ ಆಧ್ಯಾತ್ಮಿಕ ನೆಲೆಯಾದರೆ, ಮಧುರಚೆನ್ನರು, ಶ್ರೀರಂಗರು, ರಂ.ಶ್ರೀ. ಮುಗುಳಿಯವರು, ಸ.ಸ. ಮಾಳವಾಡರು, ಫ.ಗು. ಹಳಕಟ್ಟಿಯವರು, ಸಿಂಪಿ ಲಿಂಗಣ್ಣನವರು, ಕಂದಗಲ್ಲ ಹಣಮಂತರಾಯರು ಮೊದಲಾದ ಸಾಹಿತಿಗಳು ಸಾಹಿತ್ಯದ ಮರವನ್ನು ನೆಟ್ಟರೆ, ಮುಂದೆ ಬಂದ ಮಕ್ಕಳ ಸಾಹಿತಿಗಳ ಗುಂಪು ವಿಜಾಪುರ ಜಿಲ್ಲೆ 'ಮಕ್ಕಳ ಸಾಹಿತ್ಯದ ತವರು' ಎಂದು ಹೆಸರುವಾಸಿಯಾಗಲು ತನು-ಮನದಿಂದ ದುಡಿದು ಶಿಶು ಸಾಹಿತ್ಯದ ಛಾಪನ್ನೇ ಮೂಡಿಸಿದ್ದಾರೆ.

ಆಧುನಿಕ ಕನ್ನಡ ಸಾಹಿತ್ಯ ಹಲವಾರು ಘಟ್ಟಗಳಾಗಿ ಬೆಳೆದುಬಂದಿದೆ. ಕನ್ನಡದ ನವೋದಯ ಸಾಹಿತ್ಯ ೧೯೨೧ ರಿಂದ ಪ್ರಾರಂಭಗೊಂಡರು ಅದರ ಹಿಂದೆ ಆಧುನಿಕತೆಯ ಪ್ರಭಾವ-ಪ್ರೇರಣೆ ಇತ್ತೆಂದು ಹೇಳಲೇಬೇಕು.

ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ-ದಲಿತ ಎಂಬ ನಾಲ್ಕು ಪ್ರಕಾರಗಳಲ್ಲಿ ಸಾಗಿ ಬಂದ ಹೊಸಗನ್ನಡ ಸಾಹಿತ್ಯ ತನ್ನ ಬೆಳವಣಿಗೆಯನ್ನು ತೋರಿಸಿಕೊಟ್ಟಿದೆ. ಇಷ್ಟೊಂದು ವಿವಿಧ ರೀತಿಯ ಹಾಗೂ ಸಮೃದ್ಧವಾದ ಸಾಹಿತ್ಯ ಹಿಂದಿನ ಯಾವ ಶತಮಾನದಲ್ಲಿಯೂ ಕಂಡುಬರಲಿಲ್ಲವೆಂದೇ ತೋರುತ್ತದೆ.

ಪಾಶ್ಚಾತ್ಯ ರೋಮ್ಯಾಂಟಕ್ ಸಂಪ್ರದಾಯದ ಪ್ರೇರಣೆ ಪಡೆದ ನವೋದಯ ಸಾಹಿತ್ಯ ಹಲವಾರು ತಿರುವುಗಳನ್ನು ಸುತ್ತಿ ನಮ್ಮ ಸಂಸ್ಕೃತಿಯಿಂದಲೇ ಪೋಷಿತಗೊಂಡಿದೆ-ಎಂಬುದು ನಿರ್ವಿವಾದ. ಇದು ಅನುಸಂಧಾನ ಮಾರ್ಗವೂ ಹೌದು. ವರ್ಡ್ಸವರ್ಥ, ಶೆಲ್ಲಿ, ಬೈರನ್, ಟೆನಿಸಿನ್ ಮೊದಲಾದವರಿಂದ ಚಾಲನೆ ಪಡೆದುಕೊಂಡಿತಾದರೂ ಪಂಪ, ಬಸವಣ್ಣ, ಹರಿಹರ; ಕುಮಾರವ್ಯಾಸ, ಸರ್ವಜ್ಞ, ರತ್ನಕರವರ್ಣಿ ಮೊದಲಾದ ಅನುಭವಿಗಳು ನಮ್ಮ ಪರಂಪರೆಯ ಆಧಾರದ ಸ್ಥಂಭಗಳು ಎಂದರೆ ತಪ್ಪಾಗದು.

ಭಾವಪರವಶತೆ, ಕನುಸುಗಾರಿಕೆ, ಆದರ್ಶಪ್ರಿಯತೆ, ವಾತ್ಸಲ್ಯಭಾವ ಮೊದಲಾದವು ನವೋದಯ ಸಾಹಿತ್ಯ ಸಾಧನೆಯ ಆಕರಗಳಾಗಿ ಕಾಣುತ್ತವೆ. ಇದೇ ಮಾರ್ಗದಲ್ಲಿ ಕವಿತೆ-ಕಥಗಳು ಮಕ್ಕಳ ಸಾಹಿತ್ಯದಲ್ಲಿ ಬೆಳಕು ಕಂಡವು. ಮಕ್ಕಳಿಗಾಗಿ ಹುಟ್ಟಿಕೊಂಡ ಸಾಹಿತ್ಯ ಅಪಾರವಾಗಿ ಬೆಳೆದದ್ದು ಉತ್ತರ ಕರ್ನಾಟಕದಲ್ಲಿ. ಅದರಲ್ಲು ಮಕ್ಕಳ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ ಉಲ್ಲೇಖನಾರ್ಹವಾದುದು. ಸಿಸು ಸಂಗಮೇಶ, ಶಂ.ಗು.ಬಿರಾದಾರ, ಈಶ್ವರಚಂದ್ರ ಚಿಂತಾಮಣಿ, ಪರಶುರಾಮ ಚಿತ್ರಗಾರ, ಶರಣಪ್ಪ ಕಂಚ್ಯಾಣಿ, ಬಾ.ಇ. ಕುಮತೆ, ಸಂಗಮೇಶ ಬಾಗಲಕೋಟ, ಫ.ಗು. ಸಿದ್ಧಾಪುರ, ಜಂಬುನಾಥ ಕಂಚ್ಯಾಣಿ, ಚಂದ್ರಗೌಡ ಕುಲಕರ್ಣಿ, ಹ.ಮ. ಪೂಜಾರ ಮೊದಲಾದವರು ಸಾಲು-ಸಾಲಾಗಿ ಬೆಳೆಯುತ್ತಲಿದ್ದಾರೆ.

ಮಕ್ಕಳ ಸಾಹಿತ್ಯದಲ್ಲಿ ತನ್ಮಯತೆಯಿಂದ ನವೀನ ಪ್ರಯೋಗ ಮಾಡುತ್ತ ತಮ್ಮನ್ನು ಅರ್ಪಿಸಿಕೊಂಡ ಸಿಸು ಸಂಗಮೇಶರ ಕಾರ್ಯವ್ಯಾಪ್ತಿ ವರ್ಣನಾತೀತ. ರಾಜ್ಯ, ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾದ ಶಂ.ಗು. ಬಿರಾದಾರ ಅವರು ಅಪ್ರತಿಮ ಪ್ರತಿಭಾವಂತರೆಂಬ ಹೆಗ್ಗಳಿಕೆಗೆ ಪಾತ್ರರಾದವರು. ಇವರಲ್ಲಿ ಕಲ್ಪನಾಶಕ್ತಿ, ಚಿಂತನಶೀಲತೆ ಹುರಿಗೊಂಡು ಮಕ್ಕಳ ಸಾಹಿತ್ಯ ಉಜ್ವಲ ಭವಿಷ್ಯ ಕಂಡಿದೆ. ಚಿಂತಾಮಣಿಯ ಈಶ್ವರಚಂದ್ರರು ಸಹ ಇದೇ ಮಾರ್ಗದ ಸಾಧಕರು. ಇವರು ಜಾನಪದ ಮತ್ತು ಶಿಶು ಸಾಹಿತ್ಯಕ್ಕೆ ಸಲ್ಲಿಸಿದ ಕೊಡುಗೆ ಅಪಾರ. ಸದ್ದು-ಗದ್ದಲವಿಲ್ಲದೆ ಸಾಹಿತ್ಯ ಸೇವೆಯಲ್ಲಿ ನಿರತರಾಗಿರುವ ಪರಶುರಾಮ ಚಿತ್ರಗಾರರು ಉತ್ತಮ ಶಿಶು ಸಾಹಿತ್ಯ ನಿರ್ಮಾಪಕರು.

ಪ್ರಾಮಾಣಿಕತೆ, ವಾತ್ಸಲ್ಯ, ಪ್ರಯತ್ನಶೀಲತೆಗೆ ಹೆಸರಾದ ಕಂಚ್ಯಾಣಿ ಶರಣಪ್ಪನವರ ಮಕ್ಕಳ ಕವಿತೆಗಳು ವಸ್ತು, ಭಾಷೆ, ಲಯ, ಕಲ್ಪನೆ ಮುಂತಾದವುಗಳಿಂದ ಗಮನ ಸೆಳೆಯುತ್ತವೆ. ಇವರ ಕವಿತ್ವ ಶಿಶು ಕವಿತೆಗಳಲ್ಲಿ ಸ್ಫಟಿಕದ ಹರಳಿನಂತೆ, ಕೋಲ್ ಮಿಂಚಿನಂತೆ ಪ್ರಕಾಶಮಾನವಾಗಿ ಬಿಂಬಿತವಾಗಿದೆ. ಇದೇ ಹಾದಿಯಲ್ಲಿ ಸಾಗಿರುವ ಕಂಚ್ಯಾಣಿ ಶರಣಪ್ಪನವರ ಮಗನಾದ ಜಂಬುನಾಥ ಕಂಚ್ಯಾಣಿ, ಚಂದ್ರಗೌಡ ಕುಲಕರ್ಣಿ, ಫ.ಗು. ಸಿದ್ಧಾಪೂರ ಮೊದಲಾದವರು ಯುವ ಪೀಳಿಗೆಯಲ್ಲಿ ಹೊಸ ಉತ್ಸಾಹವನ್ನು ತುಂಬಿ, ಶಿಶು ಸಾಹಿತ್ಯ ಪ್ರಗತಿಯನ್ನು ಹೊಂದಲು ಪ್ರಾಮಾಣಿಕ ಸೇವೆಯಲ್ಲಿ ನಿರತರಾಗಿದ್ದಾರೆ.

ವಿಜಾಪುರ ಜಿಲ್ಲೆಯ ಮಕ್ಕಳ ಸಾಹಿತ್ಯ ಪರಂಪರೆಯಲ್ಲಿ ಎಲೆ ಮರೆಯ ಕಾಯಿಯಂತೆ ಇದ್ದರೂ ಹೂವಿನ ಸುಗಂಧ ನಾಲ್ಕೂ ದಿಕ್ಕಿಗೂ ಹರಡುವ ಹಾಗೆ ಕಾವ್ಯ ಕೃಷಿ ಮಾಡಿರುವ ಕಂಚ್ಯಾಣಿ ಶರಣಪ್ಪನವರು, ಎಂಬತ್ತರ ಇಳಿ ವಯಸ್ಸಿನಲ್ಲೂ ಯುವಕರಲ್ಲಿಯ ಉತ್ಸಾಹ-ಹುಮ್ಮಸ್ಸು ತುಂಬಿಕೊಂಡ ಮೃದು ಭಾಷೆಯ ಸರಳ ಸ್ವಭಾವದ ವ್ಯಕ್ತಿ.

ಬಾಲ್ಯದ ನೆನಪುಗಳನ್ನು ಯಾರು ನೆನಪಿಸಿಕೊಂಡು ಮೆಲುಕಾಡಿಸುದರೋ ಅವರು ಮಾತ್ರ ಕವಿಗಲಾಗಬಲ್ಲರು ಎಂಬುದಾಗಲಿ, ಶಿಕ್ಷಕರೇ ಮಕ್ಕಳ ಸಾಹಿತ್ಯವನ್ನು ಉತ್ತಮವಾಗಿ ರಚಿಸಲು ಸಾಧ್ಯವೆಂಬುದಾಗಲಿ ನಿರ್ವಿವಾದ. ಇದಕ್ಕೆ ಮಕ್ಕಳ ಒಡನಾಟವೆ ಕಾರಣವಾಗಿರುತ್ತದೆ. ಈ ಮಾತು ಹೆಚ್ಚಾಗಿ ಮಕ್ಕಳ ಸಾಹಿತಿಗಳಿಗೆ ಅನ್ವಯಿಸುತ್ತದೆ. ಕಂಚ್ಯಾಣಿಯವರು ತಮ್ಮ ಬಾಲ್ಯದ ಹಲವಾರು ನೆನಪುಗಳನ್ನು ತಮ್ಮ ಶಿಶು ಕಾವ್ಯದಲ್ಲಿ ತೆರೆದುಕೊಂಡಿದ್ದಾರೆ. ತಂದೆ-ತಾಯಿಗಳು, ಎಳೆಯ-ಗೆಳೆಯರೊಡನೆ ಸವಿದ-ಅನುಭವಿಸಿದ ಆನಂದ ಗಳಿಗೆಗಳನ್ನು ಕಾವ್ಯದುದ್ದಕ್ಕೂ ಹೆಣೆದಿದ್ದಾರೆ. ಆಡು ನುಡಿಯ ಬೆಡಗಿನಲ್ಲಿ ಒಡಮೂಡಿಸಿದ್ದಾರೆ.

"ಪ್ರಪಂಚಕ್ಕೆ ಮಗು ಹೊಸದು ಅದು ನಕ್ಕರೂ ಚಂದ ಅತ್ತರೂ ಚಂದ. ಅದರ ಸಿಟ್ಟು, ಸೆಡವು, ತುಂಟಾಟ, ಬಂಡಾಟ ಎಲ್ಲವೂ ಸೊಗಸನ್ನು ನೀಡುತ್ತದೆ. ಮಗುವಿಗೂ ಕೂಡ ಪ್ರಪಂಚ ತೀರ ಹೊಸದು ಅಷ್ಟೇ ಅದ್ಭುತ ಮಗು ಬೆಳೆದಂತೆ ಹೆಜ್ಜೆ ಹೆಜ್ಜೆಗೂ ಬೆರಗನ್ನು ಮೂಡಿಸುತ್ತದೆ. ಕುತೂಹಲವನ್ನು ಕೆರಳಿಸುತ್ತದೆ. ಹೊಸತನ ಕಂಡಾಗ ಮುಗ್ಧ ಪ್ರಶ್ನೆಗಳು ಮಗುವಿನ ಮನದಾಳದಲ್ಲಿ ಮೂಡುತ್ತವೆ. ಹೊಟ್ಟೆ ಹಸಿದಾಗ ಅತ್ತು-ಕರೆದು ತಾಯಿಯ ಎದೆ ಹಾಲು ಕುಡಿದು, ಕೈ ತುತ್ತು ತಿಂದು ತೃಪ್ತಿ ಪಡುತ್ತದೆ. ತಾನು ಅರಿಯದ ಪರಿಸರದ ಬಗ್ಗೆ ಕುಟುಕಿ-ಕುಟುಕಿ ಹಲವಾರು ಪ್ರಶ್ನೆಗಳನ್ನು ಕೆದಕುತ್ತದೆ. ತಂದೆ-ತಾಯಿ ಕೊಟ್ಟ ಗುಟುಕಿನಂತಹ ಉತ್ತರಗಳಿಂದ ನೆತ್ತಿಯನ್ನು ತುಂಬಿಕೊಳ್ಳುತ್ತದೆ.

ಇಂಥ ಮುಗ್ಧ ಮನಸ್ಸಿನ ಹಿರಿಯವಯಸ್ಸಿನ ಕಂಚ್ಯಾಣಿಯವರಲ್ಲಿ ಶಿಶುಕಾವ್ಯ ತುಂಬಿ ಹೊರಸೂಸಿದೆ. ಅವರಿಗೆ ಶಿಶು ಕಾವ್ಯದ ಸೆಲೆ ಕರಗತವಾಗಲು ಮಕ್ಕಳ ಮೇಲಿನ ಮಮತೆಯ ಒಡಲನುಡಿಯೇ ಕಾರಣೀಭೂತವಾದುದು.

ಕಂಚ್ಯಾಣಿಯವರದು ಸಂವೇದನಶೀಲ ಮನಸ್ಸು. ಹೀಗಾಗಿ ಅವರ ಬದುಕಿನ ಪರಿಸರವೇ ಅವರನ್ನು ಮಕ್ಕಳ ಕವಿಯಾಗಿ ರೂಪುಗೊಳ್ಳವಲ್ಲಿ ಮಹತ್ವದ ಪಾತ್ರ ವಹಿಸಿದೆ. ಮುದ್ದೇಬಿಹಾಳ ತಾಲೂಕಿನ ಸರೂರದ ಪರಿಸರವೇ ಅಂತಹದ್ದು. ಕಂಚ್ಯಾಣಿಯವರ ತಾಯಿ ಜನಪದ ಹಾಡುಗಳ ಖಣಿ ಎಂದೇ ಹೇಳಬಹುದು. ಬೀಸುವ-ಕುಟ್ಟುವ ಹಾಡುಗಳನ್ನು ಕರಗತಮಾಡಿಕೊಂಡಿರುವ ರುದ್ರಮ್ಮರ ಪ್ರಭಾವ ಕಂಚ್ಯಾಣಿಯವರ ಮೇಲೆ ಆಳವಾಗಿ ಬೀರಿದೆ.

ಜೊತೆಗೆ ಶಿಕ್ಷಕ ವೃತ್ತಿಯ ಅನುಭವ, ಮಕ್ಕಳ ಒಡನಾಟದಿಂದ ಗಟ್ಟಿಗೊಂಡ ಶಿಶುಕಾವ್ಯ ಮಲ್ಲಿಗೆ ಚಲ್ಲಿದಂತೆ, ಕಂಪು ಹೊಮ್ಮಿದಂತೆ ನಾಡೆಲ್ಲ ತುಂಬಿಕೊಂಡಿದೆ. ಈ ಹಿನ್ನಲೆಯಲ್ಲಿ ಕವಿಯ ಬದುಕಿನ ಹೆಜ್ಜೆಗಳನ್ನು ಗುರುತಿಸಿ ಕಾವ್ಯದ ಧಾರೆಯನ್ನು ಶೋಧಿಸುವದು ಹೆಚ್ಚು ಸೂಕ್ತವೆನಿಸುವದು.

---

೧. ಹಾಗಲ್ಲಪ್ಪಾ ನಾ ಕೇಳಿದ್ದು. ಲೆ. ಸ್ವಾಮಿನಾಥ : ಮುನ್ನುಡಿ : ಕಂಚ್ಯಾಣಿ ಶರಣಪ್ಪ. ಶುಭದ ಪ್ರಕಾಶನ ಬೆಂಗಳೂರು.

# : ಬದುಕಿನ ಹೆಜ್ಜೆಗಳು : ಕಾವ್ಯದ ಗೆಜ್ಜೆಗಳು :

ಕಂಚ್ಯಾಣಿಯವರ ಮನೆತನ ಬದುಕು ಬವಣೆಯ ಆಗರದಲ್ಲಿ ಸಾಗಿಬಂದ ಹಾಯಿ ದೋಣಿ. ಭೂತಾಯಿಯ ಮಡಿಲಿನಲ್ಲಿ ದುಡಿದು ದಣಿವರಿಯದ ಒಕ್ಕಲುತನದ ಕುಟುಂಬ. ಮುದ್ದೇಬಿಹಾಳ ತಾಲೂಕಿನ ಸರೂರ ಗ್ರಾಮ ಬಯಲು ಸೀಮೆ ಪ್ರದೇಶವಾದರೂ ಕೃಷಿ ಚಟುವಟಿಕೆಗೆ ಹೇಳಿಮಾಡಿಸಿದ ನೆಲ. ನಿಸರ್ಗ ಸಹಜ ಸುಂದರ ತಾಣದಲ್ಲಿ ಬೆವರು ಹನಿಸಿ ದುಡಿಯುತ್ತಿರುವ ಶಿವಸಂಗಪ್ಪ ಹಾಗೂ ರುದ್ರಮ್ಮ ದಂಪತಿಗಳ ಉದರದಲ್ಲಿ ಕಂಚ್ಯಾಣಿ ಶರಣಪ್ಪನವರ ಜನನವಾದುದು ೩ ಜನವರಿ ೧೯೩೦ ರಂದು. ಶವಸಂಗಪ್ಪನವರಿಗೆ ಇಬ್ಬರು ಗಂಡು ಮಕ್ಕಳು ಮೊದಲನೆಯವರಾದ ರೇವಣಸಿದ್ದಪ್ಪ ಕೃಷಿ ಕಾರ್ಯವನ್ನು ಮುಂದುವರೆಸಿಕೊಂಡು ಬಂದರೆ, ಶರಣಪ್ಪನವರು ಕೊನೆಯವರು.

ಕೃಷಿ ಕಾಯಕದ ದುಡಿಮೆಯಲ್ಲಿ ಹೊಟ್ಟೆ ತುಂಬಿಸಿಕೊಳ್ಳುವದೇ ಕಠಿಣ ಅಂಥದರಲ್ಲಿ ಶಾಲೆ ಕಲಿಯುವದು ತುಂಬಾ ದುಸ್ತರ. ಆದರೆ ಮಗನ ಕಲಿಯುವ ಹಂಬಲದ ಆಶೆ ಚಿರುಗಿದಾಗ ತಂದೆ ಆ ಸಸಿಯನ್ನು ಚಿವುಟಿ ಹಾಕಲಿಲ್ಲ 'ಬೆಳೆಯ ಸಿರಿ ಮೊಳಕೆಯಲ್ಲಿ' ಎನ್ನುವಂತಿದ್ದ ಶರಣಪ್ಪನವರ ಪ್ರತಿಭೆಯನ್ನು ಗಮನಿಸಿ ತಂದೆ ನೀರೆರೆದು ಬೆಳೆಸಿದರು.

ಅಂದು ವಿದ್ಯೆ ಪಡೆಯುವದು ಪ್ರಯಾಸಕರವಾಗಿತ್ತು. ಹಲವು ಗ್ರಾಮಗಳಲ್ಲಿ ವಿದ್ಯೆಗಾಗಿ ಅಲೆದಾಟ. ಛಲ ಬಿಡದ ಹಟವಾದಿ ಬಾಲಕ ಶರಣಪ್ಪನವರು ಕಲಿಕೆಯ ಹಂಬಲದಿಂದ ಏಳನೆಯ ತರಗತಿಯನ್ನು ಮುಗಿಸಿದರು.

ಹೀಗೆ ಮುದುವರೆದ ಕಂಚ್ಯಾಣಿಯವರ ಶಿಕ್ಷಣ ಹಲವು ಮೆಟ್ಟಿಲುಗಳನ್ನು ದಾಟಿ, ಶಿಕ್ಷಕರ ತರಬೇತಿಯನ್ನು ವಿಜಾಪುರದಲ್ಲಿ ಮುಗಿಸಿದರು. ಜಾಣ, ಪ್ರತಿಭಾವಂತ ಗುಣ-ಸ್ವಭಾವದ ಕಂಚ್ಯಾಣಿ ಶರಣಪ್ಪನವರು ೧೯೪೯ ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆಗೆ ಸೇರಿದರು. ಶಿಕ್ಷಕ ವೃತ್ತಿಯನ್ನು ಆರಂಭಿಸಿದ್ದು ತಮ್ಮ ಜನ್ಮ ಸ್ಥಳವಾದ ಸರೂರ ಗ್ರಾಮದಲ್ಲಿ. ನಂತರ ಕವಡಿಮಟ್ಟಿ, ಇಂಗಳಗಿ, ಚಬನೂರು, ದಿಂಡವಾರ, ಬಸವನ ಬಾಗೇವಾಡಿ, ತೆಲಗಿ ಮತ್ತು ಮಲಘಾಣಗಳಲ್ಲಿ ಶಿಕ್ಷಕ ವೃತಿಯನ್ನು ಪೂರೈಸಿದರು.

ಮಕ್ಕಳ ಮನಸ್ಸಿನ ತುಂಬು ಹೃದಯದ ಕಂಚ್ಯಾಣಿಯವರು ೩೯ ವರ್ಷಗಳ ಅವಿರತವಾದ ಪ್ರಾಥಮಿಕ ಶಾಲಾ ಶಿಕ್ಷಕ ಸೇವೆಯಿಂದ ೧೯೮೮ ರಲ್ಲಿ ನಿವೃತ್ತಿ. ಯಾರಿಗೂ ಕೈ ಒಡ್ಡದ ಸ್ವಾಭಿಮಾನಿ ಮನೋಧರ್ಮದ ಛಲಗಾರ ಕಂಚ್ಯಾಣಿ ಶರಣಪ್ಪನವರು ನಿಜವಾಗಿಯೂ ಪ್ರಯತ್ನಶೀಲ ಸಾಧಕರು.

ಕಂಚ್ಯಾಣಿಯವರ ಪೂರ್ವಜರು ಮುದ್ದೇಬಿಹಾಳ ತಾಲೂಕಿನ ಸರೂರ ಗ್ರಾಮದಲ್ಲಿ ಹೊಲ ಉಳಿಮೆ ಮಾಡುತ್ತ ಜೀವನ ಸಾಗಿಸುತ್ತಿದ್ದವರು, ಇವರ ತಾತ ಮಲ್ಲಪ್ಪ ಇವರಿಗೆ ಇಬ್ಬರು ಗಂಡ ಮಕ್ಕಳು ಮೊದಲನೆಯವರು ಜಂಬಣ್ಣ ಎರಡನೆಯವರು ಶಿವಸಂಗಪ್ಪ. ಮಧ್ಯಮ ವರ್ಗದ ಕುಟುಂಬವಾದ ಕಾರಣ ಹೆಚ್ಚು ಪ್ರಜ್ಞಾವಂತ, ಸುಶಿಕ್ಷಿತ ಶಿಕ್ಷಣ ಪಡೆದುಕೊಳ್ಳುವದು ಅಸಾಧ್ಯವಾದ ಸಂದರ್ಭ. ಇಂಥ ಪರಿಸರದಲ್ಲಿ ಕಂಚ್ಯಾಣಿ ಶರಣಪ್ಪನವರು ಶಿವಸಂಗಪ್ಪ ಹಾಗೂ ರುದ್ರಮ್ಮ ಇವರ ಮಗನಾಗಿ ಜನ್ಮತಾಳಿದವರು.

ಜಮೀನು ನೋಡಿಕೊಳ್ಳುವದು ವಂಶ ಪರಂಪರೆಯಿಂದ ಬಂದುದರಿಂದ ಒಕ್ಕಲುತನ ಸಹಜವಾಗಿತ್ತು. ಇದರಿಂದಾಗಿ ಶಿವಸಂಗಪ್ಪನವರು ನಾಲ್ಕನೆಯ ತರಗತಿಯವರೆಗೆ ಓದಿ, ಬರಹ ಬಲ್ಲವರಾಗಿದ್ದು ಕೃಷಿಯಲ್ಲಿ ತೊಡಗಿಕೊಂಡಿದ್ದರು. ತಾಯಿ ರುದ್ರಮ್ಮಳು ಸಹ ದನಕರುಗಳನ್ನು ಸಾಕಿ, ಮೇಯಿಸಿ ಹೈನುಗಾರಿಕೆಯನ್ನು ಮಾಡುವಲ್ಲಿ ಸಂತೃಪ್ತ ಬದುಕನ್ನು ಕಂಡುಕೊಂಡವಳು.

"ಏನು ಬಂದಿರಿ ಹದುಳವಿದ್ದಿರೆ ?
ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ ?
ಕುಳ್ಳಿರೆಂದರೆ ನೆಲ ಕುಳಿ ಹೋಹುದೆ ?
ಒಡನೆ ನುಡಿದರೆ ಶಿರ ಹೊಟ್ಟೆಯೊಡೆವುದೆ ?
ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದಡೆ
ಕೆಡಹಿ ಮೂಗ ಕೊಯ್ಯದೆ ಮಾಣ್ಬನೆ ಕೂಡಲಸಂಗಮದೇವನು". ?

ಎಂಬ ಬಸವಣ್ಣನವರ ನುಡಿಯಂತೆ ನಡೆಯುವ ದಾಂಪತ್ಯ ಜೀವನ ಇವರದು. "ಲಿಂಗವಂತರು ತಾವಾದ ಬಳಿಕ ಅನುಭವದ ವಚನಗಳ ಹಾಡಿ ಸುಖ-ದುಖಗಳಿಗೆ ಅಭೇದ್ಯವಾಗಿರಬೇಕು" ಎಂದು ಸಿದ್ಧರಾಮನ ಮಾತು ಇವರಿಗೆ ಮಾರ್ಗದರ್ಶಕ. ಇಂಥ ತಂದೆ-ತಾಯಿಗಳ ಆರೈಕೆಯಲ್ಲಿ ಬೆಳೆದ ಕಂಚ್ಯಾಣಿಯವರು 'ಬೀಜದೊಳು ಅಂಕುರ ಹೊಳೆಯುಂತೆ' ತೇಜಸ್ಸಿನ, ಕುತೂಹಲ ಮನದ, ಕ್ರೀಯಾಶೀಲತೆಯ ಗುಣಗಳಿಂದ ಮೊಳಕೆಯೊಡೆದವರು.

ಶಿವಸಂಗಪ್ಪ ಮತ್ತು ರುದ್ರಮ್ಮ ದಂಪತಿಗಳಿಗೆ ಒಟ್ಟು ಐದು ಜನ ಮಕ್ಕಳು. ಇವರ ಕೊನೆಯ ಮಗ ಕಂಚ್ಯಾಣಿ ಶರಣಪ್ಪನವರು. ನೀಲಮ್ಮ ಶಿವಗಂಗಮ್ಮ, ಸಿದ್ದಮ್ಮ ಮೂವರು ಅಕ್ಕಂದಿರು ಹಾಗೂ ಅಣ್ಣ ರೇವಣಸಿದ್ದಪ್ಪ. ಈ ಸಹೋದರ-ಸಹೋದರಿಯರು ಶಿಕ್ಷಣ ಪಡೆದಿರುವದು ಅಷ್ಟಕಷ್ಟೆ ಅಂದರೆ, ಕೇವಲ ಮೂರನೆಯ ತರಗತಿ ಮಾತ್ರ.

ಕಂಚ್ಯಾಣಿಯವರು ಕೊನೆಯ ಮಗನಾಗಿರುವದರಿಂದ ಎಲ್ಲರ ಪ್ರೀತಿಯನ್ನು ಪಡೆದವರು. ಹಾಗೆಯೇ ಇವರೂ ಸಹ ಎಲ್ಲರೊಡನೆ ಪ್ರೀತಿಯಿಂದ ಒಡನಾಡಿಯಾಗಿದ್ದವರು. ಆದರೂ ಸಹ ಕಂಚ್ಯಾಣಿಯವರು ಬಾಲ್ಯದಲ್ಲಿ ಶಕ್ತ ಆರೋಗ್ಯವನ್ನು ಹೊಂದಿದವರಲ್ಲ. ಸದಾ ಇವರು ದೈಹಿಕ ತೊಂದರೆಗಳಿಗೆ, ರೋಗ-ರುಜಿನಗಳ ಬಾಧೆಗೆ ಸಿಲುಕಿದವರು. ಇದರಿಂದ ಎಲ್ಲರೂ ಚನ್ನಾಗಿ ಆರೈಕೆ ಮಾಡಿ ಸಣಕಲಾಗಿ ಬೆಳೆದವರು ಎಂದರೆ ತಪ್ಪಾಗದು.

ಕಂಚ್ಯಾಣಿಯವರು ಬಾಲ್ಯದಲ್ಲಿಯೇ ಶಿಕ್ಷಕರಾಗಬೇಕೆಂಬ ಹಂಬಲ ಹೊಂದಿದವರು. ಇದೇ ಸಂದರ್ಭದಲ್ಲಿ ಅವರಿಗೆ ದೇಶಭಕ್ತರ ಪ್ರಭಾವ ಅಪಾರವಾದುದು. ಹೀಗಾಗಿ ಓದುವ ಛಲ ಅವರಲ್ಲಿ ಆಗಲೇ ಮೂಡಿತ್ತು. ಕಂಚ್ಯಾಣಿಯವರ ಹುಟ್ಟೂರು ಸರೂರದಲ್ಲಿ ಕೇವಲ ನಾಲ್ಕನೆಯ ತರಗತಿಯವರೆಗೆ ಮಾತ್ರ ಶಾಲೆ ಇದ್ದುದರಿಂದ ಅಲ್ಲಿಯವರೆಗೆ ಕಲಿತು ಒಂದು ವರ್ಷ ಮನೆಯಲ್ಲಿರಬೇಕಾಯಿತು. ಈ ಹಂತದಲ್ಲಿ ಕಂಚ್ಯಾಣಿಯವರು ಗಣಿತ ವಿಷಯವನ್ನು ಬಿಟ್ಟು ಎಲ್ಲದರಲೂ ಇವರೇ ಮುಂದು.

"ಅಂಗಳ ಕಸವನು ಕೂಡಿಸಿ ಅಪ್ಪಗೆ ನೆರವನು ನೀಡುವನು ।
ಅಮ್ಮನ ಜತೆಯಲಿ ಹೂಗಿಡ ಬಳ್ಳಿಗೆ ನೀರನು ಹನಿಸುವನು ।
ಹಲ್ಲನು ತಿಕ್ಕಿ ಜಳಕವ ಮಾಡಿ ಬಟ್ಟೆಯ ಧರಿಸುವನು ।
ನೊರೆನೊರೆ ಹಾಲನು ಗಟಗಟ ಕುಡಿದು ಓದುತ ಕೂಡವನು ॥
ಢಣಢಣ ಗಂಟೆಯ ಸದ್ದನು ಕೇಳಿ ದಡದಡ ಓಡುವನು ।
ಗೆಳೆಯರ ಜತೆಯಲಿ ಆಡುತ ಹಾಡುತ ಶಾಲೆಯ ಕಲಿಯುವನು." ॥ ೧

ಕಂಚ್ಯಾಣಿಯವರು ಬಾಲ್ಯದ ನೆನಪನ್ನು ವ್ಯಕ್ತಪಡಿಸಿ, ಇಂದಿನ ಮಕ್ಕಳಲ್ಲಿ ಜೀವನ ಮೌಲ್ಯಗಳನ್ನು ತುಂಬಲು ಕರೆನೀಡುತ್ತಾರೆ. ಗ್ರಾಮ ಪರಿಸರದ ಕವಿ ತನ್ನ ಒಡನಾಡಿಗಳನ್ನು ಕಾವ್ಯದಲ್ಲಿ ಸೆರೆಹಿಡಿಯುವ ಬಗೆ ಬಲು ಸೊಗಸು.

ಕಂಚ್ಯಾಣಿಯವರ ಕುಟುಂಬದ ಆರ್ಥಿಕ ಸ್ಥಿತಿ ಅಷ್ಟೊಂದು ಉತ್ತಮವಾಗಿರದ ಕಾರಣ ಇವರ ಓದು ಕುಂಠಿತವಾದರೂ, ಬಂಧು ಬಳಗದವರ ಸಹಾಯದಿಂದ ತಾಳಿಕೋಟ, ದಿಂಡವಾರಗಳಲ್ಲಿ ಶಿಕ್ಷಣ ಪಡೆದು ಮುದ್ದೇಬಿಹಾಳದಲ್ಲಿ ಮುಲ್ಕಿ ಪರೀಕ್ಷೆ ಪಾಸುಮಾಡಿದರು. ಹಾಗೆಯೇ ವಿಜಾಪುರದಲ್ಲಿ ಶಿಕ್ಷಕ ತರಬೇತಿ ವಿದ್ಯಾಲಯದಲ್ಲಿ ಪ್ರವೇಶ ಪಡೆದು ಶಿಷ್ಯವೇತನದೊಂದಿಗೆ ೧೯೪೮ ರಲ್ಲಿ ಉತ್ತೀರ್ಣರಾದರು.

ಪೋಲಿಸ ಇಲಾಖೆಯಲ್ಲಿ ನೌಕರಿ ಪಡೆದುಕೊಳ್ಳಬಹುದಾದ ಸಂದರ್ಭ ಇದ್ದರೂ, ಅದನ್ನು ಬಿಟ್ಟು ೧೯೪೮ ರಲ್ಲಿ ಮುದ್ದೇಬಿಹಾಳ ತಾಲೂಕಿನ ಇಂಗಳಗೇರಿ ಗ್ರಾಮದಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಸೇವೆ ಪ್ರಾರಂಭಿಸಿದರು. ಇದು ಕಂಚ್ಯಾಣಿಯವರ ಆಶೆ ನೆರವೇರಿದ ದಿನ, ಸಂತಸದ ಎಂದೂ ಮರೆಯದ ಸಮಯ. ಹೀಗೆ ಮುಂದುವರೆದ ವೃತ್ತಿ ಜೀವನ ಹಲವಾರು ಅನುಭವದ ಆಗರವಾಗಿ ಬೆಳೆಯಲು ಕಾರಣವಾದರೂ, ತಾಯಿ ರುದ್ರಮ್ಮ ಅವರ ತವರೂರು ಅದರಲ್ಲಿ ಒಂದು. ಕಂಚ್ಯಾಣಿಯವರು ತಾಯಿಯ ತವರೂರಾದ ಮುದ್ದೇಬಿಹಾಳಕ್ಕೆ ಆಗಾಗ ಅಲ್ಲಿಗೆ ಹೋಗುತ್ತಿದ್ದರು. ಅವರ ಮನೆಯಲ್ಲಿ 'ಹರ್ಡೇಕರ ಮಂಜಪ್ಪನವರ' ಕೃತಿಗಳು ಇದ್ದುದನ್ನು ಗಮನಿಸಿ ಅವುಗಳನ್ನು ಓದುತ್ತಿದ್ದರು. ಮಂಜಪ್ಪನವರ ಪ್ರಭಾವ ಇವರಿಗೆ ಗಾಢವಾದುದು. ಹೀಗಾಗಿ ಕಂಚ್ಯಾಣಿಯವರಲ್ಲಿ ಮಕ್ಕಳ ಬಗ್ಗೆ ಆದರ, ಅನುಕಂಪ ಹಾಗೂ ಅವರ ಅಭಿವೃದ್ಧಿಯ ಕುರಿತು ಕಾಳಜಿಗಳು ಇಲ್ಲಿಂದಲೇ ಪ್ರಾರಂಭಗೊಂಡವು ಎಂದು ಹೇಳಬಹುದು.

"ತಿಳುವಿನ ಬೆಳಕನು
ಚಲ್ಲುವ ಮುತ್ತು
ಮನಸಿನ ಕತ್ತಲೆ
ಕಳೆಯುವ ಮುತ್ತು
ಥಳ ಥಳ ಹೊಳೆಯುವ
ಅಕ್ಷರ ಮುತ್ತು."॥ ೨

---

೧. ಜಾಣ ಪುಟ್ಟು : ನೂರೊಂದು ಕವಿತೆಗಳು ಪುಟ–೫೧ ಕಂಚ್ಯಾಣಿ ಶರಣಪ್ಪ.
೨. ಕೊಳ್ಳೀರಿ ಮುತ್ತು : ತೊಟ್ಟಿಲು ಪುಟ–೧೬ ಕಂಚ್ಯಾಣಿ ಶರಣಪ್ಪ.

ಕಂಚ್ಯಾಣಿಯವರು ಶಿಕ್ಷಣಕ್ಕೆ ಒತ್ತು ಕೊಟ್ಟವರು. ಹಾಗೆಯೇ ಮಕ್ಕಳಲ್ಲಿ ಅದನ್ನು ತುಂಬಲು ಹೆಣಗಿದವರು. ಅನುಭಾವದ ನೆಲೆಯಲ್ಲಿ ಈ ಕವಿತೆಯನ್ನು ನೋಡಿದರೆ ಸೂಕ್ತ. ಅಕ್ಷರ ಜ್ಞಾನ ಮಾನವನ ಮನದ ಕತ್ತಲೆಯನ್ನು ಸರಿಸುತ್ತದೆ. ಅರಿವೇ ಗುರು ಎನ್ನುವ ಸಂದೇಶ ಇವರದು.

ಕಂಚ್ಯಾಣಿಯವರ ದಾಂಪತ್ಯ ಜೀವನ ಪ್ರಾರಂಬವಾದುದು ತಮ್ಮ ವೃತ್ತಿ ಜೀವನದ ವರ್ಷದ ನಂತರ. ಐದನೆಯ ತರಗತಿಯವರೆಗೆ ಓದಿದ ಬಸವಂತೆವ್ವ ಇವರ ಧರ್ಮಪತ್ನಿ. ಇವರೂ ಸಹ ಮದುವೆಯಾದರೂ ಶಿಕ್ಷಣ ಮುಂದುವರೆಸಿದರು. ಮನೆಯಲ್ಲಿ ಕುಳಿತು ಏಳನೆಯ ತರಗತಿ ಮುಗಿಸಿದರು. ಧಾರವಾಡದಲ್ಲಿ ಶಿಕ್ಷಕ ತರಬೇತಿ ಪಡೆದು ೧೯೬೫ ರಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ೨೫ ವರ್ಷಗಳ ಸುದೀರ್ಘ ಸೇವೆಯನ್ನು ಸಲ್ಲಿಸಿದ್ದಾರೆ.

ಇವರದು ದೊಡ್ಡ ಕುಟುಂಬ ಕಂಚ್ಯಾಣಿಯವರಿಗೆ ಒಟ್ಟು ೮ ಜನ ಮಕ್ಕಳು ೩ ಜನ ಹೆಣ್ಣು ಮಕ್ಕಳು ಮತ್ತು ೫ ಜನ ಗಂಡು ಮಕ್ಕಳು. ಎಲ್ಲರೂ ಶಿಕ್ಷಣವನ್ನು ಪಡೆದವರು ೨೮ ಜನ ಮೊಮ್ಮಕ್ಕಳು, ೭ ಜನ ಮರಿಮಕ್ಕಳಿಂದ ತುಂಬಿದ ಮನೆ. ಬದುಕಿನ ಎಡರು-ತೊಡರುಗಳನ್ನು ದಿಟ್ಟತದ ಮನದಿಂದ ಎದುರಿಸಿ ಮುಂದೆ ಸಾಗುತ್ತಿದ್ದಾರೆ. ಕಂಚ್ಯಾಣಿಯವರ ಮಗ ಜಂಬುನಾಥ ಕಂಚ್ಯಾಣಿಯವರು ಸಹ ಮಕ್ಕಳ ಸಾಹಿತಿಯಾಗಿ ಹೆಸರಾದವರು.

"ತಿಂಡಿ ತಿನಿಸು ಬಿಚ್ಚುತ್ತ
ಒಬ್ಬರಿಗೊಬ್ಬರು ಹಂಚುತ್ತ
ಪ್ರೀತಿಯ ಮಳೆಯನು ಸುರಿಸುತ್ತ
ಹರುಷದಿ ಕಾಲ ಕಳೆಯುತ್ತ. ।" ೧

ಇದು ಕಂಚ್ಯಾಣಿಯವರ ಕಾವ್ಯವು ಹೌದು, ಬದುಕು ಹೌದು. ಹಾಗೆಯೇ ಇವರ ಜೀವನ ಕ್ರಮ. ಹಿರಿಯರಿರಲಿ-ಕಿರಿಯರಿರಲಿ ಒಂದೇ ಭಾವ ಇವರದು. ಮಗುವಿನ ಮುಗ್ಧ ಮನಸಿಗೆ ನಾಟುವ ಧಾಟಿ ಎಲ್ಲ ಕವಿತೆಗಳದ್ದು. ಹಿಡಿದ ಕಾರ್ಯ ಬಿಡದವರು. ಅದೇ ಮಗುವಿಗೆ ಕಲಿಸಿದವರು. ಕಂಚ್ಯಾಣಿಯವರಲ್ಲಿ ಹರಿದು-ಹಂಚಿ ತಿನ್ನುವಕಾಗೆಯಂತೆ ಕರೆಯುವ, ಕಷ್ಟಪಟ್ಟು ಕತ್ತೆಯಂತೆ ದುಡಿದು ಕಾಯಕ ಮಾಡುವ ಗುಣ ಇವರ ಬದುಕಿನಲ್ಲಿ ಹಾಸುಹೊಕ್ಕಾಗಿದೆ.

"ಏಸೂರು ತಿರುಗಿದರೂ ಬೀಸುವುದು ಬಿಡಲಿಲ್ಲ" ಎನ್ನುವಂತೆ ಎಲ್ಲಿ ನೋಡಿದರೂ ಮಾಸ್ತರರೇ ಮಕ್ಕಳ ಸಾಹಿತ್ಯದ ಕೃಷಿಯಲ್ಲಿ ತೊಡಗಿದ್ದಾರೆ. ಇದರಿಂದ ಕಂಚ್ಯಾಣಿಯವರೂ ಹೊರತಾಗಿಲ್ಲ. ಮಕ್ಕಳ ನಿಕಟ ಒಡನಾಟದಿಂದ ಅವರೂ ಸಹ ಮಗುವಾಗಿ ನಿಂತು ಕವಿತೆ ರಚಿಸಬೇಕಾಗುತ್ತದೆ. ಇದಕ್ಕೆ ಅವರ ವೃತ್ತಿ ಜೀವನವೇ ಕಾರಣ.

ಕಂಚ್ಯಾಣಿಯವರು ವೃತ್ತಿಯಿಂದ ನಿವೃತ್ತಿಯವರೆಗೆ ಹಲವು ಊರು ಸುತ್ತಿ ಕಾರ್ಯ ನಿರ್ವಹಿಸಿದವರು. ಹಲವು ಅನುಭವ ಪಡೆದವರು ೧೯೪೮ ರಿಂದ ೧೯೮೮ ರವರೆಗೆ ಅವಿರತ ಸೇವೆಯಲ್ಲಿ ತೊಡಗಿದವರು. ಇಂಗಳಗೇರಿ, ಸರೂರ, ಕವಡಿಮಟ್ಟಿ, ಚಬನೂರು, ದಿಂಡವಾರ, ತೆಲಗಿ ಹಾಗೂ ಮಲಘಾಣಗಳು ಇವರ ಸೇವೆಯ ಪ್ರಮುಖ ಗ್ರಾಮವಾಗಿವೆ. ಇದು ಕಂಚ್ಯಾಣಿಯವರಿಗೆ ಜನಜೀವನದ ಅನುಭವ ಪಡೆದುಕೊಳ್ಳಲು ಸಹಾಯಕವಾಗಿದೆ.

---

೧. ಸೊಬಗಿನ ಶಿಬಿರ : ಬೆದರು ಬೆಚ್ಚ ಪುಟ-೩೫ ಕಂಚ್ಯಾಣಿ ಶರಣಪ್ಪ.

"ತಿಪ್ಪನು ಜಾತ್ರೆಗೆ ಹೋಗಿದ್ದ
ಅಪ್ಪನ ಕಾಡಿ ಬೇಡಿದ್ದ
ಬಾಳೆ ಹಣ್ಣನು ತಂದಿದ್ದ
ಗಪಗಪ ಗಪಗಪ ತಿಂದಿದ್ದ ।
ಸಿಪ್ಪೆ ಬೀದಿಗೆ ಚೆಲ್ಲಿದ್ದ
ತಕತಕ ಕುಣಿಯುತ ನಡೆದಿದ್ದ
ಸಿಪ್ಪೆ ತುಳಿದು ಜಾರಿದ್ದ
ದೊಪ್ಪನೆ ನೆಲಕ್ಕೆ ಬಿದ್ದಿದ್ದ.॥" ೧

ಸಾಮಾಜಿಕ ಜೀವನದ ಅರಿವನ್ನು ಕಂಡು ಉಂಡವರು ಕಂಚ್ಯಾಣಿ ಶರಣಪ್ಪನವರು. ಬಾಲ್ಯದಲ್ಲಿ ಮಗು ಈ ರೀತಿಯ ಪ್ರಸಂಗ ಅನುಭವಿಸುವದನ್ನು ಕವಿತೆಯಲ್ಲಿ ಹಿಡಿದಿಡುವ ಸಾಹಸ ಇವರದು. ಕಂಚ್ಯಾಣಿಯವರಿಗೆ ಸಾಹಿತ್ಯ ಜಗತ್ತಿನ ದಿಗ್ಗಜರಾದ ಅನಕೃ, ಶಿವರಾಮ ಕಾರಂತ, ಕುವೆಂಪು, ಬೇಂದ್ರೇ ಹಾಗೂ ಹರ್ಡೇಕರ ಮಂಜಪ್ಪನವರ ಪ್ರಭಾವ ಬೀರಿದರೆ, ಹಾಗೆ ಇವರ ಕೃತಿಗಳು ಕಾವ್ಯಕ್ಕೆ ಪ್ರೇರಣೆಯಾಗಿವೆ. ಒಡನಾಡಿಗಳಾದ ಎ.ಎಸ್. ಹಿಪ್ಪರಗಿ, ಶಂ.ಗು.ಬಿರಾದರ, ಸಿಸು ಸಂಗಮೇಶ, ಈಶ್ವರ ಚಂದ್ರ ಚಿಂತಾಮಣಿ ಮೊದಲಾದವರು ಕಂಚ್ಯಾಣಿಯವರು ಮಕ್ಕಳ ಸಾಹಿತ್ಯ ಹೆಮ್ಮರವಾಗಿ ಬೆಳೆಯಲು ಸಹಕಾರಿಯಾಗಿದೆ.

"ನಾಡದೇವಿಯ ಗುಡಿಯ ಮುಂಗಡೆ
ಹಾಡುತಿರುವುದು ಕೋಗಿಲೆ
ಕಾಳ ಕತ್ತಲೆ ಕಳೆದು ಬೆಳಗಿನ
ಕೋಳಿಕೂಗಿದೆ ಆಗಲೆ."॥ ೨

ಕಂಚ್ಯಾಣಿಯವರಿಗೆ ನಾಡ ಅಭಿಮಾನ ಮೂಡಿದ್ದು ಬಿ.ಎಂ. ಶ್ರೀಯವರ. 'ಸಿರಿಗನ್ನಡಂ ಗೆಲ್ಗೆ' ಎಂಬ ಘೋಷಣೆ ಕೇಳಿದಂದಿನಿಂದ. ೧೯೪೨ ರ ಚಲೇಜಾವ್ ಚಳುವಳಿಯಲ್ಲಿಯ ದೇಶಭಕ್ತಿ ಗೀತೆಗಳು, 'ವಂದೇ ಮಾತರಂ' ಎಂಬ ಘೋಷಣೆಗಳು ಇವರ ಬದುಕನ್ನು ರೂಪಿಸಿದವು.

ಕಂಚ್ಯಾಣಿಯವರ ಜೀವನದಲ್ಲಿ ಇನ್ನೊಂದು ಮುಖ್ಯತಿರುವು ಅವರ ಗುರುಗಳು. ಶಿಕ್ಷಣ ತಜ್ಞರಾದ ರೋಹಿಡೆಕರ ಶಾಮರಾಯರು, ವಿದ್ಯೆ ಕಲಿಸಿದ ಗುರುಗಳಾಗಿ, ಮಾರ್ಗದರ್ಶಕರಾಗಿ ಪ್ರಭಾವಬೀರಿದವರು. ಇವರು 'ಶಾಲಾ ಮಕ್ಕಳನ್ನು ತಮ್ಮ ಮಕ್ಕಳು ಎಂದು ತಿಳಿದುಕೊಂಡು ಕಳಕಳಿಯಿಂದ ಶಿಕ್ಷಣ ಕಲಿಸಿ ಎಂದು ಹೇಳುತ್ತಿದ್ದರು. ಮಕ್ಕಳಿಗೆ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಸಹಾಯಕವಾಗುವ ಶಿಕ್ಷಣವಿರಬೇಕು. ಶಿಕ್ಷಣ ವೃತ್ತಿ ಎಲ್ಲ ವೃತ್ತಿಗಳಿಗಿಂತ ಶ್ರೇಷ್ಠವದುದು ಎಂದು ಹೇಳುತ್ತಿದ್ದರು. ಆದರ್ಶ ಶಿಕ್ಷಕನ ಜೀವನಾಡಿ ಮಕ್ಕಳ ಮೇಲಿರುವ ಕಳಕಳಿ ಎಂಬುದು ರೋಹಿಡೆಕರ ಶಾಮರಾಯರ ಅಭಿಮತವಾಗಿತ್ತೆಂದು ಕಂಚ್ಯಾಣಿಯವರು ಹೇಳುತ್ತಾರೆ.

---

೧. ಜಾರಿಬಿದ್ದ ತಿಪ್ಪ : ಗುಡು ಗುಡು ಗುಂಡ ಪುಟ-೩೯ ಕಂಚ್ಯಾಣಿ ಶರಣಪ್ಪ.
೨. ನಾಡದೇವಿ : ನೂರೊಂದು ಕವಿತೆಗಳು ಪುಟ-೧೨೬ ಕಂಚ್ಯಾಣಿ ಶರಣಪ್ಪ.

ಈ ಎಲ್ಲ ಮಹಾನ್ ವ್ಯಕ್ತಿಗಳು ಹಾಗೂ ಘಟನೆಗಳು ಕಂಚ್ಯಾಣಿಯವರು ಮಕ್ಕಳ ಸಾಹಿತ್ಯದಲ್ಲಿ ಮೇರು ವ್ಯಕ್ತಿತ್ವಗಳಿಸಿಕೊಳ್ಳಲು, ಮಕ್ಕಳಲ್ಲಿ ಪ್ರೀತಿ ಮೂಡಿ ಅವರ ಭಾವನೆಗಳಿಗೆ ಸ್ಪಂದಿಸಿ ಸಾಹಿತ್ಯ ರಚಿಸುವಲ್ಲಿ ಪ್ರೇರಕ ಶಕ್ತಿಗಳಾಗಿ ನಿಂತಿವೆ.

ಕಂಚ್ಯಾಣಿಯವರು ಯಾವುದೇ ಪ್ರಶಸ್ತಿ-ಪುರಸ್ಕಾರಗಳಿಗೆ ಬೆನ್ನು ಬಿದ್ದವರಲ್ಲ. ಅವುಗಳೇ ಅವರ ಶಿಶು ಸಾಹಿತ್ಯದ ಮೌಲ್ಯಗಳನ್ನು ಗುರುತಿಸಿ ಮನೆಯ ಬಾಗಿಲಿಗೆ ಬಂದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ, ಕನ್ನಡ ಸಾಹಿತ್ಯ ಪರಿಷತ್ತಿನ ವಸುದೇವ ಭೂಪಾಳಂ ದತ್ತಿ ಮಕ್ಕಳ ಪುರಸ್ಕಾರ, ರಾಷ್ಟ್ರೀಯ ಬಾಲ ಸಾಹಿತ್ಯ ಪುರಸ್ಕಾರ, ಜಿಲ್ಲಾ ಹಾಗೂ ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಬಸವ ಜ್ಯೋತಿ ಪ್ರಶಸ್ತಿ ಹೀಗೆ ಹಲವಾರು ಪುರಸ್ಕಾರಗಳನ್ನು ಬಾಚಿಕೊಂಡ ಧೀಮಂತ ಶಿಶುಸಾಹಿತಿ ಕಂಚ್ಯಾಣಿಯವರು ಶಿಶು ಕಾವ್ಯದ ಹಲವು ಮಜಲುಗಳನ್ನು ತೆರೆದು ತೋರಿದ್ದಾರೆ.

ಕಾಮನ ಬಿಲ್ಲಿನ
ಕಮಾನು ಕಟ್ಟಿ
ಗುಡು ಗುಡು ಮುತ್ಯಾ ಬಂದಾನ
ಕರಿ ಬಿಳಿ ಮೋಡದ
ಪರದೆಯ ಮುಂದೆ
ಮೋಜನ ಆಟವ ಹೂಡ್ಯಾನ.॥ ೧

ಎಂಬ ಸಾಲುಗಳು ಮಕ್ಕಳ ಮನಸ್ಸನ್ನು ಅರಳಿಸಿ ಕಲ್ಪನೆಯ ಲೋಕದಲ್ಲಿ ತೇಲಿಸುತ್ತವೆ. ಇಳಿವಯಸ್ಸಿನಲ್ಲಿ ಶಿಶು ಸಾಹಿತ್ಯದ ಕೃಷಿಯಲ್ಲಿ ತೊಡಗಿದ ಕಂಚ್ಯಾಣಿಯವರು ಮಗುವಿನೊಂದಿಗೆ ಮಗುವಾಗಿ ಹಾಡುತ್ತ-ಕುಣಿಯುತ್ತ, ಕಿಲ-ಕಿಲ ನಗುತ್ತ ಕಾಲ ಕಳೆಯುವ ಮಕ್ಕಳ ಮನವುಳ್ಳವರು ಎಂಬುದು ವಿಧಿತ.

ಕಳ್ಳೆ ಮುಳ್ಳೆ ಕಪಾಟ ಮುಳ್ಳೆ
ಮಕ್ಕಳ ಆಟವು ನಡೆದಿತ್ತು
ಆಟವ ನೋಡಲು ಆಗಸದಲ್ಲಿ
ಮುಗಿಲಿನ ದಂಡು ನೆರೆದಿತ್ತು. ೨

ಇಲ್ಲಿಯ ಸಾಲುಗಳನ್ನು ನೋಡಿದರೆ ಕಂಚ್ಯಾಣಿಯವರು ಎಂಬತ್ತರ ವೃದ್ಧರು ಎಂಬ ಭಾವನೆ ಮೂಡುವದೇ ಇಲ್ಲ. ಅವರ ಮನದೊಳಗೆಲ್ಲ ಮಕ್ಕಳ ಲೋಕವೇ ತುಂಬಿಕೊಂಡು ಬದುಕಿನುದ್ದಕ್ಕೂ ಹಾಸುಹೊಕ್ಕಾಗಿದೆ. ಮಧುರ ಭಾಷೆ-ಮಿತ ಭಾಷೆ ಕಂಚ್ಯಾಣಿಯವರ ಸ್ವಭಾವ. ಹಿರಿಯರು-ಕಿರಿಯರು ಎಂಬ ಬೇಧವಿಲ್ಲದೆ ಎಲ್ಲರೊಂದಿಗೆ ಬೆರೆತು-ಅರಿತು ಮುನ್ನಡಿಯಿಡುವ ಸರಳ ಸಹೃದಯರು. ಗ್ರಾಮ ಜೀವನದಲ್ಲಿಯೇ ಹೋರಾಟಾದ ಬದುಕನ್ನು ಸಾಗಿಸಿದವರು. ನಿವೃತ್ತಿಯ ಸಮಯದಲ್ಲಿ ಉನ್ನತ ವ್ಯಾಸಂಗವಾದ ಎಂ.ಎ. ಪದವಿಯನ್ನು ಪಡೆದು ವ್ಯಾಸಂಗದ ಹವ್ಯಾಸಿಗಳಿಗೆ, ಅಧ್ಯಯನ ಪ್ರೇಮಿಗಳಿಗೆ ತಮ್ಮ ವ್ಯಾಸಂಗ ಪ್ರೇಮವನ್ನು ಮಾದರಿಯಾಗಿ ತೋರಿಸಿಕೊಟ್ಟ ಧೀಮಂತರು.

---

೧. ನೂರೊಂದು ಕವಿತೆಗಳು ಪುಟ-೪೪. ಕಂಚ್ಯಾಣಿ ಶರಣಪ್ಪ
೨. ಆಯ್ದ ನೂರೊಂದು ಕವಿತೆಗಳು ಪುಟ-೫೫. ಕಂಚ್ಯಾಣಿ ಶರಣಪ್ಪ

ಮಡದಿಯು ಮಲ್ಲಿಗೆ ಬಡಿಸಲು ತಿಪ್ಪಗೆ
ದಿಗಿಲೆ ಹಿಡಿದಿತ್ತು
ತಂಗಳ ರೊಟ್ಟಿಯು ತಿಂಗಳ ಮಜ್ಜಿಗೆ
ಮಲ್ಲಿಗೆಯಾಗಿತ್ತು ॥ ೧

ಅತ್ತೆಯ ಮನೆಗೆ ಬಂದ ತಿಪ್ಪನ ಫಜೀತಿಯನ್ನು ಚಿತ್ರಿಸುವಲ್ಲಿ ತಿಪ್ಪನ ಅಶೆ ಮತ್ತು ತುಂಟ ತಮ್ಮನ ನಗೆಯಾಟ ಮಿಳಿತವಾಗಿ ಮುಡಿಬಂದಿದೆ.

ಪತ್ರದ ಕಟ್ಟು
ಕೈಯೊಳಗಿಟ್ಟು
ಬರುವನು ಭರ ಭರ
ಹೆಜ್ಜೆಯನಿಟ್ಟು ।
ಬಂದೇ ಬರುವನು
ಎಲ್ಲರ ಮನೆಗೆ
ಬಡವರು ಬಲ್ಲಿದ
ರೊಂದೆ ಅವಗೆ ॥ ೨

ಸಮಾನತೆಯ ಸಂಕೇತವಾಗಿ ಮೂಡಿದ ಅಂಚೆಯ ಅಣ್ಣನನ್ನು ಮಕ್ಕಳು ಅವನ ವೇಷ-ಭೂಷಣ ನೋಡಿ ವಿಸ್ಮಯ ಹೊಂದುವದು ಸಹಜ.

ಖಲೀಲ್ ಗಿಬ್ರಾನ್ ಮಕ್ಕಳ ಬಗ್ಗೆ ಹೇಳಿದ ಮಾತನ್ನು ಇಲ್ಲಿ ಕಂಚ್ಯಾಣಿ ಶರಣಪ್ಪನವರಿಗೆ ಅನ್ವಯಿಸುತ್ತದೆಂದು ತೋರುತ್ತದೆ. "ಅವರಂತಾಗಲು ನೀವು ಹವಣಿಸಿರಿ, ಆದರೆ ನಿಮ್ಮಂತೆ ಅವರನ್ನು ಮಾಡಲು ಮಾತ್ರ ಪ್ರಯತ್ನಿಸಬೇಡಿರಿ. ನೀವು ಬಿಲ್ಲುಗಳು, ಅವುಗಳಿಂದ ಬಿಟ್ಟ ಬಾಣಗಳೇ ನಿಮ್ಮ ಮಕ್ಕಳು." ಎಂಬ ನುಡಿಯ ಭೂಮಿಕೆಯಲ್ಲಿ ನಡೆದವರು ಕಂಚ್ಯಾಣಿಯವರು, ಹಾಗೆಯೇ ಮಕ್ಕಳನ್ನು ಬೆಳೆಸುತ್ತೇವೆ ಎನ್ನುವದಕ್ಕಿಂತ ಅವರಿಗೆ ಅವಕಾಶ ಮಾಡಿಕೊಡುವ ಧೋರಣೆಯುಳ್ಳವರು.

"ಪಾಪ ಅತ್ತರೊಂದು ಚಂದ
ಮುತ್ತು ಮಳೆಯ ಕರೆದಿದೆ
ಕೇಕೆ ಹಾಕಿ ನಕ್ಕರಂತು
ಮನೆಗೆ ಮನೆಯ ನಗುತಿದೆ." ೩

* * * * * * * * * * * * *

ಅಪ್ಪ ಹೂರಣಗಡಬು ! ಅವ್ವ ಹೆರೆದುಪ್ಪ ॥
ಹುಗ್ಗಿ ಹೋಳಿಗೆ ಅಪ್ಪ ! ಅವ್ವ ತಿಳಿದುಪ್ಪ.॥ ೪

ಎಂಬ ಸಾಲುಗಳಲ್ಲಿ ಮಕ್ಕಳ ಕಲ್ಪಕ ಶಕ್ತಿಯನ್ನು ಜಾಗ್ರತಗೊಳಿಸುವ ಮನಸ್ಸು ಎದ್ದು ಕಾಣುತ್ತದೆ.

---

೧. ಮರೆಯದ ಮಲ್ಲಿಗೆ – ಆಯ್ದ ನೂರೊಂದು ಕವಿತೆಗಳು: ಕಂಚ್ಯಾಣಿ ಶರಣಪ್ಪ.
೨. ಅಂಚೆಯ ಅಣ್ಣ – ಆಯ್ದ ನೂರೊಂದು ಕವಿತೆಗಳು : ಕಂಚ್ಯಾಣಿ ಶರಣಪ್ಪ.
೩. ನವೀನ ಲೀಲೆ– ಆಯ್ದ ನೂರೊಂದು ಕವಿತೆಗಳು : ಕಂಚ್ಯಾಣಿ ಶರಣಪ್ಪ.
೪. ಬಾಲಗಣಪ – ಆಯ್ದ ನೂರೊಂದು ಕವಿತೆಗಳು : ಕಂಚ್ಯಾಣಿ ಶರಣಪ್ಪ.

"ಪ್ರಜ್ವಲಿಸುವ ದೀಪ ಮಾತ್ರ ಇನ್ನೊಂದು ದೀಪವನ್ನು ಬೆಳಗಿಸಲು ಸಾಧ್ಯ. ಹಾಗೆಯೇ ಸುಜ್ಞಾನಿಯಾದ ಶಿಕ್ಷಕ ಮಾತ್ರ ವಿದ್ಯಾರ್ಥಿಗಳಲ್ಲಿ ಜ್ಞಾನ ಕಿಡಿಯನ್ನು ಹಚ್ಚಬಲ್ಲ." ೧

ಇಂಥ ಸುಜ್ಞಾನಿಯಾದ ಕಂಚ್ಯಾಣಿ ಶರಣಪ್ಪನವರು ಸರಳ ನಡೆ-ನುಡಿಯ, ಸಾದಾ ಅರಳೆಯ ಶುಭ್ರವಾದ ಉಡುಗೆಯ ಮೇರು ವ್ಯಕ್ತಿ. ಕಠಿಣವಾದ ಕಲ್ಲನ್ನು ಕೆತ್ತಿ ಕಡೆದು ಸುಂದರ ಮೂರ್ತಿಯನ್ನು ಮಾಡುವ ಕೆಲಸ ಸುಲಭವೆನ್ನಬಹುದು, ಆದರೆ ಚಂಚಲ ಚಿತ್ತದ ವಿದ್ಯಾರ್ಥಿಯ ಬುದ್ದಿಯನ್ನು ತಿದ್ದಿ ಅವನನ್ನು ಸುಶಿಕ್ಷಿತ ವ್ಯಕ್ತಿಯನ್ನಾಗಿ ಮಾಡುವದು ಅತ್ಯಂತ ಪ್ರಯಾಸದ ಕೆಲಸ. ಚಂಚಲ ಬುದ್ದಿಯ ವಿದ್ಯಾರ್ಥಿಗಳನ್ನು ತಮ್ಮ ಶಿಶು ಕವಿತೆಗಳ ಮೂಲಕ ಆಕರ್ಷಿಸಿಕೊಂಡು ತನ್ಮೂಲಕ ವಿದ್ಯಾರ್ಥಿಗಳಲ್ಲಿ ಏಕಾಗ್ರತೆ ಮೂಡಿಸಿ ಬೋಧನೆ ಮಾಡಿದ ಕಂಚ್ಯಾಣಿಯವರು ಸಮರ್ಥ ಶಿಕ್ಷಕರೆನಿಸಿಕೊಂಡರು. ಶಿಶು ಸಾಹಿತ್ಯದ ಮೂಲಕ ಮಕ್ಕಳನ್ನು ತಿದ್ದಿದರು. ಸಾಹಿತ್ಯ ಕ್ಷೇತ್ರದಲ್ಲಿ ತಾವಷ್ಟೇ ಬೆಳೆಯದೆ, ತಮ್ಮದೆ ಆದ ಗ್ರಾಮೀಣ ಪ್ರತಿಭಾ ಪ್ರಕಾಶನ ವಿಜಾಪುರ ಎಂಬ ಪ್ರಕಾಶನ ಸಂಸ್ಥೆಯನ್ನು ಹುಟ್ಟುಹಾಕಿ ಎಲ್ಲರಿಗೂ ಬೆಳೆಯಲು ಅವಕಾಶ ಮಾಡಿಕೊಟ್ಟರು.

ಸಮಾಜಕ್ಕೆ ಕಳಂಕಪ್ರಾಯವಾದ ಕುಡಿತ ಇಡಿ ಕುಟುಂಬವೇ ನಾಶ ಮಾಡುವ ರೋಗ. ಈ ರೋಗ ಅಂಟಿಕೊಂಡ ಪ್ರತಿಫಲವೇ ಮೂಡಿದ ಕಾವ್ಯಧ್ವನಿ.

ಕುಡಿತವೆಂಬ ಮಾರಿಗೆ
ಮನದ ಶಾಂತಿ ಕದಡಿತು ।
ಮನೆಯು ಮಸಣವಾಯಿತು
ದಾರಿ ಕಾಣದಾಯಿತು.॥ ೨

ಹೆಂಡತಿ-ಮಕ್ಕಳನ್ನು ಒದ್ದು ದೆವ್ವದಂತೆ ಕುಣಿಯುವ ಕುಡುಕ, ರಾತ್ರಿಯಲ್ಲಿ ಅವತರಿಸಿ ಪೀಡಿಸುವ ಅಮಾನವೀಯ ಗುಣಗಳು, ಕತ್ತಲಲ್ಲಿ ಬಿಕ್ಕಿ-ಬಿಕ್ಕಿ ಅಳುವ ತಬ್ಬಲಿಗಳು; ಇಂಥ ಕರುಳು ಕಿತ್ತು ಬರುವ ದೃಶ್ಯ ಅಂಥ ಸಮಾಜಕ್ಕೆ ಹಿಡಿದ ಕೈಗನ್ನಡಿ.

ಕಂಚ್ಯಾಣಿಯವರು ಸಾಮಾಜಿಕ ಪಿಡುಗಳನ್ನು ತಮ್ಮ ಶಿಶು-ಕವಿತೆಗಳಲ್ಲಿ ಸುಳಿಗಾಳಿಯ ಹಾಗೆ ತೇಲಿಸಿದ್ದಾರೆ. ಕವನಗಳಲ್ಲಿ ತಕ್ಕ ಸಂಭಾಷಣೆ ಹೆಣೆಯುವ ಕಠಿಣ ಕಾರ್ಯ. ಹಾಗೆಯೇ ನಾಟಕೀಯತೆಯನ್ನು ಸಾಧಿಸುವದು ತೀರ ಕಠಿಣ. ಅಂಥ ಸಾಹಸವನ್ನು ಕಂಚ್ಯಾಣಿಯವರು ಕರಗತಮಾಡಿಕೊಡಿದ್ದಾರೆ. ಅದು ಅವರ ಶಿಶು ಸಾಹಿತ್ಯದ ಜೀವಾಳ.

---

೧. ರಾಧಾಕೃಷ್ಣನ್.

೨. ಕುಡಿತದ ಕುತ್ತು - ಜಾಗ್ರತ ಭಾರತ : ಕಂಚ್ಯಾಣಿ ಶರಣಪ್ಪ.

"ನೀಲಿಯ ನಭದಲಿ
ಮುಸುಕಿದ ಮೋಡವು
ಹಂದರ ಹಾಕಿತ್ತು."।

ಬಣ್ಣ ಬಣ್ಣದ
ಕಾಮನ ಬಿಲ್ಲಿನ
ತೋರಣ ಕಟ್ಟಿತ್ತು ।
ತುಂತುರು ತುಂತುರು
ಮುತ್ತಿನ ಹನಿಗಳ
ಅಕ್ಷತೆ ಉದುರಿತ್ತು।"
* * * * * * *
"ಗೋಧುಳೀಯ ಶುಭ
ಗಳಿಗೆಯ ಮದುವೆಯು
ಯಾರದು ನಡೆದಿತ್ತು।" ೧

'ಮದುವೆ' ಕವನ ಸೃಷ್ಟಿಯ ಸುಂದರ ವ್ಯಾಖ್ಯಾನದಂತಿದೆ. ನಿಸರ್ಗದ ವೈಚಿತ್ರ್ಯ ಕವಿಯ ಮನೋಭಾವದಲ್ಲಿ ವಿವಾಹ ಬಂಧನದಲ್ಲಿ ಆಗುವ ಸಂಭ್ರಮ ಪ್ರಕೃತಿಯಲ್ಲಿ ಕಾಣುವದು ಮೇರು ಕವಿಗೆ ಮಾತ್ರ. ಇದು ಕಂಚ್ಯಾಣಿಯವರಿಗೆ ಒಲಿದು ಬಂದ ವರ.

ಶಿಶು ಕಾವ್ಯದ ಅಜ್ಜನಾದ ಕಂಚ್ಯಾಣಿ ಶರಣಪ್ಪನವರದು ತುಂಬು ಸಂಸಾರ. ಐದು ಜನ ಗಂಡು, ಮೂರು ಜನ ಹೆಣ್ಣು ಮಕ್ಕಳು ಪಡೆದ ಕಂಚ್ಯಾಣಿಯವರು ಒಬ್ಬ ಮಗನನ್ನು ಕಳೆದುಕೊಂಡರೂ ಕುಗ್ಗಲಿಲ್ಲ. ದೇವರು, ಕೊಟ್ಟರೆ ಕೊಡಲಣ್ಣ, ಕೊಡದಿದ್ದರೆ ಬಿಡಲಣ್ಣ, ಆತನ ತಾಳಕ್ಕೆ ಕುಣಿಯುವದೇ ಜೀವನದ ರಹಸ್ಯ". ೨ ಎಂಬುದನ್ನು ಅರಿತುಕೊಂಡು ಸಾಗಿಬಂದ ಸಂತೃಪ್ತ ಸಂಸಾರ ಕಂಚ್ಯಾಣಿಯವರದು. ಸಂಘ-ಸಂಸ್ಥೆಗಳ ಸದಸ್ಯರಾಗಿ ಸಕ್ರೀಯವಾಗಿ ತೊಡಗಿಕೊಂಡರೂ ಶಿಶು ಸಾಹಿತ್ಯಕ್ಕೆ ಹೆಚ್ಚು ಒತ್ತು ನೀಡಿದವರು. ಕವಿಯಾಗಿ, ಶಿಕ್ಷಕರಾಗಿ, ಸಂಘಟಕರಾಗಿ ಸಾಹಿತ್ಯ ಸೇವೆ ಮಾಡುತ್ತಿರುವ ಕಂಚ್ಯಾಣಿಯವರ ಬದುಕಿನ ವಿವಿಧ ಸ್ಥರಗಳನ್ನು ಹಿನ್ನಲೆಯಾಗಿಟ್ಟುಕೊಂಡು ಅವರ 'ಶಿಶು ಕಾವ್ಯ" ಅಧ್ಯಯನ ಮಾಡುವದು ಸಮರ್ಪಕವೆನಿಸುತ್ತದೆ.

---

೧. ಮದುವೆ – ಆಯ್ದನೂರೊಂದು ಕವಿತೆಗಳು : ಪುಟ-೯೬ ಕಂಚ್ಯಾಣಿ ಶರಣಪ್ಪ.
೨. ಫ.ಗು. ಹಳಕಟ್ಟಿ

# ಅಧ್ಯಾಯ ಮೂರು

# "ಕಂಚ್ಯಾಣಿಯವರ ಶಿಶು ಕಾವ್ಯ"

## ಅಧ್ಯಾಯ : ೩ :"ಕಂಚ್ಯಾಣಿಯವರ ಕಾವ್ಯ ಸ್ವರೂಪ-ವಸ್ತು-ಆಶಯ"

'ಮನೆಯ ಮೊದಲ ಪಾಠಶಾಲೆ, ತಾಯಿ ತಾನೆ ಮೊದಲ ಗುರು' ಎಂಬ ಮಾತಿನಂತೆ, "ಮನುಷ್ಯನಿಗೆ ಮನುಷ್ಯತ್ವ ಪ್ರಾಪ್ತವಾಗಬೇಕಾದರೆ ಶಿಕ್ಷಣವು ಅತ್ಯವಶ್ಯಕವಾಗಿ ಬೇಕು. ಶಿಕ್ಷಣವೆಂದರೆ ಮನಸ್ಸು, ಬುದ್ಧಿ ಮತ್ತು ದೇಹಗಳಿಗೆ ದೊರೆಯುವ ಸಂಸ್ಕಾರವು ಮನುಷ್ಯನಿಗೆ ಸಕಾಲದಲ್ಲಿ ದೊರೆಯದಿದ್ದರೆ ಆತನು ಸುಖ-ಶಾಂತಿಗಳನ್ನು ಅನುಭವಿಸುವದು ಸಾಧ್ಯವೇ ಇಲ್ಲ." ೧ ಎಂದು ಶಿಕ್ಷಣದ ಮಹತ್ವವನ್ನು ಹಾಗೂ ಶಿಕ್ಷಣ ಬದುಕಿನಲ್ಲಿ ಸಮಗ್ರ ವ್ಯಕ್ತಿತ್ವವನ್ನು ರೂಪಿಸುತ್ತದೆಂದು ಕಂಚ್ಯಾಣಿಯವರ ಗ್ರಹಿಕೆ ನಿಜವಾದುದು.

ಮಕ್ಕಳ ಪದ್ಯಗಳಲ್ಲಿ ಅಥವಾ ಕವಿತೆಗಳಲ್ಲಿ ವಸ್ತು, ಭಾಷೆ, ಶೈಲಿ, ನಿರೂಪಣೆ, ಭಾವ ಲಕ್ಷಣಗಳು ಹೇಗಿರಬೇಕೆಂಬುದನ್ನು, ಜೆ.ಬ್ರಿಗೆಲ್ ಅವರು, "ಮಕ್ಕಳ ಕವಿತೆ ಸಂಸ್ಕೃತದ ಶಬ್ದಾಡಂಬರ ಹಾಗೂ ಒಣ ಪಾಂಡಿತ್ಯಗಳ ಸಾಂಪ್ರದಾಯಿಕ ಅಭಿವ್ಯಕ್ತಿಯ ಅನುಕರಣದಿಂದ ಮುಕ್ತವಾಗಿರಬೇಕು. ಉತ್ತಮವಾಗಿ ಪರಿಷ್ಕರಿಸಿದ ಪದ ವಿನ್ಯಾಸ ಹಾಗೂ ಮೋಜಿನ ಪದಜೋಡಣೆಯಿಂದ ಕೂಡಿರಬೇಕು. ಸರಳತೆಯೇ ಅದರ ಗುರಿಯಾಗಿರಬೇಕು. ಸ್ಪಷ್ಟತೆ, ಸಹಜತೆ, ರಮ್ಯತೆಗಳಿಂದ ಕೂಡಿದ್ದು, ಆಡುಮಾತಿಗೆ ಅನುರೂಪವಾಗಿರಬೇಕು." ಎಂದು ಹೇಳುವ ಮಾತುಗಳಂತೆ ಕಂಚ್ಯಾಣಿಯವರ ಶಿಶು ಕವಿತೆಗಳೂ ಮಾದರಿಯಾಗಿವೆ.

ಪ್ರಾಸ ಸಹಜತೆಯೊಂದಿಗೆ ಸರಳತೆಯು ಮಕ್ಕಳಿಗೆ ಥಟ್ಟನೆ ಮುಟ್ಟುತ್ತದೆ. ಅಂಥ ಒಂದು ಪದ್ಯ,

"ಆನೆ ಬಂತು ಆನೆ
ಯಾವೂರ ಆನೆ ?
ವಿಜಾಪುರ ಆನೆ
ಇಲ್ಲಿಗ್ಯಾತಕ ಬಂತು ?
ಹಾದಿ ತಪ್ಪಿ ಬಂತು
ಹಾದಿಗೊಂದು ದುಡ್ಡು
ಬೀದಿಗೊಂದು ದುಡ್ಡು
ಅದೇ ದುಡ್ಡು ಕೊಟ್ಟು
ಸೇರ ಕೊಬ್ಬರಿ ತಂದು
ಲಟ ಲಟ ಮುರಿತು
ಚುಕ್ಕೋಳ ಕಯ್ಯಾಗ ಕೊಟ್ಟು."

ಎಂಬ ಸಾಲುಗಳು ಇತಿಹಾಸದ ಪುಟಗಳನ್ನು ಚಿತ್ರಿಸುವದಾದರೂ, ಉತ್ತರ ಕರ್ನಾಟಕದಲ್ಲಿ ಮಕ್ಕಳು "ಆನೆಯ ಆಟ"ದ ಶಿಶು ಪ್ರಾಸದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಇದೇ ಲಯದ ಕಾವ್ಯ ಕಂಚ್ಯಾಣಿಯವರದು.

---

೧. ಕರ್ನಾಟಕ ಗಾಂಧಿ. ಡಾ. ಮಲ್ಲಿಕಾರ್ಜುನ ಮೇತ್ರಿ ಪುಟ-೧೨೮.

ಮಕ್ಕಳ ಸಾಹಿತ್ಯವು ಕಿರಿಯ-ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳನ್ನು ಒಳಗೊಂಡು, ಅವರಿಗಾಗಿ ರಚನೆಗೊಂಡ ಸಾಹಿತ್ಯವನ್ನು ಪಾಶ್ಚಾತ್ಯರು 'ಶಿಶು ಗೀತೆಗಳು' NURSERY RHYMES ಎಂದು ಕರೆದರು ಇದರಲ್ಲಿ ವಿಷಯ ಬೋಧನೆಯು ಮುಖ್ಯವಲ್ಲ. ಕಿವಿಗೆ ಹಿತವಾಗಿ ಸಂತೋಷ ಹೆಚ್ಚಿಸುವ ಲಯಬದ್ಧವಾ ಗುಣ ಪ್ರಮುಖ. ಅದು ಅರ್ಥವನ್ನು ಹೊಂದಿರಬೇಕೆಂದು ಇಲ್ಲ.

ಚಂದಪ್ಪ ಚಂದಪ್ಪ ಚಾರೀಕಾಯಿ ॥
ಬಟ್ಟಲು ತುಂಬಾ ಬಾರೀಕಾಯಿ ॥೧

* * * * * * * * * * * * *

ಕಾನಕಾನ ಉತ್ತತ್ತಿ ।
ಎಲ್ಲ್ಗ ಬಂತೋ ಸಂಗಯ್ಯ ?
ಇಲ್ಲಿಗೆ ಬಂತೋ ನಿಂಗಯ್ಯ॥ ೨

ಈ ಹಾಡುಗಳು ಮಕ್ಕಳ ಆಟಗಳಲ್ಲಿ ಮಕ್ಕಳಿಂದಲೆ ಸಹಜವಾಗಿ ಮತ್ತು ಸರಳವಾಗಿ ಹುಟ್ಟಿಕೊಂಡಂಥವುಗಳು. ಇವುಗಳಿಗೆ ಪ್ರಾಸ-ಅನುಪ್ರಾಸ, ನಾದ ಮಾಧುರ್ಯವೇ ಜೀವಾಳ.

ಮಕ್ಕಳಿಗೆ ಸಂತೋಷ ಕೊಡಬಲ್ಲ, ಅವರ ಮನಸ್ಸಿಗೆ ಮುದ ನೀಡಬಲ್ಲ ಶಿಶು ಸಾಹಿತ್ಯ ಅವರದೇ ಆದ ಆಡು ಭಾಷೆಯಲ್ಲಿ ಮೂಡಿಬರಬೇಕು. ಪಂಜೆ ಮಂಗೇಶರ 'ತೆಂಕಣಗಾಳಿ' ಕನ್ನಡದ ಮಕ್ಕಳ ಹಾಡುಗಳಲ್ಲಿಯೇ ಅತ್ಯುತ್ತಮವಾದುದೆಂದು ಗುರುತಿಸಿಕೊಂಡಿದೆ. ಕವಿ ಶಿಷ್ಯರೆಂದು ಪ್ರಖ್ಯಾತರಾದ ಪಂಜೆಯವರು ಶಾಲಾ ಮಾಸ್ತರರಾಗಿ, ಮಕ್ಕಳ ಒಡನಾಟದಲ್ಲಿ ಗಳಿಸಿದ ಅಪಾರ ಅನುಭವವೆಲ್ಲವನ್ನು ಮಕ್ಕಳಿಗಾಗಿ ಧಾರೆಯರೆದರು. ಅನಂತರ ಜಿ.ಪಿ ರಾಜರತ್ನಂ, ಸಿಸು ಸಂಗಮೇಶ, ಬೇಂದ್ರೆ, ಕಾರಂತ, ಕುವೆಂಪು, ಚನ್ನವೀರ ಕಣವಿ, ಶಂ.ಗು. ಬಿರಾದಾರ, ಫ.ಗು. ಸಿದ್ದಾಪೂರ ಮೊದಲಾದವರ ಶಿಶು ಕಾವ್ಯಕ್ಕಿಂತಲೂ ಕಂಚ್ಯಾಣಿಯವರ ಶಿಶು ಕಾವ್ಯ ಕೆಲವು ಮುಖಗಳಿಂದ ಭಿನ್ನವಾಗಿ ತೋರುತ್ತದೆ.

ಕಂಚ್ಯಾಣಿಯವರ ಶಿಶು ಕಾವ್ಯ ಮಕ್ಕಳ ಮನಸ್ಸಿನಲ್ಲಿರುವ ಕಾಲ್ಪನಿಕ ಪ್ರಪಂಚವನ್ನು ಕ್ರಿಯಾಶೀಲಗೊಳಿಸುವ, ಸೃಜನಶೀಲತೆಯನ್ನು ಬೆಳೆಸುವ, ಸಾಹಸ ಪ್ರವೃತ್ತಿ, ಚಿಂತನೆಯ ಕುತೂಹಲಕೆರಳಿಸುವ ವಿಷಯಗಳನ್ನು ಸುಂದರವಾಗಿ ಹೆಣೆದುಕೊಂಡಿದೆ. ಶಿಶು ಕಾವ್ಯದ ತುಂಬೆಲ್ಲ ಪಶು, ಪಕ್ಷಿ, ಪ್ರಾಣಿ, ಪ್ರಕೃತಿ, ಪರಿಸರ ಎಲ್ಲವನ್ನು ಬಳಸಿಕೊಂಡು ಮಕ್ಕಳ ಮನೋಧರ್ಮವನ್ನು ಅರಗಿಸಿ ಕರಗತಮಾಡಿಕೊಂಡಿದ್ದಾರೆ.

ಜನಪದ ಸೊಗಡಿನ ಆಡು ನುಡಿಯ, ಮಕ್ಕಳ ಮನಸ್ಸಿನ ಹಲವು ಸಂವೇದನೆಗಳು ಸೂಸಿನಲ್ಲಿ ಅಂಕುರಿಸಿದ ಕಂಚ್ಯಾಣಿಯವರ ಶಿಶು ಕಾವ್ಯದ ಪರಿಸರ ಪ್ರೇಮ ರಮ್ಯವಾದುದು.

---

೧. ಮಕ್ಕಳ ಸಾಹಿತ್ಯ ಚಿಂತನೆ ಮತ್ತು ಸಿಸು ಸಂಗಮೇಶರ ಸ್ಮರಣಿ. ಸಾಹಿತ್ಯ ಅಕಾಡಮಿ.

೨. ಮಕ್ಕಳ ಸಾಹಿತ್ಯ ಚಿಂತನೆ – ಕವಿಗೋಷ್ಠಿ ಅಧ್ಯಕ್ಷರ ಭಾಷಣ– ಕಂಚ್ಯಾಣಿ ಶರಣಪ್ಪ.

ಪಕ್ಷಿ ಸಂಕುಲದ ನಿನಾದ, ಪುಟ್ಟ-ಪುಟ್ಟಿಯರ ಒಡನಾಟ, ಭಾವುಕತೆಯ ಸಂಬಂಧದ ವಿವಿಧ ಸ್ವರೂಪ-ಕವಿತೆಯ ವಸ್ತು, ಜಾನಪದದ ಲಯಗಾರಿಕೆ, ಛಂದ ಸ್ವಭಾವ, ಮನದ ಆಶೆ-ಆಕಾಂಕ್ಷೆಗಳು ಗಾಢಸಂಬಂಧವಿರುವ ಕಂಚ್ಯಾಣಿಯವರ ಶಿಶು ಕಾವ್ಯಕ್ಕೆ ಮೂಲ ಪ್ರೇರಣೆ ಅವರ ತಾಯಿ ರುದ್ರಮ್ಮನವರು. ನಂತರ ಪ್ರಾಥಮಿಕ ಶಾಲೆಯ ಪರಿಸರ ಹಾಗೂ ಮುದ್ದು ಮಕ್ಕಳು ಮತ್ತು ಸಹಪಾಟ-ಸ್ನೇಹಿತರು.

ಕಾವ್ಯವನ್ನು ಕವಿಯ ಬದುಕಿನಿಂದ ಬೇರ್ಪಡಿಸಿ ನೋಡುವದು ಉಚಿತವಲ್ಲ. ಕವಿಯ ಬದುಕಿನ ಹಿನ್ನಲೆ ಕಾವ್ಯದ ವಿಶ್ಲೇಷಣೆಗೆ ಪೂರಕ. ಕಂಚ್ಯಾಣಿಯವರ ಶಿಶು ಕಾವ್ಯ ಭಾವದ ಒತ್ತಡದಿಂದ ಮೂಡಿದ ಕಾವ್ಯ ಅವರ ಎಲ್ಲ ಶಿಶು ಕವಿತೆಗಳಲ್ಲಿ ಸಾಮಾಜಿಕ ಪ್ರಜ್ಞೆಯೊಂದಿಗೆ ಭಾವನಾತ್ಮಕ ಅಲೆಗಳು ನೆಲೆಗೊಂಡಿವೆ.

ಕಂಚ್ಯಾಣಿಯವರ ಶಿಶು ಸಾಹಿತ್ಯ ಕೃಷಿ ಅಪಾರವಾದುದು. ಅವರ ಒಟ್ಟು ಕೃತಿಗಳು ೨೦. ಇವುಗಳಲ್ಲಿ ಮಕ್ಕಳ ಕವಿತೆಗಳು, ಮಕ್ಕಳ ಕಥೆಗಳು, ಗದ್ಯ ಚರಿತ್ರೆ, ಖಂಡಕಾವ್ಯ ಮತ್ತು ಶಿಶು ಪ್ರಾಸಗಳು ಎಂದು ವಿಂಗಡಿಸಿ ನೋಡುವದು ಸೂಕ್ತ.

ಕಂಚ್ಯಾಣಿಯವರು ಮಕ್ಕಳ ಸಾಹಿತ್ಯ ರಚನೆಯಲ್ಲಿ ತಡವಾಗಿ ತೊಡಗಿಕೊಂಡರೂ ಸಿಡಿಲು-ಮಿಂಚಾಗಿ ಗುಡುಗಿದವರು. ಅವರ ಮೊಟ್ಟ ಮೊದಲ ಮಕ್ಕಳ ಕವನ ಸಂಕಲನ "ಅಜ್ಜನ ಹಾಡು" ೧೯೮೭ ರಲ್ಲಿ ಪ್ರಕಟವಾಯಿತು. ಆಗ ಕಂಚ್ಯಾಣಿಯವರಿಗೆ ೫೭ ವರ್ಷ ವಯಸ್ಸು. ಅಂದವಾದ ಮುಖ ಪುಟ ಹೊಂದಿದ 'ಅಜ್ಜನ ಹಾಡು' ಕೃತಿಯು ೨೪ ಮಕ್ಕಳ ಕವಿತೆಗಳನ್ನು ಒಳಗೊಂಡಿದೆ.

ಬಾಲಗಣಪನಿಂದ ಮೊದಲ ಕವಿತೆ ಪ್ರಾರಂಭಗೊಂಡು ಅಜ್ಜನ ಹಾಡು ಕವಿತೆಯೊಂದಿಗೆ ಮುಕ್ತಾಯ ಕಂಡ ಸಂಕಲನ ಯಾವುದೆ ಮುನ್ನುಡಿಯಾಗಲಿ ಬೇನ್ನುಡಿಯಾಗಲಿ ಹೊಂದಿಲ್ಲ. ಪ್ರತಿಯೊಂದು ಕವಿತೆಗಳು ಮಕ್ಕಳ ಮನಸ್ಸನ್ನು ತಣಿಸುತ್ತದೆ, ರಂಜಿಸುತ್ತವೆ.

ಕಂಚ್ಯಾಣಿಯವರ ಎಲ್ಲ ಕವಿತೆಗಳು ಸಚಿತ್ರವಾಗಿರುವದು ಒಂದು ರೀತಿಯಲ್ಲಿ ಮಕ್ಕಳಿಗೆ ಬಹುಬೇಗನೆ ಆಕರ್ಷಕವಾಗುತ್ತವೆ ವಿಶೇಷವಾಗಿ ಎಳೆಯ ಮಗು ಕವಿತೆಯೊಂದಿಗೆ ಚಿತ್ರವನ್ನು ನೋಡಿ ಆನಂದ ಹೊಂದುವದಲ್ಲದೆ ಕವಿತೆಯಲ್ಲಿ ಒಂದಾಗುತ್ತದೆ.

ಎಳೆಯ ತರು ದಿನದಿನವು ಹೊಸ ತಳಿರ ತಳೆವಂತೆ ।
ತಿಳಿನೀರ ಚಿಲುಮೆಯಲಿ ನಿಲದುಕ್ಕುವಂತೆ ॥
ಎಳೆಮಕ್ಕಳೊಳು ಅಳಿವುಮೊಳೆತು ಬೆಳೆವುದು ನೋಡು ।
ಇಳೆಯೋಳದೊಂದು ಸೊಗ-ಮಂಕುತಿಮ್ಮ. ॥

ಕಂಚ್ಯಾಣಿಯವರು ಶಿಕ್ಷಕರಾಗಿ ತಮ್ಮ ವೃತ್ತಿ ಜೀವನದಿಂದ ಘನತೆ-ಗೌರವ ಪಡೆದವರು. ಮುಗ್ಧ ಮಕ್ಕಳು ಬುದ್ಧಿಶಾಲಿಗಳಾಗಿ ಹೆಮ್ಮರವಾಗಿ ಬೆಳೆದುದನ್ನು ಕಂಡು ಹರುಷ ಪಟ್ಟವರು. ಎಳೆಯರ ಬಳಗಕ್ಕೆ ಕೊಟ್ಟ ಕಾಣಿಕೆ ಹಿರಿದು. ಡಿ.ವಿ.ಜಿ. ಯವರ ಮೇಲಿನ ಸಾಲುಗಳು ಅವರಿಗೆ ಕಲಶಪ್ರಾಯವಾಗಿವೆ.

ಮೈಮರೆತು ಮಕ್ಕಳೊಂದಿಗೆ ಆಡಲು ಬಾರದ, ಮೈದುಂಬಿ ಹಾಡಲು ಬಾರದ, ಚನ್ನಾಗಿ ಅಭಿನಯಿಸಲು ಬಾರದ, ಸುಂದರ ಕನಸು ಕಾಣಲು ಬಾರದವ ಶಿಕ್ಷಕನಾಗಲು ಸಾಧ್ಯವಿಲ್ಲ, ಆಡಿ, ಹಾಡಿ, ಅಭಿನಯಿಸಿ, ಕಥೆ ಹೇಳಿ ಕುತೂಹಲ ಕೆರಳಿಸಿ ಮಕ್ಕಳನ್ನು ಕಲಿಕೆಗೆ ಅಣಿಗೊಳಿಸಿ ಅವರ ಸುಂದರ ಕನಸುಗಳನ್ನು ಕಂಡು ಅವುಗಳನ್ನು ನನಸಾಗಲು ಪ್ರಯತ್ನಿಸುವವ ಶಿಕ್ಷಕನಾಗಲು ಸಾಧ್ಯ ಇಂಥ ವ್ಯಕ್ತಿತ್ವ ಕಂಚ್ಯಾಣಿಯವರದು.

ಕಂಚ್ಯಾಣಿಯವರ ಎರಡನೆಯ ಮಕ್ಕಳ ಕವನ ಸಂಕಲನ 'ಜಾಗ್ರತ ಭಾರತ' ಹೆಸರೇ ಸೂಚಿಸುವಂತೆ ಭಾರತ ದೇಶದ ಯುವ ಜನರಲ್ಲಿ ದೇಶಾಭಿಮಾನದ ಜಾಗ್ರತಿಯನ್ನುಂಟುಮಾಡು ಸಂದೇಶ ಹೊತ್ತ ಕೃತಿಯೆಂದು ಹೇಳಬಹುದು. ೨೨ ಕವಿತೆಗಳನ್ನೊಳಗೊಂಡ ಜಾಗ್ರತ ಭಾರತ ಸಚಿತ್ರದೊಂದಿಗೆ ಕವಿತೆಗಳಾಗಲಿ, ಮುಖ ಪುಟವಾಗಲಿ ಮಕ್ಕಳನ್ನು ಆಕರ್ಷಿಸುವಲ್ಲಿ ಸಂಧೇಹವೇ ಇಲ್ಲ.

ಸಂಕಲನದ ಮೊದಲ ಕವಿತೆ ಜಾಗ್ರತ ಭಾರತದಿಂದ ಪ್ರಾರಂಭಗೊಂಡರೂ, ಎಲ್ಲ ಕವಿತೆಗಳು, ಇದೇ ದಾಟಿಯಲ್ಲಿ ಸಾಗುವದಿಲ್ಲ. ಕೊನೆಯ ಕವಿತೆ ಲಟಿಕೆ ಮದುವೆ' ಎಂಬ ಕವಿತೆಯಿಂದ ಮುಕ್ತಯವಾಗುತ್ತದೆ.

ಶೂರ ಸುಭಾಸರ
ನೇತಾಜಿ ಭೋಸರ
ಜಾಗ್ರತ ಭಾರತ ಕಟ್ಟೋಣ ।
ಜಾಗ್ರತೆಯಿಂದ
ಜಾಗ್ರತರಾಗುತ
ಜೈ ಹಿಂದೆನ್ನುತ ಸಾಗೋಣ ॥ ೧

ಎಂದು ಪ್ರತಿಯೊಬ್ಬರ ಮನೆ-ಮನಗಳಲ್ಲಿ ಅಭಿಮಾನದ ಕೆಚ್ಚು ಹಚ್ಚುತ್ತ ಕವಿತೆ ಸಾಗುತ್ತದೆ.

'ಇಲ್ಲೆ ಇರು ಅಲ್ಲಿಗ್ಹೋಗಿ ಮಲ್ಲಿಗೆಯನು ತರುವೆನು
ನೇಹಕೊಂದು ನಲುಮೆಗೊಂದು ಗುರತನಿರಿಸಿ ಬರುವೆನು' ೨

ಎಂಬ ಭಾವಗೀತೆಯ ಸಾಲುಗಳಲ್ಲಿ ತುಂಬಿ ನಿಂತ ಸುವರ್ಣ ಸಂದೇಶವನ್ನು ಕಂಚ್ಯಾಣಿಯವರು ಬಾಲ್ಯದ ಅವಸ್ಥೆಯಿಂದಲೇ ಬದುಕಿನ ಹೆಜ್ಜೆಗಳನ್ನು ಕಂಡು ಸವೆಸುತ್ತ ಬಂದವರು. ಬಾಳಿನ ಕಡಲಿನಲಿ ಮುಳುಗಿ ಯಶಸ್ವಿನ ಮುತ್ತುಗಳನ್ನು ಹೊತ್ತು ತಂದ ಜಯಶೀಲರು.

'ಮನೆ ನೋಡಾ ಬಡವರು, ಮನ ನೋಡಾ ಘನಮನ ಸಂಪನ್ನರು' ಇದು ಹೃದಯ ಶ್ರೀಮಂತಿಕೆಯ ಕಂಚ್ಯಾಣಿಯವರ ಬದುಕು. ಎತ್ತರದ ನಿಲುವು, ಮಕ್ಕಳ ಮುಖದ, ಬಾದಾಮಿ ಬಣ್ಣದ ವಿಶಾಲವಾದ ಹಣೆ, ಸದಾ ಹಸನ್ಮುಖಿ, ಸ್ವಾತಂತ್ರ್ಯದ ಕುರುಹುವಾದ ಗಾಂಧಿ ಟೊಪ್ಪಿಗೆ, ನೆಹರು ಶರ್ಟು, ಬಿಳಿಯಾದ ದೋತರ ಕನ್ನಡಕ ಧರಿಸಿರುವ 'ಸಜ್ಜನಿಕೆಯ ಅಜ್ಜ' ಕಂಚ್ಯಾಣಿಯವರು ಕಾವ್ಯದ ತುಂಬೆಲ್ಲ ಚಿತ್ರಿತಗೊಂಡವರು.

---

೧. ಜಾಗ್ರತ ಭಾರತ- ಆಯ್ದ ನೂರೊಂದು ಕವಿತೆಗಳು : ಕಂಚ್ಯಾಣಿ ಶರಣಪ್ಪ.
೨. ಡಾ.ವ್ಹಿ.ಕೆ. ಗೋಕಾಕ - ಸಂದೇಶ.

'ಇಟ್ಟರೆ ಸೆಗಣಿಯಾದೆ, ತಟ್ಟಿದರೆ ಕುರುಳಾದೆ, ಸುಟ್ಟರೆ ನೊಸಲಿಗೆ ವಿಭೂತಿಯಾದೆ' ಎಂಬ ಮಾತಿನಂತೆ ಗೋವು ತನ್ನ ಸಾರ್ಥಕ ಬದುಕಿನ ಕಥೆಯನ್ನು ಹೇಳುತ್ತದೆ. 'ತಾನು ತನ್ನದೆಲ್ಲವೂ ಪರಹಿತಕ್ಕಾಗಿ' ಎಂಬ ಭಾವನೆಯಿಂದ ಬದುಕುವ ಗೋವು ಮಾನವನ್ನು ಎಚ್ಚರಿಸುತ್ತದೆ. ಇಂಥ ಎಚ್ಚೆತ್ತ ಜೀವಿಗಳು ಕಂಚ್ಯಾಣಿಯವರು ಬದುಕಿನ ಸಾರ್ಥಕತೆಯ ಗುಟ್ಟನ್ನು ಅಪಾರ ಜೀವನಾನುಭವದಿಂದ ಕಂಡುಕೊಂಡು ತಮ್ಮ ಶಿಶು ಕಾವದಲ್ಲಿ ಮೂಡಿಸಿದ್ದಾರೆ.

ಕಂಚ್ಯಾಣಿಯವರ ಮೂರು ಮತ್ತು ನಾಲ್ಕನೆಯ ಕವನ ಸಂಕಲನಗಳು ಮಕ್ಕಳ ಮನೆ ಮತ್ತು ಹುಟ್ಟು ಹಬ್ಬ. ಇವೆರಡರಲ್ಲಿಯೂ ಸಚಿತ್ರಗಳನ್ನೊಳಗೊಂಡ ಹದಿನೇಳು, ಹದಿನೇಳು ಕವಿತೆಗಳಿವೆ. ಮಕ್ಕಳ ಮನೆ ಕೃತಿಯು ಸುಂದರ ಸ್ವರೂಪದ, ಸರಳತೆಯ ಭಾಷೆ ಹೊಂದಿದ್ದರೂ ಬೆರಗಿನಿಂದ ಕೂಡಿದೆ. 'ಹೆಸರು ಹೇಳಿರಣ್ಣ' ಕವಿತೆಯಿಂದ 'ಸೊಗಸು' ಕವಿತೆಯವರೆಗೆ ಸಾಗುತ್ತದೆ. 'ಹುಟ್ಟು ಹಬ್ಬ' ಮಕ್ಕಳಲ್ಲಿ ದೇಶಭಿಮಾನದ, ವ್ಯಕ್ತಿಚಿತ್ರಗಳಿಂದ ಹೆಣೆದ ಕವಿತೆಗಳಿದ್ದು ಕೇಲವು ನೀತಿಯ ಬೋಧನೆಯ ಸ್ವರೂಪವನ್ನು ಪಡೆದಿವೆ.

೧೫ ಕವಿತೆಗಳನ್ನೊಳಗೊಂಡ ಕೃತಿ– 'ತಮ್ಮನ ಶಾಲೆ' ಕವನ ಸಂಕಲನ ಕಂಚ್ಯಾಣಿಯವರ ಐದನೆಯ ಕೃತಿ ೧೯೯೧ ರಲ್ಲಿ ಪ್ರಕಟವಾಯಿತು. ಸ್ವಂತ ಪ್ರಕಾಶನವಾದ 'ಗ್ರಾಮೀಣ ಪ್ರತಿಭಾ ಪ್ರಕಾಶನ' ಅಡಿಯಲ್ಲಿ ಮುದ್ರಣಗೊಂಡ 'ತಮ್ಮನ ಶಾಲೆ' ಮುಖ ಪುಟ–ಸುಂದರವಾದ ಮುಗ್ಧ ತಮ್ಮನು ಶಾಲೆಗೆ ಹೋಗುವ ಚಿತ್ರ ಮನಸೂರೆಗೊಳ್ಳುತ್ತದೆ. ಒಟ್ಟು ೨೧ ಕವಿತೆಗಳನ್ನು, ಒಳಗೊಂಡಿದೆ. 'ತಮ್ಮನ ಶಾಲೆ' ಕವಿತೆಯೊಂದಿಗೆ ಪ್ರಾರಂಭವಾಗಿ 'ಬಿಸಿಲು ಕುದುರೆ'ಯಲ್ಲಿ ಅಂತ್ಯವಾಗುವ ಕೃತಿಯ ಕವಿತೆಗಳು ವಿಚಾರಪೂರ್ಣವಾಗಿವೆ.

ತೋಟದ ಆಟ, ಚೆಲುವಿನ ಚಿಟ್ಟೆ, ಪುಟ್ಟಿಯ ತೋಟ ನಂತರದ ಕವಿತಾ ಸಂಕಲನಗಳು. ಮುಖಪುಟ ಮುದ್ರಣ ಮಕ್ಕಳ ವಿವಿದ ಆಟ–ನೋಟಗಳ ಚಿತ್ರಣವನ್ನು ಹೊಂದಿ ಅಂದವಾಗಿ ಹೊರಬಂದಿದೆ. ಪ್ರತಿಯೊಂದು ಕವಿತೆಗಳು ತಮ್ಮದೇ ಲಯದಲ್ಲಿ ಸಾಗಿದ ಆಡುನುಡಿಯ ಮಕ್ಕಳ ಮನದ ಭಾವನೆಗಳ ಅಭಿವ್ಯಕ್ತಯಾಗಿವೆ.

ಅನಂತರದ ಸಂಕಲನ 'ಗುಡು ಗುಡು ಗುಂಡ' ಶಿಶು ಪ್ರಾಸಗಳಿಂದ ಕೂಡಿದೆ. 'ಗ್ರಾಮೀಣ ಪ್ರತಿಭಾ ಪ್ರಕಾಶನ' ವಿಜಾಪುರ ಇದರ ಅಡಿಯಲ್ಲಿ ಮುದ್ರಣಗೊಂಡ ಈ ಸಂಕಲನದ ಸಚಿತ್ರ ಶಿಶು ಗೀತೆಗಳು' ಒಟ್ಟು ೪೬.

ಪ್ರಾಸಕ್ಕೆ ಗಂಟು ಬಿಳದೆ ಸರಳ ಪದಗಳ ಸಹಜ ಜೋಡಣೆ ಬೆಸೆದ ಕಂಚ್ಯಾಣಿಯವರು ಶಿಶು ಕಾವ್ಯದ ಮೆರುಗನ್ನು ಹೆಚ್ಚಿಸಿದ್ದಾರೆ. 'ಸೊಂಡಿ ಗಣಪ' ನಿಂದ 'ಗುಡು ಗುಡು ಗುಂಡ' ಶಿಶು ಕವಿತೆಯವರೆಗೆ ಎಲ್ಲವೂ ಪ್ರಾಸಮಯ ಹೊಂದಿಲ್ಲ. ಕೆಲವು ಕಾವ್ಯದ ಧ್ವನಿಯನ್ನು ಮತ್ತು ಶಿಶು ಕಾವ್ಯದ ಆಶಯವನ್ನು ತಿಳಿಸುವಾಗ ಪ್ರಾಸದಿಂದ ಮುಕ್ತವಾಗಿವೆ.

ಅಜ್ಜನು ಬಂದನು
ಮನೆಯೊಳಗೆ ।
ಗುನುಗುನು ಗುಟ್ಟುತ
ಬಾಯೊಳಗೆ ।
ಪೆನ್ನನು ಹಿಡಿದನು
ಕೈಯೊಳಗೆ ।
ಹಾಡನು ಬರೆದನು
ಮಕ್ಕಳಿಗೆ । ೧

ಕಂಚ್ಯಾಣಿಯವರ ಎಲ್ಲ ಕವನ ಸಂಕಲನಗಳಲ್ಲಿ 'ಪುಟ್ಟಿಯ ತೋಟ' ಕೃತಿಯು ಸುಂದರ ಹಾಗೂ ಸಮೃದ್ಧ ವಿಷಯಗಳಿಂದ ಒಡಗೂಡಿದುದು. ೨೨ ಕವಿತೆಗಳಿಂದ ಕೂಡಿದ ಸಚಿತ್ರ ಸಂಕಲನ ಮೋಹಕವಾದುದು. ಕಾರಣ ಇಲ್ಲಿಯ ಕವಿತೆಗಳೆಲ್ಲ ಮಕ್ಕಳಿಗೆ ಪ್ರಿಯವಾಗುವ ಗಿಡ, ಬಳ್ಳಿ, ತೋಟ, ಪಟ್ಟಿ ವನಸಿರಿ, ನಾಡು-ನುಡಿಯ ಅಭಿಮಾನ ಮೊದಲಾದವು ಒಡ ಮೂಡಿವೆ.

'ಹಕ್ಕಿಯ ಬಾಳು' ಕವಿತೆ, ಜೀವಿಯು ಬದುಕನ್ನು ಸಾಗಿಸಲು ಕಲಿಸಿಕೊಡುವ ತಾಯಿ ಹಕ್ಕಿ ಮಾದರಿಯಾಗಿದೆ. ಹೊಸದೊಂದು ಬದುಕಿಗೆ ಹೆಣ್ಣು-ಗಂಡು ಪೂರಕವಾಗಿ ಬೇಕೆಂದು ಕವಿ ಕಂಚ್ಯಾಣಿಯವರ ಆಶಯ.

'ಮೋಜಿನ ಮದುವೆ'ಯಲ್ಲಿಯೂ ಸಹ ಮಕ್ಕಳು ಅಜ್ಜ-ಅಜ್ಜಿಯ ಮದುವೆ ನಡೆದರೆ ಹೇಗೆ? ಎಂಬ ಅನಿಸಿಕೆಯನ್ನು ಕವಿತೆಯಲ್ಲಿ ವ್ಯಕ್ತವಾಗಿ,

"ಅಜ್ಜಗೆ ಎಪ್ಪತ್ತು ವರ್ಷ ಅಜ್ಜಿಗೆ ಅರವತ್ತು ವರ್ಷವಾಗಿತ್ತು ।
ಇವರ ಮದುವೆ ನಡೆದಿತ್ತು ।
ಅಜ್ಜನ ತಲೆಯು ಬೋಳಾಗಿತ್ತು ।
ನುಣ್ಣಗೆ ಮಿರಿ ಮಿರಿ ಮಿಂಚುತ್ತಿತ್ತು ।
ಬಾಯಲ್ಲಿ ಹಲ್ಲಿನ ಸಟ್ಟಿತ್ತು ।
ಅಜ್ಜಿಯ ತಲೆಯು ಹತ್ತಿಯಾಗಿ ನಡುಗುತ್ತಿತ್ತು ।
ಬಾಯಲಿ ಒಂದು ಹಲ್ಲು ಇಲ್ಲದೆ ನಿಬ್ಬಣ ನಡೆದಿತ್ತು ।
ಅಜ್ಜಿಯು ಅಜ್ಜನ ಬಳಿಯಲಿ ಕುಳಿತಿತ್ತು ।
ಚಂದದ ಸುರಿಗೆ ಸುತ್ತಿತ್ತು ।
ಅಕ್ಷತೆ ಹಾಕಿ ನಲಿದಿತ್ತು ।
ಮೋಜಿನ ಮದುವೆ ಮುಗಿದಿತ್ತು."॥ ೨

ಇದು ಕಂಚ್ಯಾಣಿಯವರ ಕಲ್ಪನೆ. ಇಳಿವಯಸ್ಸಿನಲ್ಲಿ ತಮ್ಮ ಮದುವೆಯನ್ನು ತಾವು ಮಗುವಾಗಿ ಆಚರಿಸುವ ಪರಿ ಅದ್ಭುತವಾದುದು.

---

೧. ಅಜ್ಜನ ಹಾಡು-ಗುಡು ಗುಡು ಗುಂಡ-ಕಂಚ್ಯಾಣಿ ಶರಣಪ್ಪ.
೨. ಮೋಜಿನ ಮದುವೆ : ಪುಟ್ಟಿಯ ತೋಟ ಕಂಚ್ಯಾಣಿ ಶರಣಪ್ಪ.

ಪ್ರಕೃತಿಯ ಮಡಿಲಲ್ಲಿ ಬೆಳೆದ ಕಂಚ್ಯಾಣಿಯವರು ಹಳ್ಳಿಯ ಗ್ರಾಮ ಸಂಸ್ಕೃತಿಯನ್ನು ತಮ್ಮ ಕವಿತೆಯಲ್ಲಿ ಹೆಚ್ಚು ಬಿಂಬಿಸುತ್ತಾರೆ.

"ಪರಿ ಪರಿ ಪೈರು ಬೆಳೆದಾವ
ಕೈ ಕೈ ಬೀಸಿ ಕರೆದಾವ
ಹಚ್ಚಗ ಹಸಿರು ಮುರದಾವ
ಮನಸ್ಸಿಗೆ ಸಂತಸ ನೀಡ್ಯಾವ."॥ ೧

ಜನಪದ ಸೊಗಡಿನ ಕಾವ್ಯ ಶೈಲಿ ಕಂಚ್ಯಾಣಿಯವರಿಗೆ ಬಳುವಳಿಯಾಗಿ ಬಂದುದು. ಎಳ್ಳಮವಾಸಿಯ ದಿನದಂದು ಎಲ್ಲರೂ ಹೊಲಕ್ಕೆ ಹೋಗುವ ಸಂಭ್ರಮ, ಮಕ್ಕಳ ಉತ್ಸಾಹ, ತುಂಬಿ ನಿಂತ ಹೊಲದ ಪೈರು ಮೊದಲಾದ ಸಂಗತಿಗಳನ್ನು, ಪರಂಪರೆ, ಸಂಪ್ರದಾಯಗಳನ್ನು ಕಣ್ಣಿಗೆ ಕಟ್ಟುವಂತೆ ಸೆರೆ ಹಿಡಿದಿದ್ದಾರೆ.

ಮಕ್ಕಳ ವಯೋಮಾನಕ್ಕೆ ತಕ್ಕಂತೆ ತಮ್ಮದೆ ಆದ ಅನುಭವ, ಕಲ್ಪನೆ, ಶಬ್ದ ಸಂಪತ್ತು ಮತ್ತು ವಿಚಾರಗಳಿಗೆ ಸ್ಪಂದಿಸಬೇಕಾಗುವದರಿಂದ ಅಂಥ ಸಾಹಿತ್ಯವನ್ನು ಮಕ್ಕಳ ಕವಿಗಳು ಸಾಹಿತ್ಯವನ್ನು ರಚಿಸಬೇಕಾಗುತ್ತದೆ. ಈ ಮಾತಿಗೆ ಅನುಗುಣವಾಗಿ, "ಯಾವ ಸಾಹಿತ್ಯವು ಮುದ್ದು ಮಕ್ಕಳ ಮನಸ್ಸನ್ನು ಆನಂದಗೊಳಿಸುವದಿಲ್ಲವೋ, ಕಲ್ಪನೆಯನ್ನು ಸೃಷ್ಟಿಸುವದಿಲ್ಲವೂ, ಭಾವ-ಅನುಭಾವವನ್ನು ಅನುಭೂತಿಯೊಂದಿಗೆ, ವಿಶ್ಲೇಷಣೆ ನೀಡುವದಿಲ್ಲವೋ, ತನ್ನ ತನವನ್ನು ಉದ್ದೀಪಸಗೊಳಿಸುವದಿಲ್ಲವೋ, ಸಾಂಸ್ಕೃತಿಕ ರೀತಿ-ನೀತಿ ನಿಯಮಗಳನ್ನು ಅಳವಡಿಸುವದಿಲ್ಲವೋ, ಇತಿಹಾಸ ನಿರ್ಮಿಸಿ ದಾರಿದೀಪವಾಗುವದಿಲ್ಲವೋ ಅದು ಮಕ್ಕಳ ಸಾಹಿತ್ಯವಲ್ಲ" ಎಂದು 'ಸಿಸು' ಸಂಗಮೇಶರು ನುಡಿಯುತ್ತಾರೆ. ಇಲ್ಲಿ ಸೀಮಿತವಾದ ಉದ್ದೇಶ, ವಿಚಾರ, ಇರುವದೇ ವಿನಃ ಸೌಂದರ್ಯ ಅನುಭೂತಿಗಳಿರುವದಿಲ್ಲ. ಇದು ಕಂಚ್ಯಾಣಿಯವರ ಕಾವ್ಯದಲ್ಲಿ ಸರಾಗವಾಗಿ ತೇಲುತ್ತ ಸಾಗಿದೆ.

"ನೆಲವನು ನೋಡದೆ ಹೊರಟಿದ್ದ
ಕಾಣದೆ ಕಲ್ಲಿಗೆ ಎಡವಿದ್ದ ।
ದೊಪ್ಪನೆ ಭೂಮಿಗೆ ಬಿದ್ದಿದ್ದ
ಅಯ್ಯೋ ! ಎಂದು ಚೀರಿದ್ದ ॥
ಒಡದೇ ಹೋಯಿತು ಗಡಿಯಾರ
ಮಣ್ಣೇ ಮುಕ್ಕಿತು ಬಡಿವಾರ.।" ೨

ಇದು ತಿಪ್ಪನ ಜಂಬದ ಗತಿಯನ್ನು ಚಿತ್ರಿಸುವಲ್ಲಿ ಮತ್ತು ಮಕ್ಕಳನ್ನು ಆಕರ್ಶಿಸುವ ರೀತಿ ಕಂಚ್ಯಾಣಿಯವರಲ್ಲಿ ಎದ್ದು ತೋರುತ್ತದೆ. ಹಾಗೆಯೇ ಕವಿಗಳು ಇಲ್ಲಿ ಅಹಂಕಾರದ ಗುಣದಿಂದ ಹಾನಿ ಖಂಡಿತ ಎನ್ನುವದನ್ನು ಸಹ ಮಕ್ಕಳಿಗೆ ತಿಳಿಸಲು ಪ್ರಯತ್ನಿಸಿದ್ದು ಮಾರ್ಮಿಕವಾದುದು.

---

೧. ಎಳ್ಳಮವಾಸಿ : ಪುಟ್ಟಿಯ ತೋಟ ಕಂಚ್ಯಾಣಿ ಶರಣಪ್ಪ.
೨. ಬಡಿವಾರ : ಬೆದರು ಬೆಚ್ಚ ಪುಟ-೨೯ ಕಂಚ್ಯಾಣಿ ಶರಣಪ್ಪ.

"ತಿಪ್ಪನು ಜಾತ್ರೆಗೆ ಹೋಗಿದ್ದ
ಬಣ್ಣದ ಬಲೂನ ಕೊಂಡಿದ್ದ
ತಕ ತಕ ಕುಣಿಯುತ ನಡೆದಿದ್ದ ।
ಸರಸರ ಮರವನು ಏರಿದ್ದ
ಟೊಂಗಿ ಮೇಲೆ ಕುಳಿತಿದ್ದ
ಬಣ್ಣದ ಬಲೂನ ಹಿಡಿದಿದ್ದ."॥ ೧

ಇಂಥ ದೃಶ್ಯಗಳನ್ನು ಆಯ್ದುಕೊಳ್ಳುವಲ್ಲಿ ಕಂಚ್ಯಾಣಿಯವರು ಸಿದ್ಧ ಹಸ್ತರು. ಇವರ ಕಾವ್ಯದ ವಸ್ತು ಸರಳ ಮತ್ತು ನೈಜತೆಯಿಂದ ಕೂಡಿಕೊಂಡಿರುವದರಿಂದ ಮಗು ಥಟ್ಟನೆ ಗ್ರಹಿಸುತ್ತದೆ. ತಿಪ್ಪನ ಜಾತ್ರೆಯ ಸಂಭ್ರಮ, ಬಲೂನ ಹಿಡಿದು ಓಡಾಡುವ, ಮರವೇರಿ ಆನಂದಿಸುವಾಗ ಹಕ್ಕಿಯೊಂದು ಹಾರಿಬಂದು ಹಣ್ಣು ಎಂದು ಕುಕ್ಕಿದಾಗ ಬಲೂನೂ ಒಡೆದು ಹೋಗುವದು. ಇದು ಮಗುವಿನಲ್ಲಿ ಆನಂದ ಹುಟ್ಟಿಸುವದರೊಂದಿಗೆ ವಿಸ್ಮಯವನ್ನು ಮೂಡಿಸುತ್ತದೆ.

ಮಕ್ಕಳಲ್ಲಿ ಮಾನವೀಯ ಗುಣಗಳಾದ ಸತ್ಯ, ಪ್ರೀತಿ, ಅಹಿಂಸೆ, ದಯೆ, ಸಹಾಯ-ಸಹಕಾರ, ಪರೋಪಕಾರ, ಗುರು-ಹಿರಿಯರಲ್ಲಿ ಗೌರವ ಮೊದಲಾದ ನೀತಿಯುತ ಮೌಲ್ಯಗಳನ್ನು ಮಕ್ಕಳು ಬೆಳೆಸಿಕೊಳ್ಳಲು ಕಂಚ್ಯಾಣಿಯವರು ತಮ್ಮ ಕವಿತೆಗಳಲ್ಲಿ ಕರೆನೀಡಿದ್ದಾರೆ.

"ಕುಟು ಕುಟು ಕುಕ್ಕಿ ಚೆಕ್ಕಿಯ ಹೆಕ್ಕಿ ।
ಮರಗಳ ಕೊರೆಯುವ ಕ್ರಿಮಿಗಳ ಮುಕ್ಕಿ॥
ಕಾಡಿನ ರಕ್ಷಕ ಬಡಿಗನ ಹಕ್ಕಿ।
ಪರಿಸರ ಪಾಲಕ ಚಲುವಿನ ಚುಕ್ಕಿ."॥ ೨

ಪರಿಸರ ಪ್ರೇಮಿಯಾದ ಕಂಚ್ಯಾಣಿಯವರು ಪ್ರಕೃತಿಯ ಆಗು-ಹೋಗುಗಳ ಬಗ್ಗೆ ಕಾಳಜಿ ಹೊಂದಿದವರು. ನಾಡಿನ ರಕ್ಷಣೆ ಯುವಜನತೆಯಲ್ಲಿದ್ದರೆ, ಕಾಡಿನಲ್ಲಿಯ ಅನೇಕ ಪಕ್ಷಿಗಳ ಸಂಕುಲ ಗಿಡ-ಮರಗಳನ್ನು ಸಂರಕ್ಷಣೆ ಮಾಡುವ ಕಾರ್ಯದಲ್ಲಿ ನಿರತವಾಗಿರುವದನ್ನು ಬಡಿಗನ ಹಕ್ಕಿಯನ್ನು ಚಿತ್ರಿಸುವಲ್ಲಿ ವ್ಯಕ್ತಪಡಿಸುತ್ತಾರೆ. ಬರೀ ಮರ ಕುಕ್ಕುವ ಕಾಯಕವಾಗದೆ ಮರಕ್ಕೆ ಹಿಡಿದ ಹುಳುವನ್ನು ಕುಕ್ಕಿ ತಿನ್ನುವ ಹಕ್ಕಿಯ ಜೀವನ ಕ್ರಮ ಕಂಚ್ಯಾಣಿಯವರಿಗೆ ವಿಸ್ಮಯ ಮೂಡಿಸಿದೆ.

ಸಾಹಿತ್ಯದ ಆಶಯವು ಅಂತರಂಗದ ಶೋಧನೆಯ ಮೂಲಕ ವ್ಯಕ್ತಿಯ ಅಂತರಂಗ ವಿಕಾಸ ಅಥವಾ ಆತ್ಮವಿಕಾಸವಾಗಿ ಆತನು ಬದುಕನ್ನು ಸಾರ್ಥಕ ಪಡಿಸಿಕೊಳ್ಳಬೇಕಾಗುತ್ತದೆ. ಆಗಲೆ ಮಾತ್ರ ವ್ಯಕ್ತಿಯ ಮೇಲೆ ಒಳ್ಳೆಯ ಸಂಸ್ಕಾರಗಳು ಅವನ ಅಭಿವ್ಯಕ್ತಿ ಜೀವನವು ಲೋಕದ ಹಿತಕ್ಕೆ ಪೂರಕವಾಗುತ್ತವೆ. ಸುಖ-ದುಃಖಗಳನ್ನು ಮೀರಿದ ಆತನ ಅಭಿವ್ಯಕ್ತಿಯು ಬಹಿರಂಗ ಪರಿಸರದ ನೆಲೆಯಲ್ಲಿ ಸಾಗುತ್ತದೆ. ಇದು ಕಂಚ್ಯಾಣಿಯವರ ಕಾವ್ಯದ ಸೆಲೆ. ಮಗು ಪರಿಸರದ ಕೂಸು ಆ ನಿಟ್ಟಿನಲ್ಲಿ ಕವಿತೆ ಸಾಗಬೇಕೆನ್ನುವದು ಇವರ ಆಶಯ.

---

೧. ಬಣ್ಣದ ಬಲೂನ : ಬೆದರು ಬೆಚ್ಚ ಪುಟ-೨೪ ಕಂಚ್ಯಾಣಿ ಶರಣಪ್ಪ.
೨. ಚಲುವಿನ ಚುಕ್ಕಿ : ಬೆದರು ಬೆಚ್ಚ ಪುಟ-೫ ಕಂಚ್ಯಾಣಿ ಶರಣಪ್ಪ.

"ಬೇರೆಯಾದರೇನು ಹಗಲು–ಇರುಳು ಒಂದೆ ದಿನದಲಿ ।
ಮೂಡು–ಮುಳುಗು ಬೆಸುಗೆಯಾಗಿ ಚಲಿಸುತಿಹವು ಕ್ರಮದಲಿ ॥
ಗಂಡು–ಹೆಣ್ಣು ಎರಡು ಜಾತಿ ಒಂದೆ ಒಂದು ಕುಲದಲಿ ।
ಹಲವು ಜಾತಿ ಭೇದ ನೀತಿ ಏಕೆ ಮೂಢತನದಲಿ."॥ ೧

ಕಂಚ್ಯಾಣಿಯವರ ಕವಿತೆಗಳ ನೆಲೆಯನ್ನು ಗುರುತಿಸುವದು ಸುಲಭವಾದರೂ ಅದನ್ನು ವಿಶ್ಲೇಷಣೆಗೆ ಒಳಪಡಿಸುವದು ಕಠಿಣವಾದುದು. ಭೂಮಿಯ ಮೇಲಿನ ಪ್ರತಿ ಜೀವಿಯು ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಂಡು ಬದುಕುತ್ತದೆ. ಆದರೆ ಈ ಭಾವನೆಯ ಕಲ್ಪನೆ ಪಕ್ಷಿ–ಪ್ರಾಣಿಗಳಲ್ಲಿ ಹದವಾಗಿ, ಮುಧುರತೆಯ ಪ್ರೀತಿಯಿಂದ ಕೂಡಿದ್ದರೆ. ಸಮಾಜ ಜೀವಿ ಮಾನವ ಸ್ವಾರ್ಥದ ಮಡಿಕೆ. ಮೇಲು–ಕೀಳು ಬಡವ–ಸಿರಿವಂತ, ಮೊದಲಾದ ಭೇದವನ್ನು ಮಾಡಿ ಮೂಢತನದಿಂದ ಬದಕನ್ನು ಸವೆಸುವ ಮಾನವನನ್ನು ಅಣಕಿಸಿದ್ದಾರೆ. ಏಳು ಬಣ್ಣವಾದರೂ ಕಿರಣ ಒಂದು ಎನ್ನುವದಾಗಲಿ, ಹಗಲು–ಇರುಳು ಬೇರೆಯಾದರೂ ಅವುಗಳ ಕ್ರಮ ಒಂದೇ ಎನ್ನುವದಾಗಲಿ, ಕಂಚ್ಯಾಣಿಯವರು ನಾವೆಲ್ಲ ಒಂದು ಎನ್ನುವದನ್ನು ದೃಷ್ಟಾಂತಗಳ ಮೂಲಕ ಚಿತ್ರಿಸಿದ್ದಾರೆ.

ಸಾಹಿತ್ಯದ ಆಶಯವನ್ನು ಸಾಧಿಸಲು ವ್ಯಕ್ತಿಯು ಕವಿ ಮನಸ್ಸನ್ನು ತಾಳಿ ಅಂತರಂಗದ ವಿಕಾಸದಲ್ಲಿ ತೊಡಗಿ "ಈಸಬೇಕು ಇದ್ದು ಜಯಿಸಬೇಕು" ಎಂಬ ಧೃಢ ನಿರ್ಧಾರ ಹೊಂದಿರಬೇಕು. ಇದನ್ನು ಪೂರೈಸಲು, ಒಂದು ನಿದರ್ಶನ, ಕಡಲಿನ ಸಾಧನೆಗೆ ಇರುವ ಸಾವಿರಾರು ಜೀವನದಿಗಳು ಹರಿದು ಬಂದು ಸೇರುವ ಸಾಲುಗಳಿರುವಂತೆ, ದಾರಿಗಳಲ್ಲಿ ಮೇಲುನೋಟಕ್ಕೆ ಹಲವಾರು ಕಾಣುತ್ತವೆ. ಈ ಸಾಹಿತ್ಯದ ಹೊರಮೈಯ ಮೇಲೆ, ಕವಿಯು ಬಾಳಿಬದುಕಿದ ನೆರಳುಗಳು ಇದ್ದೇ ಇರುತ್ತದೆ. ಆ ನೆರಳನ್ನು ಸರಿಸಿದಾಗ ಮಾತ್ರ ಕವಿಗೆ ಮಗುವಿನ ಸೂಕ್ಷ್ಮ ನೆಲೆಯ ರೂಪದರ್ಶನವಾಗುವದೆಂದು ಕಂಚ್ಯಾಣಿಯವರ ಅಭಿಮತ.

"ಬಣ್ಣ ಬಳಿಯದಂಥ ಶಾಲೆ
ಸುಣ್ಣ ಕಾಣದಂಥ ಶಾಲೆ
ಸೋರುತಿಹುದು ತಲೆಯ ಮೇಲೆ
ಕೊಚ್ಚೆ ಕೊಳಚೆ ನೆಲದ ಮೇಲೆ."॥ ೨

ಕಂಚ್ಯಾಣಿಯವರು ಒಂದು ರೀತಿಯಿಂದ ಅನುಭಾವಿ, ಧಾರ್ಶನಿಕರು. ಮೇಲ್ನೋಟಕ್ಕೆ ಅವರ ಈ ಕವಿತೆಯ ಸಾಲುಗಳು 'ನಮ್ಮ ಶಾಲೆಯ' ಸ್ಥಿತಿ–ಗತಿಯನ್ನು ಚಿತ್ರಿಸಿದರೆ, ವಾಸ್ತವ ಬದುಕನ್ನು ಸಹ 'ಸೋರುತಿಹುದು ತಲೆ ಮೇಲೆ' ಎನ್ನುವಲ್ಲಿ ಬಿಂಬಿತವಾಗಿದೆ. ಹೀಗಾಗಿ ಇವರನ್ನು ಕೆಲವರು ಸಂತ ಕವಿ ಎಂತಲೂ ಕರೆದಿದ್ದಾರೆ.

ಸಾಮಾಜಿಕ ವ್ಯವಸ್ಥೆ ಜಡ್ಡುಗಟ್ಟಿ ವಿಷಮತೆ ತಲೆ ಎತ್ತಿದಾಗ ಹೊಸ ದೃಷ್ಟಿಕೋನದ, ಮನೋಧರ್ಮ ಹೊಂದಿದ ಜನಗಳು ಅದನ್ನು ಪ್ರತಿಭಟಿಸುತ್ತಾರೆ ಪ್ರತಿಭಟನೆ ಕ್ರಾಂತಿಯತ್ತ ತಿರುಗಿ ಪರಿವರ್ತನೆಗೆ ಕಾರಣವಾಗಬೇಕಾದರೆ ನೈತಿಕ ಹಾಗೂ ತಾತ್ವಿಕ ದೃಷ್ಟಿಯುಳ್ಳ ನೇತಾರರ ಅಗತ್ಯವಾಗುತ್ತದೆ.

---

೧. ಒಂದೇ ಒಂದು : ತಮ್ಮನ ಶಾಲೆ ಪುಟ–೮ ಕಂಚ್ಯಾಣಿ ಶರಣಪ್ಪ.
೨. ನಮ್ಮ ಶಾಲೆ : ತೊಟ್ಟಿಲು ಗುಬ್ಬಿ ಪುಟ–೧೩ ಕಂಚ್ಯಾಣಿ ಶರಣಪ್ಪ.

"ವೇದಂಗಳೆಂಬವು ಬ್ರಹ್ಮನ ಬೂತಾಟ
ಶಾಸ್ತ್ರಂಗಳೆಂಬವು ಸರಸ್ವತಿಯ ಗೊಡ್ಡಾಟ
ಆಗಮಂಗಳೆಂಬವು ಋಷಿಯ ಮರುಳಾಟ
ಪುರಾಣಗಳೆಂಬವು ಪೂರ್ವದವರ ಗೊಡ್ಡಾಟ
ಇಂತು ಇವನು ಅರಿದವರ ನೇತಿಗಳೆದು
ನಿಜದಲ್ಲಿ ನಿಂದಿಪ್ಪಾತನೆ ಗುಹೇಶ್ವರನಲ್ಲಿ ಅಚ್ಚಲಿಂಗೈಕ್ಯನು." ೧

ಎಂಬ ಅಲ್ಲಮ ಪ್ರಭುವಿನ ಈ ವಚನದಲ್ಲಿ ಯಜಮಾನ ಸಂಸ್ಕೃತಿಯನ್ನು ಧಿಕ್ಕರಿಸುವ ಹಾಗೆಯೇ ಕಂಚ್ಯಾಣಿಯವರು ಇಂಥ ಸಂಸ್ಕೃತಿಯನ್ನು ವಿರೋಧಿಸುತ್ತಾರೆ.

ಕಂಚ್ಯಾಣಿಯವರ ಕಾವ್ಯ ಪ್ರೇಮ ತತ್ವದಿಂದ ಕೂಡಿದ, ವಾತ್ಸಲ್ಯ ಭಾವದೊಂದಿಗೆ ಮಿಳಿತವಾಗಿದೆ. ಇದಕ್ಕೆ ಪೂರಕವಾಗಿ, "ಮಾನವನ ಆತ್ಮದ ಹಸಿವೇ ಪ್ರೇಮ. ನಶ್ವರವಾದ ದೇಹ ಅಮರತ್ವವನ್ನು ಸಾಧಿಸುವದು ಪ್ರೇಮದ ಮೂಲಕವೇ" ಎಂದು ಸಾಕ್ರೆಟಿಸ್ ಹೇಳುತ್ತಾನೆ. ಇದು ವಾಸ್ತವಿಕ ಸತ್ಯ. 'ಪ್ರೇಮವನ್ನು ಅಲ್ಲಗಳೆದು ದಯೆಯಿಂದ ದೂರಾಗುವದು ಸಲ್ಲದ ಮಾತು' : ಎಂದು ಹೇಳುವ ಉಮರ ಖಯ್ಯಾಮನ ನುಡಿಯನ್ನು ಕಂಚ್ಯಾಣಿಯವರು ಅನುಸರಿಸುತ್ತಾರೆ.

"ಅರುಣೋದಯ ಕರುಣೋದಯ
ಕಳೆಯೇರಿದೆ ಭಾನು ।
ಹೊತ್ತೇರಲಿ ಬಿತ್ತರದೆಡೆ
ಸುರಿಯಲಿ ಹಾಲ್ಜೇನು."॥ ೨

ವಚನಕಾರರ ಉದಾತ್ತತೆ, ಮಧುರಭಾವದ ಭಕ್ತಿ, ಅನುಭಾವದ ಅನನ್ಯತೆ ಕಂಚ್ಯಾಣಿಯವರ ಕವಿತೆಗಳ ತಿರುಳು. ಇದರಿಂದ ಅವರ ಕಾವ್ಯ ಶಕ್ತಿಯ ವ್ಯಾಪ್ತಿ ಶರಣ ಸಾಹಿತ್ಯದೊಂದಿಗೆ ನಂಟಾಗಿ ಹುರಿಗೊಂಡಿದೆ. ಮಗುವಿನ ಮುಗ್ಧತೆಯ ಜೊತೆಗೆ ಅನುಭಾವದ ದೀಪ್ತಿಯನ್ನು ಬೆಳಗಲು ಪ್ರಯತ್ನಿಸಿದ್ದಾರೆ.

"ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಆಹುದಹುದೆನಬೇಕು
ನುಡಿಯೊಳೊಗಾಗಿ ನಡೆಯದಿದ್ದರೆ ಕೂಡಲ ಸಂಗಮದೇವನೆಂತೊಲಿವನಯ್ಯಾ." ೩

ಕಂಚ್ಯಾಣಿಯವರ ಶಿಶು ಕವಿತೆಗಳು ಮೂಲತಃ ಮಗುವಿನ ಬೆಳವಣಿಗೆಯ ದೃಷ್ಟಿಯಿಂದ ನೈತಿಕತೆಯ ಜೊತೆಗೆ ಅನುಭಾವ ದರ್ಶನ ಒದಗಿಸುತ್ತವೆ.

---

೧. ಸಮಗ್ರ ವಚನ ಸಂಪುತ : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೧೯೯೩.
೨. ಮಕ್ಕಳ ಮನೆ : ನೂರೊಂದು ಕವಿತೆಗಳು : ಪುಟ-೮೬ ಕಂಚ್ಯಾಣಿ ಶರಣಪ್ಪ.
೩. ಸಮಗ್ರ ವಚನ ಸಂಪುಟ್೨:೮೦೩ ಕನ್ನಡ ಸಂಸ್ಕೃತಿ ನಿರ್ದೇಏಶನಾಲಯ ಬೆಂಗಳೂರು.೧೯೯೩.

'ಕವಿಯ ಅಭಿವ್ಯಕ್ತಿಯ ಸಹಜ ಸುಂದರ ರೀತಿ ಹಾಗೂ ಆಶಯದಲ್ಲಿಯ ಸಾತ್ವಿಕ ಭಾವದ ಸಂಗಮ, ಸೌಂದರ್ಯದ ಅನುಭೂತಿ, ಸ್ವತಂತ್ರ ಮನೋಧರ್ಮವನ್ನು ಈ ರೂಪಕ ವಚನ ಧ್ವನಿಸುವದು ಕಂಚ್ಯಾಣಿಯವರ ಅನುಭಾವ ಗೀತೆಗಳಲ್ಲಿ. ನಡೆ-ನುಡಿ, ಸೌಜನ್ಯದ ವರ್ತನೆ, ಕಾಯಕ ನಿಷ್ಠ ಶಿಶು ಕವಿತೆಗಳ ಒಟ್ಟು ಜೀವಾಳ. ಕಂಚ್ಯಾಣಿಯವರು ನವೋದಯ ಕಾವ್ಯದ ರೀತಿ, ಅನುಭವದ ಸೃಷ್ಠಿಯಂತೆ ಹಾಗೂ ಭಾವಪೂರ್ಣ ಲಯ, ರಾಗ, ಪ್ರಾಸ, ಅಲಂಕಾರ ಮೊದಲಾದ ಕವಿತೆಯ ಗಟ್ಟಿತನಕ್ಕೆ ಪೂರಕವಾಗಿ ಮೂಡಿಬಂದಿದೆ. ಕಂಚ್ಯಾಣಿಯವರು ಮಗುವಿನ ಬುದ್ಧಿ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾವ್ಯದ ಸೆಲೆಯನ್ನು ಹರಡಿದ್ದಾರೆ. ಮಗು ಸಮಾಜದಲ್ಲಿ ಬಂದಾಗಿನಿಂದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತದೆ. ಆ ಸಾಮಾಜಿಕ ಸಮಸ್ಯೆಗಳಿಗೆ ಕವಿ ತೋರಿಸುವ ಪ್ರತಿಕ್ರಿಯೆ ಕೇವಲ ತಾತ್ಕಾಲಿಕವಾಗಿ ಉಳಿದರೆ, ಮುಂದಿನ ಯುವ ಪೀಳಿಗೆಗೆ ಅದು ಸಾರ್ಥಕವಾಗುವದಿಲ್ಲ ಎನ್ನುವದು ಕಂಚ್ಯಾಣಿಯವರ ನುಡಿ.

ವಿಜಾಪುರ ಜಿಲ್ಲೆ ಕವಿಗಳಿಗೆ, ಸಂತರಿಗೆ, ಸತ್ಪರಂಪರೆಗೆ ಕೊರತೆಯಿಲ್ಲ. ಸಾಹಿತ್ಯಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಕ್ಷೇತ್ರಗಳ ಆಧಾರಸ್ಥಂಭಗಳು ಇಲ್ಲಿವೆ. ಮಂಜಪ್ಪನವರ ಮಕ್ಕಳ ಸಾಹಿತ್ಯ, ಹಳಕಟ್ಟಿಯವರ ವಚನ ಸಾಹಿತ್ಯ, ಮಧುರ ಚೆನ್ನರ ಜನಪದ ಸಾಹಿತ್ಯ ಮತ್ತು ಅನುಭವ ಸಾಹಿತ್ಯ ವಿರಾಜಮಾನವಾಗಿವೆ. ಹಾಗೆಯೇ ಕಂಚ್ಯಾಣಿಯವರು ಮಕ್ಕಳ ಸಾಹಿತ್ಯ ಮತ್ತು ಅನುಭಾವ ಸಾಹಿತ್ಯದ ಸಂಗಮವೆಸಿದ್ದಾರೆ.

೧೨ ಕವನ ಸಂಕಲನಗಳ ಜೊತೆಯಲ್ಲಿ ಅವರು ರಚಿಸಿದ ಅನುಭಾವ ಸಾಹಿತ್ಯಕ್ಕೆ ನಿದರ್ಶನ 'ಬಸವ ಪ್ರದೀಪ', ಕೇವಲ ಮಕ್ಕಳ ಸಾಹಿತ್ಯದ ಹಣೆಪಟ್ಟಿ ಧರಿಸದೆ ಆಧ್ಯಾತ್ಮಿಕ ನಿಲುವನ್ನು ಬಿತ್ತರಿಸುವ 'ಬಸವ ಪ್ರದಿಪ' ಖಂಡ ಕಾವ್ಯವಾಗಿ ಮುದ್ರಣಗೊಂಡು ಪ್ರಕಟವಾದದ್ದು ೧೯೭೩(ರಲ್ಲಿ) ನವೆಂಬರ್ ೧ ರಂದು.

ಕಂಚ್ಯಾಣಿಯವರು ತಮ್ಮ ಅನುಭವ ಬೆಳಕಿನಲ್ಲಿ ಮೂಡಿಸಿದ ಖಂಡ ಕಾವ್ಯ 'ಬಸವ ಪ್ರದೀಪ' ಬಸವಣ್ಣನವರ ಜೀವನ ಚರಿತ್ರೆಯನ್ನು ಪದ್ಯದಲ್ಲಿ ಸೆರೆಹಿಡಿದಿದ್ದಾರೆ ಅವರ ಜೀವನ ಮೌಲ್ಯಗಳನ್ನು ಎತ್ತಿ ತೋರುವದೇ ಕಾವ್ಯದ ವಸ್ತು.

ಶಿಕ್ಷಕ ಕಂಚ್ಯಾಣಿಯವರು ಬರಿ ಬೋಧಕರಲ್ಲ ದೇಶದ ಭವಿಷ್ಯ ಬರೆಯುವ ಹೊಸ ಜನಾಂಗದ ನಿರ್ಮಾತೃರು. ಅವರ ಶಿಕ್ಷಕ ವೃತ್ತಿ ನಿವೃತ್ತಿಯಿಂದ ಸಮಾಪ್ತಿಗೊಳ್ಳಲಿಲ್ಲ ಅದು ಇನ್ನೂ ವ್ಯಾಪಿಸುತ್ತಿದೆ. ಇವರು ಸದಾ ಸುಗಂಧ ಬೀರುವ ಪರಿಮಳದ ಹೂವು. ಇವರಿಂದ ಜ್ಞಾನ ಹರಿಯುವದಿಲ್ಲ, ಪಸರಿಸುತ್ತದೆ. ನೇಗಿಲ ರೈತನ ನಾಟಿಯ ನೆಲದಿಂದ ವಿಜ್ಞಾನಿಯ ಅಂತರಿಕ್ಷದವರೆಗೆ, ಜೀವಿಗಳ ಸಂಸಾರ ಸಂಘರ್ಷದವರೆಗೆ ವಿಸ್ತರಿಸಿದ ಜ್ಞಾನ ಕಂಚ್ಯಾಣಿಯವರದು. ಶಾಲಾ ಕೋಣೆಯಿಂದ ಸಮಾಜ, ಜನಸಾಮಾನ್ಯರ ಮಾತಿನ ಮಂಟಪದಿಂದ ಸಾಹಿತಿಗಳ, ಕಲಾಕಾರರ, ಕುಶಲಕರ್ಮಿಗಳ, ಸಮಾಜ ಚಿಂತಕರ, ಮನುಕುಲದ ಉದ್ಧಾರಕರ ಚಿಂತನ-ಮಂಥನಗಳೆಲ್ಲ ಕಂಚ್ಯಾಣಿಯವರ 'ಶಿಶು ಕಾವ್ಯ' ದುದ್ದಕ್ಕೂ ತುಂಬಿ ತುಳುಕಿದೆ. ಕಾವ್ಯದ ವಸ್ತು-ಆಶಯಗಳೆಲ್ಲ ವಾತ್ಸಲ್ಯ ಮತ್ತು ನಿಸರ್ಗ ಸೌಂದರ್ಯಗಳ ಹಂದರವಾಗಿ ಮೇಳೈಸಿವೆ.

# ಅಧ್ಯಾಯ ನಾಲ್ಕು

# 'ಕಂಚ್ಯಾಣಿಯವರ ಶಿಶು ಕಾವ್ಯ'

## ಅಧ್ಯಾಯ :೪ ಕಂಚ್ಯಾಣಿಯವರ ಕಾವ್ಯ ವಿಶ್ಲೇಷಣೆ :

ಕಾವ್ಯ ಬದುಕಿನ ಭಾವ ತರಂಗ. ಅದಕ್ಕೆ ಇಂತಹದ್ದೇ ವಸ್ತು ಇರಬೇಕೆಂಬ ಗೆರೆ ಕೊರೆಯಬಾರದು. ಕವಿ ತನ್ನ ಕಣ್ಣಿಗೆ ಕಂಡದ್ದು ಮನಸ್ಸಿಗೆ ಮೂಡಿದ್ದು, ಕೇಳಿಕೆಯ ಕಲ್ಪನೆಯಿಂದ ಚಿತ್ರಿತಿವಾದ ಹತ್ತಾರು ವಿಷಯಗಳನ್ನು ಕಾವ್ಯಕ್ಕೆ ವಸ್ತುವಾಗಿಸುತ್ತಾನೆ. ಸಾಮಾನ್ಯತೆಯಿಂದ ಅಸಾಮಾನ್ಯತೆಯವರೆಗಿನ ಸಂಗತಿಗಳನ್ನು ಕವಿತೆಗಳಲ್ಲಿ ಮೂಡಿಸುವ ವಿಶಿಷ್ಟವಾದ ಒಳಗಣ್ಣು ಈ ಕವಿಯದು. ಹೀಗಾಗಿಯೇ ಕಾವ್ಯ ಜಗತ್ತನ್ನು ವೈವಿಧ್ಯಮಯವಾದ ಹೂವುಗಳ ತೋಟವೆಂದೇ ಹೇಳಬೇಕು. ಹಲವು ಬಣ್ಣದ ಹೂವುಗಳು ಇರುವ ತೋಟದ ಹಾಗೆ ಕವಿ ಮನ. ಏಕ ರೂಪದ ಭಾವ–ಬಣ್ಣದ ಪರಿಮಳವಿರುವ ಕುಸುಮಗಳನ್ನು ಬೇರ್ಪಡಿಸಬಹುದು. ಆದರೆ ಕಂಚ್ಯಾಣಿಯವರ ವಸ್ತು–ವಿಷಯಗಳನ್ನು ವಿಂಗಡಿಸಿ ನೋಡುವದು ಸೂಕ್ತವಾದರೂ ಅದು ಸುಲಭದ ಕೆಲಸವಲ್ಲ.

ಶಿಶು ಕವಿತೆಗಳು ಕಂಚ್ಯಾಣಿಯವರ ಮನದ ಸಂವೇದನೆಗಳು. ಇವು ತುಡಿತ–ಮಿಡಿತಗಳ ಸಂಗಮ. ಇಂಥ ಕವಿಯ ಶಿಶು ಕವಿತೆಗಳು ವೈವಿಧ್ಯಮಯವಾದವುಗಳು. ಕಂಚ್ಯಾಣಿಯವರ ಶಿಶು ಕವಿತೆಗಳಲ್ಲಿ ವಾತ್ಸಲ್ಯ ಭಾವದ ಕವಿತೆಗಳು, ನೀತಿಯ ಕವಿತೆಗಳು, ನಿಸರ್ಗದ ಕವಿತೆಗಳು, ದೇಶಭಕ್ತರ ಕವಿತೆಗಳು, ದೇಶಾಭಿಮಾನದ ಕವಿತೆಗಳು, ಪರಿಸರ ಗೀತೆಗಳು, ಸಾಮಾಜಿಕ ಕವಿತೆಗಳು, ಸಾಂಪ್ರದಾಯಿಕ ಕವಿತೆಗಳು, ವಿಡಂಬನಾತ್ಮಕ ಕವಿತೆಗಳು, ಪಶು–ಪಕ್ಷಿ–ಪ್ರಾಣಿಗಳಿಗೆ ಸಂಬಂಧಿಸಿದ ಕವಿತೆಗಳೆಂದು ಸಮಗ್ರವಾಗಿ ವ್ಯಕ್ತಗೊಂಡರೆ, ಅಧ್ಯಯನದ ವ್ಯಾಪ್ತಿಯಲ್ಲಿ ಕೆಲವು ಸಲೆಗಳಾಗಿ ವಿಂಗಡಿಸಿ ನೋಡುವದು ಸೂಕ್ತವೂ ಅಗತ್ಯವೂ ಎನಿಸುತ್ತದೆ.

"ಕೃತಜ್ಞತೆಯು ಮನುಷ್ಯನ ನೈಸರ್ಗಿಕವಾದ ಗುಣವಾಗಿದೆ" ಎಂಬುದು ಹಿಟ್ಲರನ ಮಾತು ಬಹುಶಃ ಮನುಷ್ಯನಲ್ಲಿ ಈ ಗುಣವಿರುವದರಿಂದಲೆ 'ನನ್ನವರು' ಎಂಬ ಪರಿಕಲ್ಪನೆ ಮೂಡುತ್ತದೆ. ಇದೇ ನಾಗರಿಕ ಸ್ಥಿತಿಗೆ ಮುಟ್ಟಲು ದಾರಿಯಾಗಿ ಸಾಗುತ್ತದೆ. ತಂದೆ–ತಾಯಿ, ಗುರು–ಹಿರಿಯರನ್ನು, ನಾಡು–ನುಡಿಯ, ನೆಲ–ಜಲ, ಪಶು–ಪಕ್ಷಿಗಳು ಮೊದಲಾದವುಗಳನ್ನು ಪೂಜ್ಯನೇಯ ಭಾವನೆಯಿಂದ ಕಾಣಲು ಸಾಧ್ಯವಾಗುತ್ತದೆ. ಈ ರೀತಿಯ ನೈತಿಕ, ಸಾಮಾಜಿಕ ಜವಾಬ್ದಾರಿಯನ್ನು ಹೊತ್ತ ಮನುಷ್ಯ ಸಮಾಜಸಂಹನದಲ್ಲಿ ಗೆಲುಗಾಗಿ ತೋರುತ್ತಾನೆ. ಆ ಮೂಲಕ ನಾಡಿನ ಏಳ್ಗೆಗೆ ಕಾರಣೀಭೂತನಾಗುತ್ತಾನೆ.

ಕಂಚ್ಯಾಣಿಯವರು ತಮ್ಮ ಶಿಶು ಕವಿತೆಗಳಲ್ಲಿ ಈ ಎಲ್ಲ ಬಗೆಯ ಧೋರಣೆಗಳನ್ನು ಅನುಸರಿಸಿ, ಅಭಿವ್ಯಕ್ತಗೊಳಿಸಿ ಮಕ್ಕಳಿಗೆ ನೀಡಿ, ನಾಡಿನ ಯುವ ಜನರಲ್ಲಿ ಎಚ್ಚರದ ಗಂಟೆಯನ್ನು ಬಾರಿಸಿ ಜಾಗ್ರತಗೊಳ್ಳುವಂತೆ ಹುರಿದುಂಬಿಸಿದ್ದಾರೆ.

## "ಕಂಚ್ಯಾಣಿಯವರ ಕಾವ್ಯ ವಿಶ್ಲೇಷಣೆ"

೧. ವಾತ್ಸಲ್ಯ ಗೀತೆಗಳು
೨. ನಿಸರ್ಗ ಕವಿತೆಗಳು
೩. ದೇಶಾಭಿಮಾನದ ಕವಿತೆಗಳು
೪. ಅನುಭಾವ ಗೀತೆಗಳು
೫. ನೀತಿಯ ಕವಿತೆಗಳು
೬. ಸಾಂಪ್ರದಾಯಿಕ ಕವಿತೆಗಳು

ಈ ವಿಧದ ನೆಲೆಯಲ್ಲಿ ಸೆಲೆಯೊಡೆದ ಶಿಶು ಕಾವ್ಯ ಕಂಚ್ಯಾಣಿಯವರ ಇರುವಿಕೆ ಮತ್ತು ತೋರುವಿಕೆಗೆ ನಿದರ್ಶನ.

### ❖ ೧. ವಾತ್ಸಲ್ಯ ಗೀತೆಗಳು :

ಕಂಚ್ಯಾಣಿಯವರ ಶಿಶು ಕಾವ್ಯದ ಜೀವಾಳ ಅಜ್ಜ-ಅಜ್ಜಿ, ಅವ್ವ-ಅಪ್ಪ, ಪುಟ್ಟ-ಪುಟ್ಟಿ. ವಾತ್ಸಲ್ಯದ ಸಾಕಾರ ಮೂರ್ತಿಯಾದ ಕಂಚ್ಯಾಣಿಯವರ ಶಿಶು ಕವಿತೆಗಳೆಂದರೆ, ಬಾಲ್ಯದ ನೆನಪುಗಳು ಹುರಿಗೊಂಡ ಗಟ್ಟಿ ಹಗ್ಗ. ಹಿಗ್ಗದ-ಕುಗ್ಗದ ಬದುಕಿನ ಧಾರೆ.

ಮನೆಯವರೆಲ್ಲಾ ಉಂಡಾ ಮೇಲೆ
ಅವ್ವನ ಸರತಿ ಬರುತಿಹುದು ।
ಹರಕಾ ಮುರಕಾ ರೊಟ್ಟಿ ತುಣಕಾ
ಮಿಕ್ಕಿದ ಪಲ್ಲೆ ಹೊತ್ತಿದ ಅನ್ನ
ಅಮ್ಮನ ಪಾಲಿಗೆ ಬಂದಿಹುದು।
ಇದ್ದುದನೆಲ್ಲ ದೊಡ್ಡದು ಮಾಡಿ
ಹರುಷದಿ ಊಟಕೆ ಕೊಡುವಳು ॥ ೧

ಅಕ್ಕರೆಯಿಂದ ಮಕ್ಕಳಿಗೆಲ್ಲ ತುತ್ತನು ಇಕ್ಕುತ ............. ಉಣಿಸುವ ಉಣ್ಣುವ ಈ ನೋಟ ಬರಿ ಸೊಗಸಲ್ಲ ! ಬಲು ಸೊಗಸು !! ಇದು ಕಂಚ್ಯಾಣಿಯವರ ಸಂಸ್ಕೃತಿ. ಹರಿದು-ಹಂಚಿಕೊಂಡು ಬದುಕುವ ತಾಯಿಯ ವಾತ್ಸಲ್ಯದ ಪರಂಪರೆಯ ಸಂಸ್ಕೃತಿ. ಇಂಥ ತಾಯಿಯ ಒಡಲಲ್ಲಿ ಬೆಳೆದ ಗೃಹ ಸಂಸ್ಕೃತಿಯ ಪ್ರತಿಬಿಂಬ ಕಂಚ್ಯಾಣಿಯವರು. ವಾತ್ಸಲ್ಯವು ಕಂಚ್ಯಾಣಿಯವರ ಶಿಶು ಕಾವ್ಯದ ಸ್ಥಾಯಿಭಾವವೆನಿಸಿದೆ.

ತಾಯಿ ತನ್ನ ಬದುಕನ್ನೆ ಮಕ್ಕಳಿಗಾಗಿ ಧಾರೆಯೆರೆಯುವಳು. ಬೆಳೆಯುವ ಮಗುವಿಗೆ ಜೀವವೇ ಸವೆಸುವಳು. ತನ್ನ ಹಸಿವೆಯ ಅರಿವು ತನಗಾಗದಂತೆ ತೊರ್ಪಡಿಸುವ, ಮಗುವಿನ ಆನಂದದಲ್ಲಿಯೇ ತನ್ನ ಶ್ರೇಯಸ್ಸು ಎನ್ನುವ ಭಾವದಿಂದ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿ ತಾಯಿ ನಿಂತಿದ್ದಾಳೆ. ಅವಳ ರೀತಿ-ನೀತಿ, ನಡೆ-ನುಡಿಗಳೇ ಜೀವನ ಮೌಲ್ಯಗಳು.

---

೧. ಸೊಗಸು : ನೂರೊಂದು ಕವಿತೆಗಳು : ಪುಟ.೧೧೬ ಕಂಚ್ಯಾಣಿ ಶರಣಪ್ಪ

ಅಜ್ಜನು ಅಂದದ ಹಾಡನು ಬರೆದು
ಅಜ್ಜಿಯ ಮುಂದೆ ಓದುವನು
ಹಾಡನು ಹಾಡಿ ಮೋಜನು ಮಾಡಿ
ತಿಂಡಿಯ ಬೇಡಿ ಕಾಡುವನು ॥ ೧

ಅಜ್ಜನ ಹಾಡಿನ ಅಜ್ಜನಾದ ಕಂಚ್ಯಾಣಿಯವರು ರಸಸವಿಯುವ ಸರಸ-ಸಲ್ಲಾಪದ ರಸಿಕರು. ಅಜ್ಜ-ಅಜ್ಜಿಯರ ಮೋಜು, ತಿಂಡಿಯ ಬೇಡಿ ಕಾಡುವಲ್ಲಿ ಸ್ವತಃ ಕಂಚ್ಯಾಣಿಯವರು ಪುಟ್ಟ ಮಗುವಾಗಿ 'ದೂರ' ನಿಂತು ಹೇಳುವ ಶೈಲಿ ಗಮನಾರ್ಹವಾದುದು ಮನಸೆಳೆಯುವಂತಹದು.

'ಮನೆಯಲ್ಲಿ ಮಕ್ಕಳು ಕಿರಿಕಿರಿ ಮಾಡಲು
ಸುಮ್ಮನೆ ಲೊಚಲೊಚಗುಟ್ಟುವನು
ಕಿರಿಕಿರಿ ಮಾಡುವ ಕಂದರ ಮೇಲೆಯೇ
ಚಂದದ ಹಾಡನು ಬರೆಯುವನು ॥ ೨

ಮಕ್ಕಳು ಮನೆಯಲ್ಲಿ ಸದ್ದು-ಗದ್ದಲದಲ್ಲಿ ತೊಡಗಿದರೆ ಕೋಪ ಸಹಜ. ಇದಕ್ಕೆ ಅಜ್ಜನ ಲೊಚಗುಟ್ಟುವಿಕೆಯಾದರೂ ಈ ಮಕ್ಕಳ ಹುಡುಗಾಟತನ ಕಂಚ್ಯಾಣಿಯವರ ಭಾವಕ್ಕೆ ಮುದ ನೀಡಿ ಕವಿತೆಯಾಗಿ ನಿಂತಿದೆ.

ಕಲ್ಲಿನ ತುಂಡನು ಕಂಕುಳಲಿಟ್ಟು
ಪುಟ್ಟಿಯು ಕುಣಿಯುವಳು ।
ಚಿಂದೀ ಅರಿವೆಯ ಚಂದದಿ ಹೊದಿಸಿ
ಬೆಚ್ಚಗೆ ಹೊದಿಸುವಳು ।
ಬರಿಗೈ ಬೊಗಸೆಯ ಬಾಯಿಗೆ ಸುರಿದು
ಹಾಲನು ಕುಡಿಸುವಳು। ೩

ಮುಗ್ಧ ಮಗುವಿನ ಆಟದ ರೀತಿ ಕಂಚ್ಯಾಣಿಯವರಿಗೆ ತಾಯಿ-ಮಗುವಿನ ಸಂಬಂಧವಾದರೆ ಮಗು ತಾಯಿಯಾಗಿ ಆಟವಾಡುವ ಪರಿಕಲ್ಪನೆ ಅದ್ಭುತ ಅಗಮ್ಯ ಮಗು ಕಲ್ಲಿನ ತುಂಡನ್ನು ತೆಗೆದುಕೊಂಡು ಅದಕ್ಕೆ ಅಲಂಕಾರಗೊಳಿಸಿ 'ಲಾಲಿ ಹಾಡುತ ತೋಳಿನ ತೊಟ್ಟಲು ತೂಗುತ ನಿಂತು ಜೋಗುಳ ಹಾಡುವಳು' ಇದು ಕಂಚ್ಯಾಣಿಯವರ ಕವಿ ಮನಸ್ಸು ವ್ಯಕ್ತವಾಗುವಲ್ಲಿ ಸಫಲವಾಗಿದೆ 'ಜಾರಿದ ಪಾಪ ಕಾಲನು ಜಜ್ಜಲು ಚಿಟ್ಟನೆ ಚೀರುವದು, ಪಾಪ ಕೆಟ್ಟದ್ದೆಂದು ದೂರಕೆ ಬಿಸುಟುವದು' ಮಗು ಭಾವ ಸಂಬಂಧದಿಂದ ದೂರ ಸರಿಯುವದು ಕುತೂಹಲಕಾರಿ ಇಂಥ ಸನ್ನಿವೇಶ ಹೆಣೆಯಲು ಕಂಚ್ಯಾಣಿಯವರು ಸಿದ್ಧ ಹಸ್ತರು.

---

೧. ಅಜ್ಜನ ಹಾಡು : ನೂರೊಂದು ಕವಿತೆಗಳು ಪುಟ ೪೯. ಕಂಚ್ಯಾಣಿ ಶರಣಪ್ಪ

೨. ಅಜ್ಜನ ಹಾಡು : ನೂರೊಂದು ಕವಿತೆಗಳು ಪುಟ ೪೯. ಕಂಚ್ಯಾಣಿ ಶರಣಪ್ಪ.

೩. ಪುಟ್ಟಿಯ ಪಾಪ : ನೂರೊಂದು ಕವಿತೆಗಳು ಪುಟ. ೧೩ ಕಂಚ್ಯಾಣಿ ಶರಣಪ್ಪ.

'ಪಾಪ ಅತ್ತರೊಂದು ಚಂದ
ಮುತ್ತು ಮಳೆಯ ಕರೆದಿದೆ
ಕೇಕೆ ಹಾಕಿ ನಕ್ಕರಂತು
ಮನೆಗೆ ಮನೆಯ ನಗುತಿದೆ ॥ ೧

ಮಗುವಿನ ಹಾವ-ಭಾವ, ಅಳು-ನಗು, ಆಟ-ಪಾಟಗಳಲ್ಲ ಕಂಚ್ಯಾಣಿಯವರು ಶಿಶು ಮನದ ತಾಯಿಯಾಗಿ ನಿಂತು ಚಿತ್ರಿಸಿದ್ದು ಕವಿ ಕಣ್ಣಿನಿಂದ ಮಗುವಿನ ಚಲುವಿನ ರೂಪ, ಮುಗ್ಧ ಮಾತು, ನಗೆಯ ಮೊಗ್ಗು, ಬಿರಿದ ಗಲ್ಲ ನವಿಲ ನಾಟ್ಯದ ನಡೆ, ಅಂಬೆಗಾಲಿನ ಪುಟ್ಟ ಆನೆ ಸಾಗಿ ಬಂದಿತು ಎನ್ನುವಲ್ಲಿ ಮಗುವಿನ ಹಲವು ಛಾಯೆಗಳನ್ನು ಬಿತ್ತರಿಸಿದ್ದಾರೆ ಕಂಚ್ಯಾಣಿಯವರ ಶಿಶು ಕವಿತೆಗಳು ಸರಳತೆಯಿಂದ ಸಾಗುವ ನಿಧಾನ ಹೊಳೆಯಂತೆ, ಮಕ್ಕಳಿಗೆ ಹಿತವಾಗುವ ಸೆಳೆತದಂತೆ ಹರಿದಿದೆ.

ಮಗು ತಂದೆ-ತಾಯಿಗಳ ಒಡನಾಟಗಳಿಗಿಂತ ಅಜ್ಜ-ಅಜ್ಜಿಯರ ಒಲವಿನ ಬಂಧನದ ಸೆಳೆತಕ್ಕೆ ಹೆಚ್ಚು ಸಿಲುಕಿಕೊಂಡವರು. ಇದು ಕಂಚ್ಯಾಣಿಯವರ ಶಿಶು ಕಾವ್ಯದ ಧ್ವನಿ.

ಕೊಕ್ಕೋ ಕೋಳಿ ಕೂಗಲು ಪುಟ್ಟು
ಮೈ ಮುರಿದೇಳುವನು ।
ಅಜ್ಜಗೆ-ಅಜ್ಜಿಗೆ ವಂದಿಸಿ ದೇವರ
ಹಾಡನು ಹೇಳುವನು ॥ ೨

ಮುಂಜಾವಿನಲಿ ಕೋಳಿಯ ಕೂಗು ನಿದ್ರೆಯಲ್ಲಿರುವ ಜೀವಿಗಳಿಗೆ ಎಚ್ಚರಿಸುವ ಗಂಟೆ. ಈ ಕವಿತೆ ಪುಟ್ಟುವಿನ ವ್ಯವಸ್ಥಿತವಾದ ಸಂಸ್ಕೃತಿಯನ್ನು ಚಿತ್ರಿಸುತ್ತದೆ. ಪುಟ್ಟನ ಗುಣ-ಸ್ವಭಾವ ಪ್ರತಿಯೊಂದು ಮಗುವಿನಲ್ಲಿರಲಿ ಎಂಬ ಸಂದೇಶ ಕಂಚ್ಯಾಣಿಯವರ ಕವಿತೆಯಲ್ಲಿಡಗಿದೆ.

ಮಗು ಬೆಳಗಿನ ಜಾವದಲ್ಲಿ ಏಳುವ, ಅಜ್ಜ-ಅಜ್ಜಿಗೆ ವಂದಿಸುವ, ಸೂರ್ಯನನ್ನು ಆನಂದ-ಆಶ್ಚರ್ಯದಿಂದ ನೋಡುವ, ಹಕ್ಕಿಗಳ ನಿನಾದ ಆಲಿಸುವ, ಅಪ್ಪ-ಅಮ್ಮಗೆ ಸಹಾಯ ಮಾಡುವ, ತನ್ನ ಇರುವಿಕೆಯಲ್ಲಿ ಸಿಸ್ತು-ಸ್ವಚ್ಛತೆಯಿಂದ ಮಗು ಶಾಲೆಗೆ ಹೋಗುವ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕೆನ್ನುವದು ಕವಿಯ ಆಶಯ.

ಕಂಚ್ಯಾಣಿಯವರು ಶಿಕ್ಷಕ ವೃತ್ತಿಯಲ್ಲಿ ಮಕ್ಕಳ ಸರ್ವಾಂಗೀಣ ಬೆಳವಣಿಗೆಯ ಬಗ್ಗೆ ಕಾಳಜಿ ಹೊಂದಿರುವದು ಕಾಣಬೇಕೆಂದರೆ, ಅವರ ಕವಿತೆಗಳೇ ಪೂರಕ ನಿದರ್ಶನ.

ಅಂಗಳದವರೆಯ ಹಂದರದಲ್ಲಿ
ಆಟವ ಹೂಡಿದಳು
ಎಳೆಯರ ಬಳಗವು ಕೂಡಲು ಗೊಂಬೆಯ
ಮದುವೆಯ ಮಾಡಿದಳು ॥ ೩

---

೧. ನವೀನ ಲೀಲೆ : ನೂರೊಂದು ಕವಿತೆಗಳು ಪುಟ :೧೨ ಕಂಚ್ಯಾಣಿ ಶರಣಪ್ಪನವರು.
೨. ಜಾಣ ಪುಟ್ಟು : ನೂರೊಂದು ಕವಿತೆಗಳು ಪುಟ :೫೧ ಕಂಚ್ಯಾಣಿ ಶರಣಪ್ಪನವರು.
೩. ಪುಟ್ಟಿಯ ಆಟ : ನೂರೊಂದು ಕವಿತೆಗಳು ಪುಟ ೫೭ ಕಂಚ್ಯಾಣಿ ಶರಣಪ್ಪ

'ಮಕ್ಕಳ ಆಟವೇ ಚಂದ, ಮಕ್ಕಳ ನೋಟವೇ ಅಂದ.' ಇದು ಕಂಚ್ಯಾಣಿಯವರ ಶಿಶು ಕಾವ್ಯದ ವಸ್ತು.

ಶಾಲೆಗೆ ಹೋಗುವ ಮಗು ಮನೆಯ ಅಂಗಳದಲ್ಲಿ ಮೈಮರೆತು ಆಟದಲ್ಲಿ ತೊಡಗುವ ದೃಶ್ಯ ಮನಮೋಹಕ. ತನ್ನ ಅಂದ-ಚಂದ-ಅಲಂಕಾರಕ್ಕಾಗಿ ತಲೆ ಬಾಚಿ ಹಳಲನ್ನು ಹಾಕಿ ಹೂವನ್ನು ಮುಡಿಯುವದು, ಹಣೆಯಲಿ ಕುಂಕುಮ, ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು, ಗೊಂಬೆಗೆ 'ಮಮ್ಮನು' ಉಣಿಸುವದಾಗಲಿ, ಅಂಗಳದ ಆವರೆಯ ಹಂದರ ಮಾಡಿ ಗೊಂಬೆಯ ಮದುವೆ ಮಾಡುವ ಕಂಚ್ಯಾಣಿಯವರು ಮಗುವಾಗಿ ಕಾಣುತ್ತಾರೆ. 'ಆಟದ ಭರದಲಿ ಊಟವ ಮರೆತು ಗಂಟೆಯು ಬಡಿಯಲು ಶಾಲೆಗೆ ಓಡುವಳು' ಎನ್ನುವಲ್ಲಿ ಮಗುವಿನ ಕಲಿಯುವ ಹಂಬಲ ಚಿತ್ರಿಸುತ್ತಾರೆ.

'ಕೋಲನೂರಿ ಅಜ್ಜಿ ಬಾಗಿ ನಡೆದು ಬಂದಿತು
ಪುಟ್ಟ ಕಂದ ಹಿಂದೆ ಹಿಂದೆ ಬರುತಲಿದ್ದಿತು ।
ಕೈಯ ಬೀಸಿ ಅಜ್ಜಿಯನ್ನು ಕಳಿಸಿ ಕೊಟ್ಟಿತು
ಆಗ ಅಜ್ಜಿ ಕಣ್ಣು ಕುಣೀಕೆ ತೇವಗೊಂಡಿತು ॥೧

ಮನುಜ ಭಾವ ಸಂಬಂಧದ ಕೊಂಡಿ. ಅಗಲಿಕೆಯ ಅಳು-ಅಳಲು ಅಜ್ಜಿಗೂ ಬಿಡದು. ಇದು ಕವಿತೆಯ ತಿರುಳು. ಮಗುವಿನಿಂದ ಬೀಳ್ಕೊಟ್ಟ ಅಜ್ಜಿ ಬಸ್ಸು ಹತ್ತಿ ಹೋಗುವಾಗ ಮುದ್ದು ಮಗು ದೂರದಲ್ಲಿ ನಿಂತು ನೋಡುವ ನೋಟ ಅಜ್ಜಿಯ ಕಣ್ಣು ತೇವಗೊಳ್ಳುವಂತೆ ಮಾಡುವದು. ಇದು ಹೃದಯ ಕಲಕುವ ದೃಶ್ಯ. ಶಿಶು ಕವಿ ಕಂಚ್ಯಾಣಿಯವರು ಕೌಟುಂಬಿಕ ಅವಿನಾಭಾವ ಸಂಬಂಧಗಳ ಬಂಧನದಿಂದ ಬಿಡುಗಡೆ ಹೊಂದುವದು ಕಠಿಣ ಸಂಗತಿ ಎಂದು ತೋರಿದ್ದಾರೆ.

ಮಕ್ಕಳು ಆಡಿ-ಹಾಡಿ ಕುಣಿಯಲು, ಹಳ್ಳಿಗಾಡಿನ ಕುಟುಂಬ ಸಂಬಂಧಗಳ ಪ್ರೀತಿ, ಸಹಜೀವನದ ನೋವು-ನಲಿವುಗಳನ್ನು, ಮಕ್ಕಳ ಮೆಚ್ಚಿನ ಶಾಲೆ, ಸಿಸ್ತು ಬದ್ಧ ಜೀವನ ಕಲೆ, ಕಂಚ್ಯಾಣಿಯವರ ಶಿಶು ಕವಿತೆಗಳ ತುಂಬೆಲ್ಲ ಮೂಡಿವೆ, ಹಾಗೂ ಮನಮಿಡಿಯುವ ವಿಷಯಗಳಿಂದ ಒಳಗೊಂಡಿವೆ. ಮನೆಯೇ ಮೊದಲ ಪಾಠ ಶಾಲೆ, 'ತಾಯಿಯೇ ಮೊದಲ ಗುರು' ಎಂಬ ಮಂತ್ರ ಕಂಚ್ಯಾಣಿಯವರದು.

ಮಕ್ಕಳು ರಾಷ್ಟ್ರದ ಶ್ರೇಷ್ಠ ಸಂಪತ್ತು. ಮನುಜಗೆ ತಂದೆಯಂತೆ ಇವು ಅನುಭಾವಿಗಳ ಅಮೃತದ ನುಡಿಗಳು. ಒಂದು ರಾಷ್ಟ್ರದ ಉನ್ನತಿಯನ್ನು ಅಳೆಯಲು ಅದರ ಸಂಪನ್ಮೂಲಗಳ ಸರಿಯಾದ ವಿನಿಯೋಗ, ಹಾಗೂ ಸಾಂಸ್ಕೃತಿಕ ಮಟ್ಟವೇ ಒರೆಗಲ್ಲು. ಅದಕ್ಕೆ ಪೂರಕವಾಗಿ ಜೀವನದ ಜೀವಾಳವಾಗಿ ಶಿಕ್ಷಣ ಅವಶ್ಯಕ. ಮಕ್ಕಳ ಉಜ್ವಲ ಭವಿಷ್ಯಕ್ಕಾಗಿ ಅವರಲ್ಲಿ ಸದಭಿರುಚಿಯ, ಸದ್ಗುಣ ಸಂಪನ್ನರನ್ನಾಗಿ ಮಾಡಲು, ಒಳ್ಳೆಯ ಶಿಕ್ಷಣ ಒದಗಿಸಲು ತಂದೆ-ತಾಯಿ, ಬಂಧು-ಬಾಂಧವರು, ಸಮಾಜ-ಸರಕಾರಗಳು ಮಗುವಿನ ಸರ್ವಂಗೀಣ ಬೆಳವಣಿಗೆಗೆ ಸ್ಪಂದಿಸಬೇಕು.

---

೧. ಬೀಳ್ಕೊಡುಗೆ : ನೂರೊಂದು ಕವಿತೆಗಳೂ ಪುಟ ೧೧೨ ಕಂಚ್ಯಾಣಿ ಶರಣಪ್ಪ.

ಟಣ್ ಟಣ್ ಜಿಗಿಯುತ
ಚೇತನ ಹೊರಟನು ಶಾಲೆಗೆ ಓಡುತ್ತ ।
ಸಡಗರದಿಂದಲಿ
ಸರ ಸರ ಸರತಿಯ
ಸಾಲಲಿ ನಿಲ್ಲುವನು ।
ಕರಗಳ ಜೋಡಿಸಿ ಗುರುಗಳಿಗೊಂದಿಸಿ
ಪ್ರಾರ್ಥನೆ ಮಾಡುವನು ॥ ೧

ಶಾಲೆ ಮಕ್ಕಳಿಗೆ ಸಂತಸದ ತಾಣ. ಜಾಣನಾದ ವಿದ್ಯಾರ್ಥಿಗೆ ಪ್ರಾಣ. ಅಲ್ಲಿಯ ವಾತಾವರಣ ಮಗುವಿಗೆ ಮುದ ನೀಡುವ ಹರುಷದ ಬುಗ್ಗೆ ಹೀಗಾಗಿ ತನ್ನ ಸಹಪಾಟಿಗಳ, ಗುರುಗಳು ಸ್ಪಂದನಕ್ಕೆ ಹಾತೊರೆಯುತ್ತದೆ. ಸಿಸ್ತು-ಸಂಯಮ, ಪಾಠ ಕೇಳುವ ಆತುರ ಆಟವಾಡುವ ಕಾತುರ ಹೆಚ್ಚಾಗಿ ಮಗು 'ತಕ ತಕ ತಕ ತಕ' ಹೆಜ್ಜೆಯನಿಕ್ಕುತ ಸಾಗುವ ಪರಿ ರೋಮಾಂಚಕಾರಿ.

'ಇವಳೆ ನಮ್ಮ ಪುಟ್ಟಿಯು । ಇಟ್ಟ ಹೆಸರು ದೃಷ್ಟಿಯು ॥
ದೃಷ್ಟಿ ಬಹಳ ಗಟ್ಟಿಯು । ನಮ್ಮ ಪುಟ್ಟ ದಿಟ್ಟಯು ॥
ದದ್ದ । ಎಂದು ಅಜ್ಜಗೆ । ಜಜ್ಜಿ ಬಿಡುವಳಜ್ಜಿಗೆ ॥
ಹತ್ತಿ ಮಾಡಿ ಅಪ್ಪಗೆ । ಮುತ್ತು ಕೊಡುವಳವ್ವಗೆ ॥ ೨

ಮಕ್ಕಳಲ್ಲಿ ಕಂಡುಬರುವ ಗಟ್ಟಿತನ-ದಿಟ್ಟತನಗಳಿಗೆ ತಂದೆ-ತಾಯಿ, ಅಜ್ಜ-ಅಜ್ಜಿಯರೆ ಕಾರಣ. ಇದು ಕಂಚ್ಯಾಣಿಯವರ ಕವಿತೆಗಳಲ್ಲಿ ಸೆಳೆಮಿಂಚಾಗಿ ಹೊಳೆಯುತ್ತದೆ. ಅಜ್ಜ-ಅವ್ವನನ್ನು ಪ್ರೀತಿಯಿಂದ ಕಾಣುವ, ಅಜ್ಜಿ-ಅಪ್ಪನನ್ನು ದ್ವೇಷಿಸುವ ಮಗು ಮಮತೆಯ ಸುಳಿಯಾಗಿ ಕಾಣಿತ್ತದೆ. ಪುಟ್ಟಿಯ ನಗು-ಅಳುವನ್ನು ಅಲಂಕಾರವನ್ನು ಕವಿತೆಯಾಗಿ ರಚಿಸಿದ ಅಜ್ಜ ಕಂಚ್ಯಾಣಿಯವರು ಹಿಗ್ಗಿನಿಂದ ಹರಸಿದ ಬಗೆ ಅವರ್ಣನೀಯ.

'ಅಮ್ಮನ ಮಮತೆಯ ಕೈತುತ್ತು ।
ಎಲ್ಲರು ಬಯಸುವ ಕೈತುತ್ತು ॥
ತುತ್ತು ತುತ್ತಿಗು ರುಚಿಕಟ್ಟು ।
ತಿಂದರೆ ಬರುವದು ತಾಕತ್ತು ॥ ೩

ತಾಯಿ ಮಗುವಿಗೆ ಉಣಿಸುವ ರೀತಿ ಬೆರಗುಗೊಳಿಸುವಂತಹದ್ದು, ಇದು ಎಲ್ಲರಿಗೂ ಸಾಧ್ಯವಿಲ್ಲ. ಆಕೆಯ ಕೈಯಿಂದ ತಿಂದ ಪ್ರತಿಯೊಂದು ತುತ್ತು ರುಚಿಕರ.

---

೧. ತಮ್ಮನ ಶಾಲೆ : ನೂರೊಂದು ಕವಿತೆಗಳು ಪುಟ ೧೮೨ ಕಂಚ್ಯಾಣಿ ಶರಣಪ್ಪ
೨. ಪುಟ್ಟ-ದಿಟ್ಟ : ಬೆದರು ಬೆಚ್ಚ ಪುಟ-೧೨ ಕಂಚ್ಯಾಣಿ ಶರಣಪ್ಪ.
೩. ಕೈ ತುತ್ತು : ಬೆದರು ಬೆಚ್ಚ ಪುಟ-೪೦ ಕಂಚ್ಯಾಣಿ ಶರಣಪ್ಪ

'ಗಮಗಮಿಸುವ ಪರಿಮಳ ತಿಂದರೂ ಹಿಡಿಯದು ಯಾರಿಗೂ ತಲೆಚಿಟ್ಟು ಕೆನಿಕೆನಿ–ಮೊಸರು, ಜೀರಿಗೆ ಉಪ್ಪು–ಸಾಂಬರ ಸೊಪ್ಪು ಹದಮಾಡಿ ಕಲಸಿದ ಅನ್ನದ ಗಮ್ಮತ್ತು ಎಲ್ಲರ ಬಾಯಿಗೂ ನೀರುತರಿಸುತ್ತದೆ. ಇದು ಕಂಚ್ಯಾಣಿಯವರ ಈ ಕವಿತೆಯಲ್ಲಿ 'ಹದಮಾಡಿ ಕಲಿಸಿದ' ಎಂಬ ನುಡಿಯ ಭಾವ ನಮ್ಮ ಸಂಸ್ಕೃತಿಯನ್ನು ಬಿಂಬಿಸುತ್ತದೆ. ತಾಯಿಯ ಆರೈಕೆಯಲ್ಲಿ ಬೆಳೆದ ಮಗು ಸದೃಡ–ಸತ್ ಗುಣಗಳನ್ನು ಪಡೆದುಕೊಂಡು ಉತ್ತಮ ಪ್ರಜೆಯಾಗುವದರಲ್ಲಿ ಸಂದೇಹವೇ ಇಲ್ಲ ಎಂಬ ಸಂದೇಶ ಹೊಂದಿದೆ.

ಮಕ್ಕಳನ್ನು ಬೆಳೆಸುವದು ಅತಿ ಜಾಗರೂಕತೆಯ ಕೆಲಸ. ಅವರನ್ನು 'ಬೆಳೆಯುವ ಸಿರಿ ಮೊಳಕೆಯಲ್ಲಿ' ಎನ್ನುವಂತೆ ಸಚ್ಚಾರಿತ್ರ್ಯವಂತರನ್ನಾಗಿ ಬೆಳೆಸುವ ಕರ್ತವ್ಯ ತಂದೆ–ತಾಯಿ ಮತ್ತು ಗುರುಗಳದ್ದು. ಚಿಕ್ಕವರಿದ್ದಾಗಲೇ ಒಳ್ಳೆಯ ಆಚಾರ–ವಿಚಾರಗಳ ಬೀಜಗಳನ್ನು ಅವರ ಮನದಲ್ಲಿ ಬಿತ್ತಿಬೇಕು, ಎನ್ನುತ್ತ "ಮಕ್ಕಳನ್ನು ಪಾಠಶಾಲೆಗೆ ಕಳುಹಿಸುವದು ಹೇಗೆ ಪಾಲಕರ ಕರ್ತವ್ಯವ್ಯೋ ಹಾಗೆಯೇ ಆ ಮಕ್ಕಳಿಗಾಗಿ ಪಾಠಶಾಲೆಗಳನ್ನು ಸ್ಥಾಪಿಸುವದು ಸರಕಾರದ ಕರ್ತವ್ಯವೆಂದು" ಹೇಳಿದ ಹರ್ಡೇಕರ ಮಂಜಪ್ಪನವರ ಮಾತನ್ನು ಕಂಚ್ಯಾಣಿಯವರೂ ಸಹ ನಂಬಿದವರು.

ಮುತ್ತನು ಹೆಣೆದ ಮುದ್ದಿನ ಗುಬ್ಬಿ ।
ಲಕಲಕ ಹೊಳೆಯುವ ಚಲುವಿನ ಗುಬ್ಬಿ ।
ತೊಟ್ಟಲು ಛತ್ತಿನ ಮುತ್ತಿನ ಗುಬ್ಬಿ ।
ತೊಟ್ಟಲು ಮೇಗಡೆ ತೂಗುವ ಗುಬ್ಬಿ । ೧

ಸಂಪ್ರದಾಯ–ಆಚರಣೆಗಳನ್ನು ಕಂಚ್ಯಾಣಿಯವರು ಕುಟುಂಬದಲ್ಲಿ ಅನುಭವಿಸಿದವರು. ತೊಟ್ಟಲ ಮೇಲಿನ ಛತ್ತು ಅಲಂಕಾರವಾಗಿ ಶಿಂಗಾರಗೊಂಡು ಮಗುವನ್ನು ತನ್ನ ಕಡೆ ಆಕರ್ಶಿಸುವದರ ಜೊತೆಗೆ ಮಗು ನಿದ್ರೆಗೆ ಜಾರಿಸುವ ಸಾಧನವಾಗಿದೆ. ಕಂಚ್ಯಾಣಿಯವರು ತಾಯಿಯ ಸ್ಥಾನದಲ್ಲಿ ನಿಂತು ಕಾವ್ಯರಚಿಸುವದೇ ಹೆಚ್ಚು ಹೀಗಾಗಿ ಅವರಲ್ಲಿ ಮಾತೃವಾತ್ಸಲ್ಯ ಗುಣ ಮಡುಗಟ್ಟಿದೆ. ಅಂದವಾಗಿ ಅಲಂಕಾರಗೊಂಡ ಈ ಛತ್ತಿನಲ್ಲಿ ಮುತ್ತಿನ ಗುಬ್ಬಿ, ಕನ್ನಡಿ ಕಣ್ಣು, ಗಿರಿ ಗಿರಿ ತಿರುಗುವ ಲಕ ಲಕ ಹೊಳೆಯುವ, ಚಕ ಚಕ ನೋಡುವ ಬಣ್ಣದ ಗುಬ್ಬಿ ಮಗುವಿನ ಕಣ್ಣಿಗೆ ಹಬ್ಬ. ವಾಸ್ತವವಾಗಿ ತಾಯಿಗೆ ಮಗು ಒಂದು ರೀತಿಯಲ್ಲಿ ಗುಬ್ಬಿಯೇ ಸರಿ. ಅದೇ ಅವಳಿಗೆ ತೊಟ್ಟಿಲು ಗುಬ್ಬಿ. ಇಲ್ಲಿ ಗುಬ್ಬಿ ಪ್ರೀತಿಯ ದ್ಯೋತಕವಾಗಿ ಮೂಡಿನಿಂತ ಸಂಕೇತ.

ಅಪ್ಪ ಹೂರಣಗಡಬು । ಅವ್ವ ಹೆರೆದುಪ್ಪ ।
ಹುಗ್ಗಿ ಹೋಳಿಗೆ ಅಪ್ಪ । ಅವ್ವ ತಿಳಿದುಪ್ಪ ॥
ಅಜ್ಜಿಯೂ ಅಜ್ಜನು ಕಳಿತ ಉಪ್ಪಿನಕಾಯಿ ।
ಹುಳಿಯಾದರೇನಂತೆ ಚಪ್ಪರಿಸು ಬಾಯಿ ॥ ೨

ಕಂಚ್ಯಾಣಿಯವರು ರವಿ ಕಾಣದ್ದನ್ನು ಕಂಡವರು. ಭಾವನೆಗಳ ಚಿತ್ತಾರ ಶಿಶು ಕಾವ್ಯದ ತುಂಬೆಲ್ಲ ಮೂಡಿಸಿದವರು.

---

೧. ತೊಟ್ಟಲು ಗುಬ್ಬಿ ಪುಟ ೬ ಕಂಚ್ಯಾಣಿ ಶರಣಪ್ಪನವರು.
೨. ಬಾಲಗಣಪ : ನೂರೊಂದು ಕವಿತೆಗಳು ಪುಟ–೯ ಕಂಚ್ಯಾಣಿ ಶರಣಪ್ಪ.

ಅಪ್ಪ-ಅವ್ವ ಹೋಳಿಗೆ ತುಪ್ಪ ಎಂದು ಸಾಗುವ ಪದ್ಯ ಇಡೀ ಕುಟುಂಬದ ಸದಸ್ಯರನ್ನು ಊಟದ ಪದಾರ್ಥಗಳಿಗೆ ಹೋಲಿಸಿ ಹೇಳುವ ವ್ಯಾಖ್ಯಾನ ರಸಭರಿತವಾದುದು. ಸ್ವಾರ್ಥಕವಾಗಿ ಮೂಡಿ ಬಂದಿದೆ. ಮಕ್ಕಳಲ್ಲದೆ ಹಿರಿಯರೂ ಸಹ ಬಾಯಿ ಚಪ್ಪರಿಸದೆ ಇರಲಾರರು.

ಬಾಳಿನೀ ಬಟ್ಟಲಲಿ ಒಲುಮೆ ಸುರಿಸಿದ ಪಾಕ ।
ತುಂಬಿರುವ ತಂಬಿಗೆಯು ಗುರುಕರುಣೆಯುದಕ ॥ ೧

ಎನ್ನುವ ಸಾಲುಗಳೂ ಕಂಚ್ಯಾಣಿಯವರ ಬದುಕಿಗೆ ಪೂರಕವಾಗಿವೆ. ಅವರ ಬದುಕೇ ಒಂದು ಬಟ್ಟಲು, ಅದು ಒಲುಮೆಯಿಂದ ಕೂಡಿದ ಸಕ್ಕರೆಯ ಪಾಕ ಸುಂದರ-ಸಮೃದ್ಧಿಯ ಈ ಬಾಳು ಗುರುಕರುಣೆಯಿಂದ ತುಂಬಿರುವ ತಂಬಿಗೆಯ ನೀರು. ಇದು ಕಂಚ್ಯಾಣಿಯವರ ಜೀವನದ ಸುಂದರ ಗಳಿಗೆ.

ಅಡಿಗೆಯ ಮನೆಯಲಿ ದುಡುದುಡು ಓಡಿ
ಕೇಕೆಯ ಹಾಕಿತು ಪಾಪನ ಗಾಡಿ ।
ಅಂಬೇಗಾಲಿನ ಅಂದದ ಗಾಡಿ
ಆಡುವೆ ಹಾಡುವೆ ಬರುತಿದೆ ನೋಡಿ ॥ ೨

ಮಗುವಿನ ಆಟವನ್ನು ನಡೆಯುವ ನಡಿಗೆಯನ್ನು ಕವಿ ಕಂಚ್ಯಾಣಿಯವರು ಮನಸಾರೆ ಕೊಂಡಾಡಿದ್ದಾರೆ. ಅಜ್ಜ-ಅಜ್ಜಿಯರಾಗಲಿ, ತಂದೆ-ತಾಯಿಗಳಾಗಲಿ ಮಕ್ಕಳನ್ನು ಆಡಿಸುವ-ನಡೆಸುವ ಸಂದರ್ಭದ ಶೈಲಿ ಮೂಡಿದಂತಿದೆ. ಚಕ್ ಚಕ್ ಅಗ್ಗಿನ ಗಾಡಿ, ಪೌಂ ಪೌಂ. ಮೋಟರ ಗಾಡಿ, ಕುಣಿಯುತ ಬರುವ ಕುದುರೆಯ ಗಾಡಿ, ಗಿಲ್ ಗಿಲ್ ಗೆಜ್ಜೆಯ ಎತ್ತಿನ ಗಾಡಿ ಹೀಗೆ ಹಲವು ಗಾಡಿಗಳ ಸದ್ದಿನ ವರ್ಣನೆ ಮಾಡುವದರೊಂದಿಗೆ ಮುಗ್ಧ ಮಗು ಅಂಬೇಗಾಲಿನಿಂದ (ಎರಡು ಕೈ-ಕಾಲು ನೆಲಕ್ಕೆ ಹಚ್ಚಿ ನಡೆಯುವ ರೀತಿ) ಮನೆಯಲ್ಲಿ ಓಡಾಡುವ ದೃಶ್ಯ ಕಂಚ್ಯಾಣಿಯವರ ಕಣ್ಣಿಗೆ ಹಬ್ಬವಾಗಿ ಕಂಡಿದೆ. ಪುಟ್ಟ ಮಗುವಿನ ದಟ್ಟ ಹೆಜ್ಜೆಗಳನ್ನು ಗುರುತಿಸುವಲ್ಲಿ ಕವಿ ಯಶಸ್ವಿಯಾಗಿದ್ದಾರೆ. ತಮ್ಮನ್ನೆ ತಾವು ಮರೆತು ಹಾಡಿ ಹೇಳಿದ್ದಾರೆ.

'ಕೂಸನು ಕೂಡ್ರಿಸಿ ಆಡಲು ಹೊರಟರೆ
ಚಿಟ್ಟನೆ ಚೀರುವುದು ।
ಕಣ್ಣಲಿ ನೀರು ಇಲ್ಲವೆ ಇಲ್ಲ
ಸುಳ್ಳೇ ಅಳುತಿಹುದು ॥
ಕ್ಷಣದಲಿ ನಕ್ಕು ಕ್ಷಣದಲಿ ಅತ್ತು
ಜೋಕನು ಮಾಡುವುದು ।
ಕಿರಿ ಕಿರಿ ಮಾಡುವ ಕಾಡುವ ಕೂಸು
ಮೋಜೆ ಆಗಿಹುದು ॥ ೩

---

೧. ಬಾಲಗಣಪ : ನೂರೊಂದು ಕವಿತಗಳು ಪುಟ-೯ ಕಂಚ್ಯಾಣಿ ಶರಣಪ್ಪ.

೨. ಅಂಬೇಗಾಲಿನ ಅಂದದ ಗಾಡಿ : ನೂರೊಂದು ಕವಿತೆಗಳು ಪುಟ-೪೫ ಕಂಚ್ಯಾಣಿ ಶರಣಪ್ಪ.

೩. ಕಾಡುವ ಕೂಸು : ನೂರೊಂದು ಕವಿತೆಗಳೂ ಪುಟ-೭೯ ಕಂಚ್ಯಾಣಿ ಶರಣಪ್ಪ.

ಮಕ್ಕಳ ಆಟ-ಪಾಠ-ಕಾಟ ಮನೆಮಂದಿಗೆಲ್ಲ ಮೋಜಿನದು. ಮಗು ಅತ್ತರೂ ಚಂದ ನಕ್ಕರೂ ಚಂದ, ಪೀಡಿಸಿದರೂ ಚಂದ. ಅಕ್ಕ-ಅಣ್ಣ ಯಾರಾದರೂ ಸರಿ ಅವರಿಗೂ ಕಿರಿ ಕಿರಿ ಕೊಡುವ ಮಗು ಮನೆಯ ವಸ್ತುಗಳನ್ನು ಹಾಳುಗೆಡವಿ ಕಣ್ಣಲ್ಲಿ ನೀರು ಇಲ್ಲದೆ ಸುಮ್ಮನೆ ಅಳುತಿರುವದು' ಎಂದು ಕಂಚ್ಯಾಣಿಯವರು ಮಗುವಿನ ಬಂಡತನವನ್ನು ವ್ಯಕ್ತಪಡಿಸುತ್ತಾರೆ.

'ನನ್ನ ಹೆಸರಗೊಂಡು ಯಾರು ಕರೆಯಲೊಲ್ಲರು
ತೊಟ್ಟಿಲಲ್ಲಿ ಇಟ್ಟ ಹೆಸರು ಮರೆತು ಬಿಟ್ಟರು ।
ಶಾಲೆಯಲ್ಲಿ ನನ್ನ ಗುರುಗಳೆಂಥ ಜಾಣರು
ಬಾಯತುಂಬ ನನ್ನ ಹೆಸರು ಕೂಗಿ ಕರೆದರು । ೧

ಮಕ್ಕಳಿಗೆ ಮುಜುಗುರ ತರಿಸುವದು ತಮ್ಮ ಹೆಸರು. ಮನೆಯವರೆಲ್ಲ ಪ್ರೀತಿಯಿಂದ ಕರೆಯುವ ಹೆಸರೇ ಬೇರೆ ಬೇರೆ. ಅಕ್ಕರೆಯಿಂದ ಕರೆಯುವ ಪುಟ್ಟ, ರಾಜ, ತುಂಟ, ಮರಿ, ಪೆದ್ದ ಮುಂತಾದವುಗಳಿಂದ ಕರೆದರೆ ಗುರುಗಳು ತನ್ನ ಹೆಸರನ್ನು ಕೂಗಿ ಕರೆದಾಗ ಮನಸಾಪೂರ್ವಕವಾಗಿ ವಂದಿಸಿ ಆನಂದಿಸುತ್ತದೆ. ಇದು ಕಂಚ್ಯಾಣಿಯವರ ಮಕ್ಕಳ ಮೇಲಿನ ಶಿಕ್ಷಕನ ಒಲುಮೆಯ ನೆಲೆಯನ್ನು ಕಂಡುಕೊಳ್ಳಲು ಸಾಧ್ಯವಾಗಿದೆ. ಈ ಹಲವು ನೆಲೆಗಳಲ್ಲಿ ಕಂಚ್ಯಾಣಿಯವರ ಶಿಶು ಕವಿತೆಗಳು ಕೌಟುಂಬಿಕ ವಾತ್ಸಲ್ಯದ ಸೆಲೆಯಲ್ಲಿ ಹರಿದು-ಹಂಚಿ ಹೋಗಿರುವದನ್ನು ಕಾಣಿತ್ತೇವೆ.

## ❖ ನಿಸರ್ಗ ಕವಿತೆಗಳು :

ಕಂಚ್ಯಾಣಿಯವರ ಶಿಶು ಸಾಹಿತ್ಯದಲ್ಲಿ ವೈವಿಧ್ಯತೆ ಕಂಡುಬರುವದಕ್ಕೆ ಕಾರಣ ಅವರ ವಿವಿಧತೆಯ ಹಲವು ತಾಣಗಳ ಬದುಕು. ಹುಟ್ಟಿನಿಂದ ನಿವೃತ್ತಿಯವರೆಗೆ ಹತ್ತಾರು ಊರುಗಳಲ್ಲಿ ವೃತ್ತಿ ನಿರತ ಅವಿರತ ಸೇವೆ ಇದರಿಂದಾಗಿ ಅನೇಕ ಜನರ ಮತ್ತು ಸಾವಿರಾರು ಮಕ್ಕಳ ನಡೆವಳಿಕೆಗಳನ್ನು ಅರಿತವರು ಪ್ರಾಣಿ-ಪಕ್ಷಿಗಳ, ಗಿಡ-ಮರಗಳ, ಹಳ್ಳ-ಕೊಳ್ಳಗಳ, ಮಳೆ-ಮೋಡಗಳ, ಸೂರ್ಯ-ಚಂದ್ರರ, ಸೂರ್ಯೋದಯ-ಸೂರ್ಯಾಸ್ಥಗಳ ಮೊದಲಾದ ಸೃಷ್ಟಿಯ ವೈಚಿತ್ರಗಳನ್ನು ಕವಿತೆಗಳಲ್ಲಿ ಸೆರೆಹಿಡಿದವರು ಕಂಚ್ಯಾಣಿ ಶರಣಪ್ಪನವರು ಅವರವರ ಮನೋಭಾವನೆಗಳಿಗೆ ಸ್ಪಂದಿಸಿ ಸಾಹಿತ್ಯ ಸೃಷ್ಟಿಸಿದವರು. ಹೀಗಾಗಿ ಕಂಚ್ಯಾಣಿಯವರ ಸಾಹಿತ್ಯದಲ್ಲಿ ಮಕ್ಕಳ ಆಶಯ ಮತ್ತು ಆಲೋಚನೆಗಳಿಗೆ ದೊರೆತ ಶಿಶು ಕಾವ್ಯದ ಫಲಗಳನ್ನು ಕಾಣುತ್ತೇವೆ.

ಪ್ರಕೃತಿಯ ಮಡಿಲಲ್ಲಿ ಬದುಕು ಸವೆಸಿದ ಕಂಚ್ಯಾಣಿಯವರು ಸಹಜವಾಗಿಯೇ ನಿಸರ್ಗ ಗೀತೆಗಳನ್ನು ಮಕ್ಕಳಿಗಾಗಿ ರಚಿಸಿದ್ದಾರೆ.

ಮನೆಯಂಗಳದಲಿ ಮರವೊಂದಿದ್ದರೆ
ಮನೆಯೇ ನಂದನವು ।
ಊರಿನ ಬದಿಯಲಿ ಬನವೊಂದಿದ್ದರೆ
ಊರೇ ಗೋಕುಲವು ॥ ೨

---

೧. ಗುರುಗಳೆಂಥ ಜಾಣರು : ನೂರೊಂದು ಕವಿತೆಗಳು ಪುಟ-೧೦೭ ಕಂಚ್ಯಾಣಿ ಶರಣಪ್ಪ.
೨. ಚಲುವಿನ ಚೇತನ : ನೂರೊಂದು ಕವಿತೆಗಳು ಪುಟ-೩೦ ಕಂಚ್ಯಾಣಿ ಶರಣಪ್ಪ.

ಪರಿಸರ ಪ್ರೇಮವನ್ನು ಮನಸಾರೆ ಹಾಡಿ–ಹೊಗಳಿ ಕೊಂಡಾಡಿದ ಕಂಚ್ಯಾಣಿಯವರು 'ಮರ ಬೆಳಸಿರಿ – ಕಾಡು ಉಳಿಸಿರಿ' ಎಂಬ ನುಡಿಯಂತೆ ನಡೆದವರು.

ಮೋಡಕೆ ತಂಪನು ತಗುಲಿಸಿ ಗಿಡಮರ
ಮಳೆಯನು ಬರಿಸುವವು ।
ಕ್ಷಣದಲಿ ಪರಿಸರ ಮಲಿನತೆ ಕಳೆಯುತೆ
ಶುಚಿಯಾಗಿರಿಸುವವು ॥ ೧

ನಿಸರ್ಗದ ಪ್ರತೀಜೀವರಾಶಿಗಳಿಗೆ ಜಲವೇ ಜೀವನಾಧಾರ. ಜಲವಿಲ್ಲದೆ ಜೀವಿಗೆ ನೆಲೆಯಿಲ್ಲ. ಇದು ಕವಿತೆಯ ಪೂರ್ಣ ಭಾವ ಮರಗಳಿಂದ ತುಂಬಿಕೊಂಡ ಕಾಡು ಸಮೃದ್ಧವಾಗಿದ್ದರೆ ಇಳೆಗೆ ಮಳೆ ಸುರಿಯಲು ಸಾಧ್ಯವೆನ್ನುವ ಅರಿವು ಕಂಚ್ಯಾಣಿಯವರದು. ಮಳೆಯಿಂದ ಪರಿಸರದ ಮಲಿನತೆ ಕಳೆಯುವ, ಬಣ್ಣ ಬಣ್ಣದ ಹೂವುಗಳು ಅರಳುವ, ಪಶು–ಪಕ್ಷಿಗಳಿಗೆ ಆಸರೆ ನೀಡುವ, ಗಿಳಿ, ಕೋಗಿಲೆಗಳ ನಿನಾದ, ನವಿಲಿನ ನರ್ತನ, ತುಂಬಿಯ ಗಾಯನ, ಮುಂತಾದ ಚೈತನ್ಯದ ಚಿಲುಮೆಯ ಹೊನಲು ಹೊಮ್ಮುವದು ಸಹಜ ಕಾಡಿನ ಸಂಪತ್ತನ್ನು ಉಳಿಸಲು–ಬೆಳೆಸಲು, ನಾಡು–ಕಾಡಿನ ಸಂಬಂಧವನ್ನು ಬೆಸೆಯುವ ಕೊಂಡಿ. ಈ ತರು–ಲತೆಗಳ ಸಮೂಹ ಎನ್ನುವ ಭಾವನೆ ಕಂಚ್ಯಾಣಿಯವರದು.

ಬೆಟ್ಟನೆತ್ತಿಗಿಳಿದು
ಕಾಡು ಮೇಡು ಸುಳಿದು
ಮಿಂಚಿ ಮಾಯವಾಗಿ
ಕರಗಿ ಹೋಗತಾವ । ಮಳೆಯ ಸುರಿಸತಾವ ॥
ಸುತ್ತ ಮುತ್ತ ಸುರಿದು
ನೆಲದ ಮ್ಯಾಲೆ ಹರಿದು
ಮತ್ತೆ ಮೋಡಿ ಮಾಡಿ
ಮಳೆಯ ಬಿಲ್ಲು ಮೂಡಿ । ಮೋಡ ಬಂತು ಮೋಡ ॥ ೨

ಮಳೆಯ ಮೋಡಿಯನ್ನು ನೋಡಿ ಮಗುವಾಗಿ ಆಡಿದ ಕಂಚ್ಯಾಣಿಯವರು ಮೋಡಗಳ ನಾನಾ ರೂಪಗಳನ್ನು ಕಂಡವರು ಗಾಳಿಯಲ್ಲಿ ತೇಲಿಬರುವ, ಗಗನದಲ್ಲಿ ಫೇರಿ ಹಾರುವ, ಸೂರ್ಯನಿಗೆ ಅಡ್ಡಲಾಗಿ ಮುಸುಕುವ ಗುಡುಗು–ಸಿಡಿಲಿನ ಜೋಡಿಯ ಆರ್ಭಟದ ಗತ್ತು ಮಕ್ಕಳ ಮನಸ್ಸಿಗೆ ಉಲ್ಲಾಸ ರೋಮಾಂಚನ.

ಕಂಚ್ಯಾಣಿಯವರು ಕವಿತೆಗಳಲ್ಲಿ ನಿಸರ್ಗ ರಮಣೀಯ ದೃಶ್ಯಗಳನ್ನು ತಮ್ಮ ಬಾಲ್ಯದ ನೆನಪುಗಳಿಂದ, ಮಕ್ಕಳ ಒಡನಾಟದಿಂದ ಹಾಗೂ ಅವರ ಶಿಕ್ಷಕ ವೃತ್ತಿಯಿಂದ.

ರೊಯ್ಯನೆ ಗಾಳಿ ಬೀಸೇದ
ಕಪ್ಪನೆ ಮೋಡ ತೇಲೇದ
ಗಕ್ಕನೆ ಗಗನಕೆ ಹಾರೇದ
ಮೋಡಿ ಮಾಡುತ ನಡದsದ । ೩

---

೧. ಚಲುವಿನ ಚೇತನ : ನೂರೊಂದು ಕವಿತೆಗಳು ಪುಟ–೩೦ ಕಂಚ್ಯಾಣಿ ಶರಣಪ್ಪ.
೨. ಮೋಡ ಬಂತು ಮೋಡ : ಬೆದರು ಬೆಚ್ಚ ಪುಟ–೨೭ ಕಂಚ್ಯಾಣಿ ಶರಣಪ್ಪ.
೩. ಮುಂಗಾರಿ : ಬೆದರು ಬೆಚ್ಚ ಪುಟ–೩೬ ಕಂಚ್ಯಾಣಿ ಶರಣಪ್ಪ.

ಆಗಸದಲ್ಲಿ ಮೋಡಗಳ ಚಲ್ಲಾಟದ ಹಲವು ಚಿತ್ತಾರಗಳನ್ನು ಕಂಡಂಥ ಕಂಚ್ಯಾಣಿಯವರು ಕಣ್ಣಿಗೆ ಕಟ್ಟದಂತೆ ಹೇಳಿದ್ದಾರಲ್ಲದೆ ಬಯಲು ಸೀಮೆಯ ಬದುಕಿಗೆ ಆಸರೆ ಈ ಮೋಡ-ಮಳೆ ಎಂದು ವರ್ಣಿಸುತ್ತಾ.

ಧೋ ಧೋ ಮಳೆಯನು ಸುರಿಸೇದ
ದಳ ದಳ ಮುತ್ತು ಉದುರೇದ
ಗಮ್ಮನೆ ಭೂಮಿ ಅರಳೇದ ।
.........................................
ಜೀವಕೆ ಕಳೆಯು ಮೂಡೇದ
ಚೇತನ ಚಿಲುವು ಚಿಮ್ಮೇದ ॥ ೧

ನಿಸರ್ಗದ ನೈಜತೆಯನ್ನು ಕಂಡು ಅನುಭವಿಸಿದ ಕಂಚ್ಯಾಣಿಯವರು ಮುಂಗಾರಿನ ಮಳೆಯನ್ನು ರಭಸದ-ರಸವಾಗಿ ಶಿಶು ಕವಿತೆಗಳಲ್ಲಿ ಸುರಿಸಿ ಹರಿಸಿದ್ದಾರೆ.

ಮಳೆ ಮಕ್ಕಳಿಗೆ ಮಾತ್ರ ಚಲ್ಲಾಟವಾಗದೆ, ಭೂತಾಯಿಯ ಮಡಿಲಲ್ಲಿ ದುಡಿಯುವ, ನಾಡಿಗೆ ಆಸರೆಯಾದ ಕೃಷಿಕರಿಗೆ ಸಂತಸ-ಸಂಭ್ರಮ ತರುವದು. ಅಲ್ಲದೆ ಭೂತಾಯಿಯೇ ಹಿರಿ ಹಿರಿ ಹಿಗ್ಗುವ, ಗಟ ಗಟ ಕುಡಿಯುವ ದೃಶ್ಯ ಮಾರ್ಮಿಕವಾದುದು. ಹಳ್ಳ-ಕೊಳ್ಳಗಳು ಮೈದುಂಬಿ ಹರಿಯುವ, ಪ್ರಾಣಿ-ಪಕ್ಷಿ, ಸಸ್ಯರಾಶಿಗೆ ಜೀವಕಳೆ ಮೂಡಿಸುವ ಚೇತನ ಚಿಲುಮೆ ಈ ಮುಂಗಾರು ಮಳೆ. 'ಬಗೆ ಬಗೆ ಬಣ್ಣದ ಕಾಮನ ಬಿಲ್ಲಿನ ಕಮಾನು ನಮಿಲುಗಳ ನರ್ತನಕ್ಕೆ ಹಬ್ಬ' ಎನ್ನುವ ಕಂಚ್ಯಾಣಿಯವರು.

ಕಾಮನ ಬಿಲ್ಲಿನು ಕಟ್ಟಿದರಾರು ?
ಬಗೆ ಬಗೆ ಬಣ್ಣದ ಬಳಿದವರಾರು ?
ಬಟ್ಟಂ ಬಯಲಲಿ ಇಟ್ಟವರಾರು ?
ಬಾನಿಗೆ ಬೆಡನು ಇತ್ತವರಾರು ?
ಅಂದದ ಚಂದದ ಗೋಳಾಕಾರ
ಅಳತೆಗೆ ಸಿಕ್ಕದ ಅಪರಂಪಾರ ॥ ೨

ಪ್ರಕೃತಿಯ ವಿಸ್ಮಯ ಈ ಕಾಮನ ಬಿಲ್ಲು. ಆಗಸದಲ್ಲಿ ಅಂದವಾಗಿ ಮೂಡಿದ ಅಳತೆಗೆ ಸಿಗದ ಅಪರಂಪಾರ, ಮಳೆಯಲಿ ನೆನೆಯದ ಗುಡುಗಿಗೆ ನಡುಗದ ಗಾಳಿಗೆ ಹಾರದ, ಸಿಡಿಲಿಗೆ ಬಿರಿಯದ ಕಾಮನಬಿಲ್ಲು ಕಟ್ಟಿದವರಾರು ಎಂಬ ಪ್ರಶ್ನೆ ಮಗುವಿನ ಮನದ ಕಂಚ್ಯಾಣಿಯವರದು. ಬಾನಿಗೆ ಬೆಡಗು ನೀಡುವ, ಎಂದೂ ಮರೆಯಲಾರದ, ಕ್ಷಣದಲಿ ಕರಗುವ ಕಾಮನ ಬಿಲ್ಲು ಚಿಣ್ಣರ ತಣಿಸುವ ಬಣ್ಣದ ಕಣ್ಣು ಇದು ಕವಿಯ ಒಳಗಣ್ಣಿನ ನೋಟ.

---

೧. ಮುಂಗಾರಿ : ಬೆದರು ಬೆಚ್ಚ ಪುಟ-೩೭ ಕಂಚ್ಯಾಣಿ ಶರಣಪ್ಪ.
೨. ಕಾಮನ ಬಿಲ್ಲು : ತೊಟ್ಟಲು ಗುಬ್ಬಿ ಪುಟ-೧೪ ಕಂಚ್ಯಾಣಿ ಶರಣಪ್ಪ.

"ಮೋಡ ಮಾತನಾಡುತಿವೆ ನೋಡ ಬನ್ನಿ ಗೆಳೆಯರೆ ।
ನಮಗೆ ಏನೋ ಹೇಳುತಿವೆ ಕೇಳ ಬನ್ನಿ ಮಿತ್ರರೇ ॥
ಕೆಟ್ಟ ಕಾಡುಗಳ್ಳರು
ಕಾಡನೆಲ್ಲ ಕಡಿದರು ।
ದುಷ್ಟ ಲಾಭ ಬಡಕರು
ಬೆಟ್ಟ ಸವರಿ ಬಿಟ್ಟರು" ॥ ೧

ಪರಿಸರದ ಮೇಲೆ ಮಾನವನು ನಿರಂತರ ಶೋಕ್ಷಣೆ ಮಾಡುತ್ತಿರುವದು ಈ ಕವಿತೆಯ ಧ್ವನಿ. ಗುಡು ಗುಡು ವಟ ವಟ ಸಿಡುಕುತನದ ಮೋಡದ ನುಡಿಗಳು ಕೇಳ ಬನ್ನಿ; ಭಾಷೆ ತಿಳಿಯದಿದ್ದರೇನು ಮನದ ಆಶೆ ತಿಳಿಯದೇನು ? ಎನ್ನುವ ಕಂಚ್ಯಾಣಿಯವರು, ಕಾಡನ್ನು ನಾಶಪಡಿಸುವ ದುಷ್ಟರನ್ನು, ಲಾಭತನದ ಕಳ್ಳರನ್ನು ವಿಡಂಬಿಸಿದ್ದಾರೆ ನಿಸರ್ಗದ ಭಾಷೆಯನ್ನು ಅರಿತು-ಅನುಭವಿಸಿದ ಕಲ್ಪನೆ ವರ್ಣನಾತೀತವಾದುದು ಕವಿಯ ಕಣ್ಣಿಗೆ ಒಲುಮೆಯ ಮನಸ್ಸಿಗೆ.

ಭೂಮಿ ತಾಪ ಹೆಚ್ಚಿದ, ವಿಷದ ಗಾಳಿ ತುಂಬಿದೆ
ನಮ್ಮ ಉಸಿರುಗಟ್ಟಿದೆ, ಹಸಿರು ಉಸಿರು ಎಲ್ಲಿದೆ ?
ನೊಂದು ಮೋಡ ನುಡಿದಿದೆ, ನುಡಿದು ಮುಂದೆ ನಡೆದಿದೆ ।
ನಾಲ್ಕು ಹನಿಯ ಉದುರಿಸಿ ನಮ್ಮನೆಲ್ಲ ಅಣುಕಿಸಿ ॥ ೨

ಮರಗಳಿಲ್ಲದ ಬರಡು ಭೂಮಿಗೆ ಮಳೆ ಸುರಿಯದು ಇದರಿಂದ ಭೂಮಿಯ ತಾಪ ಹೆಚ್ಚಿ ಪರಿಸರ ವಿಷಕಾರಿಯಾಗಿ ಪರಿಣಮಿಸಿದೆ. ಹಸಿರೆ-ಉಸಿರು ಎನ್ನುವದು ಬಿಟ್ಟು ವಿಷವೆ-ಉಸಿರು ಎನ್ನುವಂತಾಗಿದೆ ಬದುಕು ಎಂದು ವಿಡಂಬಿಸುವ ನುಡಿಯ ಜೊತೆಗೆ ನಾಲ್ಕು ಹನಿ ಉದುರಿಸಿ ಅಣಕಿಸುವ ಮೋಡ ಮಾನವರನ್ನು ನಾಚಿಸುವಂತೆ ಮಾಡಿದೆ.

ದಡಬಡ ಬಾಗಿಲು ಬಡದಾನ
ಮೋಡದ ಮನೆಯ ಹೊಕ್ಕಾನ
ಸಿಡಿಲನು ಸಿಡಿಸುತ ನಿಂತಾನ
ಧೋ ಧೋ ಮಳೆಯನು ಸುರಿಸ್ಯಾನ॥ ೩

ಮಳೆಗಾಲದ ದೃಶ್ಯ ಎಲ್ಲರಿಗೂ ಹಿತವನ್ನು ನೀಡುವದು ಗಡಗಡ ಸದ್ದಿನ ಗುಡು ಗುಡು ಮುತ್ಯಾ ಬಂದಾನ ಎನ್ನುವ ಪುಟ್ಟ ಮಕ್ಕಳ ಆಟ ನೋಡಲು ಬಲು ಸುಂದರ ಆಕಾಶದಲ್ಲಿ ಕಾಮನ ಬಿಲ್ಲು ಬಣ್ಣಗಳ ವೈವಿಧ್ಯತೆಯನ್ನು ಮೂಡಿಸಿ ಆಲಿ ಕಲ್ಲಿನ ಮಳೆ ಸುರಿಸಿ "ಹಳ್ಳಕೆ ಹರೆಯ ತಂದಾನ" ಎನ್ನುವ ಕಂಚ್ಯಾಣಿಯವರು ಶಿಶು ಕಾವ್ಯದಲ್ಲಿ ಅಲಂಕಾರವನ್ನು ಸೃಷ್ಟಿಸಿ ಕವಿತ್ವ ಮರೆದಿದ್ದಾರೆ ಮುಂದುವರೆದು ಕವಿ ಕವಿತೆಯ ಧ್ವನಿಯನ್ನು ಗುರುತಿಸುವಲ್ಲಿ ಯಶಸ್ವಿಯಾಗಿದ್ದಾರೆ. " ಹೊಳೆಗಳ ಹಾಡಲು ಹಚ್ಯಾನ" ಎನ್ನುವ ಸಾಲುಗಳೇ ಅದಕ್ಕೆ ನಿದರ್ಶನ. ಮಕ್ಕಳಲ್ಲಿ ಮಗುವಾಗಿ ಆಡುವ ಕಂಚ್ಯಾಣಿಯವರು ರೈತಾಪಿ ಜನ-ಜೀವನದ ನಾಡಿಯ ಮಿಡಿತವನ್ನು "ಬಿಸಿಲಿನ ಬೇಗೆ ತಣಿಸ್ಯಾನ" ಎನ್ನುವಲ್ಲಿ ಮನದುಂಬಿ ಅಭಿವ್ಯಕ್ತಪಡಿಸಿದ್ದಾರೆ.

---

೧. ಮೋಡ ಮಾತನಾಡುತಿವೆ : ತೊಟ್ಟಿಲುಗುಬ್ಬಿ ಪುಟಾ-೧೮ ಕಂಚ್ಯಾಣಿ ಶರಣಪ್ಪ.
೨. ಮೋಡ ಮಾತನಾಡುತಿವೆ : ತೊಟ್ಟಿಲುಗುಬ್ಬಿ ಪುಟ-೧೯ ಕಂಚ್ಯಾಣಿ ಶರಣಪ್ಪ.
೩. ಗುಡು ಗುಡು ಮುತ್ಯಾ ಬಂದಾನ : ತೊಟ್ಟಿಲು ಗುಬ್ಬಿ ಪುಟ-೩೧ ಕಂಚ್ಯಾಣಿ ಶರಣಪ್ಪ.

## ❖ ದೇಶಾಭಿಮಾನದ ಕವಿತೆಗಳು :

ನವೋದಯ ಕವಿಗಳಲ್ಲಿ ಮುಖ್ಯವಾಗಿ ನಿಸರ್ಗದ ಚೆಲುವು, ಕಲೆ, ದೇಶಪ್ರೇಮ, ಸಮಕಾಲೀನ ಬದುಕಿನ ನೂರಾರು ಸಮಸ್ಯಗಳು, ಕೌಟುಂಬಿಕ ಜೀವನದ ಸುಖ-ದುಃಖ, ತಾತ್ವಿಕ ಅನುಭವಗಳು ಮುಂತಾದ ವಿಷಯಗಳು ಕವಿತೆಗಳಲ್ಲಿ ಎದ್ದು ಕಾಣುತ್ತವೆ. ಈ ಪರಂಪರೆಯಲ್ಲಿ ಮುಂದುವರೆದ ಸಮಕಾಲೀನ ಕವಿಗಳಲ್ಲಿ, ಮಕ್ಕಳ ಸಾಹಿತಿ ಕಂಚ್ಯಾಣಿಯವರು ಒಬ್ಬರು. ದೇಶಾಭಿಮಾನದ, ರಾಷ್ಟ್ರಪ್ರೇಮವನ್ನು ವ್ಯಕ್ತಗೊಳಿಸುವ, ದೇಶಭಕ್ತರ ಕುರಿತಾದ ಕವಿತೆಗಳನ್ನು ಮಕ್ಕಳಿಗೆ ರಚಿಸಿ ಕೊಟ್ಟಿರುವದಲ್ಲದೆ ಅವರಲ್ಲಿ ಅಭಿಮಾನ ಮೂಡುವಂತೆ ಪ್ರೇರೇಪಿಸಿದ್ದು ಗಮನಾರ್ಹವಾದುದು.

ಹದಿಹರೆಯದ ಬಿಸಿ
ನೆತ್ತರದೆದೆಯೊಳು
ಕ್ರಾಂತಿಯ ಕಿಡಿಯನು ಬಿತ್ತೋಣ ।
ದೇಶ ಪ್ರೇಮದ
ಪೂರ್ಣ ಪ್ರಜ್ಞೆಯಲಿ
ಭಾವೈಕ್ಯದ ಬೆಳೆ ಬೆಳೆಯೋಣ ॥ ೧

ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಿ ಉದಯಿಸಿದ ಶಿಶು ಕವಿ ಕಂಚ್ಯಾಣಿಯವರಿಗೆ ದೇಶ ಪ್ರೇಮದ ಪ್ರಭಾವ ಅಚ್ಚೊತ್ತಿದೆ. ಇವರ ಕವಿತೆಗಳು ಮಕ್ಕಳಲ್ಲಿ ಕ್ರಾಂತಿಯ ಕಿಚ್ಚು ಹುಚ್ಚು ಬಡಿದೆಬ್ಬಿಸಿವೆ. ಶೂರ ಸುಭಾಸರ ಜಾಗೃತ ಭಾರತ ಕಟ್ಟುವಲ್ಲಿ ಯುವ ಜನತೆಯಲ್ಲಿ ದೇಶಾಭಿಮಾನಿಗಳ ಬದುಕನ್ನು ಚಿತ್ರಿಸಿ ಅಭಿಮಾನವನ್ನು ಮೂಡಿಸಿದ್ದಾರೆ. ಭ್ರಷ್ಟಾಚಾರದ ಕಳೆಯನು ಕೀಳುವ ಬೆವರಿನ ಮಳೆಯನ್ನು ಸುರಿಸುವ ಜಾಗೃತ-ಭಾರತ ಕಟ್ಟೋಣವೆಂದು ಯುವಕರಿಗೆ ಕರೆನೀಡಿದ್ದಾರೆ.

ದುಷ್ಟ ಗೆಳೆಯರೊಡನೆ ಕೂಡಿ ಕೆಟ್ಟ ಚಟವ ಕಲಿತನು ।
ಮನೆಯಲೊಂದು ದಿವಸ ಕಳ್ಳತನದ ಮಾಡಿಬಿಟ್ಟನು ॥
ತನ್ನ ತಂದೆ ನೊಂದನೆಂದು ಅವಗೆ ದುಃಖವಾಯಿತು ।
ತಪ್ಪನೆಂದು ಮಾಡನೆಂದು ಮನವು ಗಟ್ಟಿಗೊಂಡಿತು ॥ ೨

ಬಾಲಕನಾದ ಮೋಹನದಾಸ ಕರಮಚಂದ ಗಾಂಧಿ ಮಾಡಿದ ತಪ್ಪಿನ ಅರಿವಾಗಿ ಸಾಧನೆಯ ಗಿರಿಯನೇರಿ ಮಹಾತ್ಮನಾದುದು ರಾಷ್ಟ್ರಪಿತನೆನಿಸಿ ಕೊಂಡುದು, ಅವರ ಆದರ್ಶನೀಯ ಬದುಕು ಮಕ್ಕಳಿಗೆ ಮಾರ್ಗದರ್ಶಿ. ಅವರಲ್ಲಿರುವ ಕೆಟ್ಟ ವರ್ತನೆಗಳಿಗೆ ಕಡಿವಾಣ ಹಾಕುವ ಛಲ ಮಕ್ಕಳಲ್ಲಿರಬೇಕೆನ್ನುವದೇ ಕಂಚ್ಯಾಣಿಯವರ ಆಶಯ ತಂದೆಯ ಆಚಾರ-ವಿಚಾರ, ನಡೆ-ನುಡಿಗಳೆ ಗಾಂಧೀಜಿಯವರ ಪರಿವರ್ತನೀಯ ಬದುಕಿಗೆ ಕಾರಣ.

---

೧. ಜಾಗೃತ ಭಾರತ : ನೂರೊಂದು ಕವಿತೆಗಳು ಪುಟ-೫೦ ಕಂಚ್ಯಾಣಿ ಶರಣಪ್ಪ.
೨. ಗಾಂಧಿ ತಾತನು : ನೂರೊಂದು ಕವಿತೆಗಳು ಪುಟ-೯೪ ಕಂಚ್ಯಾಣಿ ಶರಣಪ್ಪ.

"ಚರಕ ತಿರುವಿದ ತಿರುಕ
ಭೂ ಚಕ್ರ ತಿರುಗಿಸಿದೆ
ಪರತಂತ್ರ ತಮಗಳೆದು
ಸ್ವಾತಂತ್ರ್ಯ ಬೆಳಗಿಸಿದೆ "॥ ೧

ಸರಳ-ಸಾದಾ ಬದುಕಿನ ಮರ್ಮವನ್ನು ತಿಳಿಸಿಕೊಟ್ಟ ಮಹಾತ್ಮ ಗಾಂಧೀಜಿಯ ನಡೆ-ನುಡಿಗಳು ಕಂಚ್ಯಾಣಿಯವರಲ್ಲಿ ಮಿಂಚುತ್ತವೆ. ದೀನ ದಲಿತರೆ ದೇವರು ಅಬಲೆಯರೇ ಆದಿಶಕ್ತಿಯೆಂದ ಗಾಂಧಿ ಮಹಿಳೆಯನ್ನು ಪೂಜ್ಯನಿಯವಾಗಿ ಕಂಡು ಚರಕದ ಮಹತ್ವ ಸಾರಿದ್ದಾರೆ. ಗುಡಿ ಕೈಗಾರಿಕೆ ರಾಷ್ಟ್ರದ ಬೆನ್ನಲುಬು ಅದುವೇ ದೇಶದ ಉಜ್ವಲ ಭವಿಷ್ಯ. ಇದು ಗಾಂಧೀಜಿಯವರ ಕನಸು ಪರತಂತ್ರದ ಕತ್ತಲೆಯನ್ನು ಹೋಗಲಾಡಿಸಿ ಸ್ವತಂತ್ರ ತಂದುಕೊಟ್ಟ ಧೀಮಂತ ನಾಯಕ. ಅವರ ಜೀವನ ಮೌಲ್ಯಗಳನ್ನು ಮಕ್ಕಳಲ್ಲಿ ತುಂಬುವ ಕಾಯಕ ಕಂಚ್ಯಾಣಿವರದ್ದು.

ಬಿಲ್ಲು ಬಾಣಗಳಿಲ್ಲ
ಬತ್ತಳಿಕೆ ಮೊದಲಿಲ್ಲ
ನೀ ಹಿಡಿದ ಅಹಿಂಸೆ
ಅಸ್ತ್ರ ಲೋಕದೊಳಿಲ್ಲ ॥ ೨

ಮಹಾತ್ಮಾ ಗಾಂಧೀಜಿಯವರು ಬದುಕಿನುದ್ದಕ್ಕೂ ಸತ್ಯ-ಅಹಿಂಸೆಯನ್ನು ಪಾಲಿಸಿಕೊಂಡು ಬಂದವರು. ಈಶ ಸೇವೆಗಿಂತ ದೇಶ ಸೇವೆ ಮಿಗಿಲಾದುದೆಂದು ಅರಿತು ದೇಶಕ್ಕಾಗಿ ಅಸುವನ್ನು ತ್ಯಾಗಮಾಡಿದವರು. ಆಯುಧಗಳಿಲ್ಲದೆ ಹೋರಾಡಿ ಸ್ವಾತಂತ್ರ್ಯ ತಂದು ಕೊಟ್ಟ ನಿನ್ನ ನೆನಹು ಯುಗ ಯುಗದಿ ಆಮರ ಎಂಬ ಸಂದೇಶ ಕಂಚ್ಯಾಣಿಯವರದು.

ಅಂಜಿ ಅಳುಕಿ ಓಡಲಿಲ್ಲ
ಹೇಡಿಯಾಗಿ ಆತನು
ಸಿಂಹದಂತೆ ಗುಡುಗಿ ಗುಡುಗಿ
ಸೇರಿಬಿಟ್ಟ ಸೆರೆಯನು ॥ ೩

ಅಂಗ್ಲರೆದುರು ಹೋರಾಡಿ ಭರತ ಭೂಮಿಗಾಗಿ ತನ್ನ ಪ್ರಾಣವನ್ನೇ ಕೊಟ್ಟಂತಹ ವೀರ ಭಗತ್‌ಸಿಂಗ ಮಹಾನ್ ದೇಶಾಭಿಮಾನಿ. ಕ್ರಾಂತಿಕಾರಿ ಕಿಚ್ಚಿನ ಕಿಡಿ. ಉಕ್ಕಿ ಹರಿಯುವ, ಬಿಸಿ ರಕ್ತದ ತರುಣರ ಉಗ್ರ ಸೇನೆ ಕಟ್ಟಿ ಸಾರ್ವಭೌಮದ ಆಂಗ್ಲರೆದುರು ಸಮರವನ್ನೇ ಸಾರಿದ ಧೀರ. ಇದು ಕಂಚ್ಯಾಣಿಯವರ ಕವಿತೆಯ ಒಡಲು. ರಾಷ್ಟ್ರಪ್ರೇಮದ ದೇಶಭಕ್ತರ ಪ್ರಭಾವ ಇವರಿಗೆ ಅಪಾರವಾದುದು. ಸಹಜವಾಗಿಯೇ ಕಂಚ್ಯಾಣಿಯವರು ಮಕ್ಕಳಿಗೆ ಮುಟ್ಟುವ-ತಟ್ಟುವ, ಭಾವ-ಭಾಷೆಯಲ್ಲಿ ಚಿತ್ರಸಿದ್ದಾರೆ, ಹೇಳಿಕೊಟ್ಟಿದ್ದಾರೆ.

---

೧. ಬೆಳಕು ನಿನ್ನದೆ ಇಹುದು : ನೂರೊಂದು ಕವಿತೆಗಳು ಪುಟ-೧೩೦ ಕಂಚ್ಯಾಣಿ ಶರಣಪ್ಪ.
೨. ಬೆಳಕು ನಿನ್ನದೆ ಇಹುದು : ನೂರೊಂದು ಕವಿತೆಗಳು ಪುಟ-೧೩೧ ಕಂಚ್ಯಾಣಿ ಶರಣಪ್ಪ.
೩. ಜಾಗ್ರತ ಭಾರತ : ನೂರೊಂದು ಕವಿತೆಗಳು ಪುಟ-೫೦ ಕಂಚ್ಯಾಣಿ ಶರಣಪ್ಪ.

ಸುಳ್ಳು ಆರೋಪವನ್ನು ಸೃಷ್ಟಿಸಿದ ದುಷ್ಟ ಆಂಗ್ಲರು ಕ್ರಾಂತಿಕಾರಿಗಳಿಗೆ ಶಿಕ್ಷೆವಿಧಿಸಿದ್ದು ವಿಪರ್ಯಾಸ. ಭರತ ಭೂಮಿಯ ಮುಕ್ತಿಗಾಗಿ ಪ್ರಾಣಾರ್ಪಣೆ ಮಾಡಿದ ಭಗತ್‌ಸಿಂಗ ಅಜರಾಮರ ಎಂಬ ಉದ್ಗಾರದಿಂದ ಮಕ್ಕಳಿಗೆ ಪಾಠ ಮಾಡಿದವರು ಕಂಚ್ಯಾಣಿಯವರು.

ಶ್ರಮದ ಬೆವರಿನಲ್ಲಿ ಮೊಳೆತ ಹಸಿರು ಬಣ್ಣವು ।
ತುಂಬಿ ತುಳುಕುತಿರಲಿ ನಾಡ ಸಮೃದ್ಧಿಯು ।
ಹೊಳೆವ ಬಿಳಿಯ ಬಣ್ಣ ನಮ್ಮ ಶುದ್ಧ ಚರಿತವು ।
ಪ್ರಗತಿ ಪಥದಿ ಸಾಗುತಿರಲಿ ಶಾಂತಿ ಚಕ್ರವು ।
ಮೇಲು ಪಂಕ್ತಿಯಾಗಿ ನಮ್ಮ ತ್ಯಾಗದೈಸಿರಿ ।
ಒಳಗು ಹೊರಗು ಬೆಳಗುತಿರಲಿ ಬಣ್ಣ ಕೇಸರಿ ॥ ೧

ಭಾರತ ಸುಖ-ಸಮೃದ್ಧಿಯ ದೇಶ ಈ ದೇಶದ ಚರಿತವನ್ನು ತ್ರಿವರ್ಣಧ್ವಜವು ಸಾರಿ ಹೇಳುತ್ತದೆ ಶಾಂತಿ-ಸಮೃದ್ಧಿ ತ್ಯಾಗಗಳ ದ್ಯೋತಕವಾಗಿ ಮೂರು ಬಣ್ಣಗಳು. ಐಕ್ಯತೆಯ ಸಂಕೇತವೇ ಧ್ವಜ ಕಂಬ ಸ್ನೇಹ-ಸಮಾನತೆಯೇ ಹುರಿಗೊಂಡ ದಾರ ಇವು ಭಾರತೀಯರ ಜೀವನಾದರ್ಶಗಳು ಯುವ ಜನರ ಒಲವಿನಲ್ಲಿ ಬಲಹೊಂದಿ, ಧಮನಿ-ಧಮನಿಗಳಲಿ ಕೆಚ್ಚು ಉಕ್ಕಿ ಹರಿಯಲಿ, ಶಕ್ತಿ-ಯುಕ್ತಿ ಉಸಿರಾಗಿ ಎದೆಯ ತುಂಬಲಿ ಎನ್ನುವ ಕಂಚ್ಯಾಣಿಯವರು ಮಕ್ಕಳಲ್ಲಿ ದೇಶದ ಅಭಿಮಾನ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಅರಿವೆ ಗುರುವು ನಿನ್ನ ಇರುವು
ಜಗಕೆ ಪರಮ ಪಾವನ
ದೇಶವನ್ನು ಕಟ್ಟುತಿರುವ
ಗುರುಕುಲಕ್ಕೆ ಚೇತನ । ೨

ಕಂಚ್ಯಾಣಿಯವರು ಶಿಕ್ಷಕ ವೃತ್ತಿಯನ್ನು ಮನಸಾರೆ ಮೆಚ್ಚಿಕೊಂಡವರು, ಗೌರವಿಸಿದವರು. ಗುರು-ಶಿಶ್ಯರ ಬಾಂಧವ್ಯವನ್ನು ಮನಗಂಡವರು. ಇನ್ನೊಬ್ಬ ಆದರ್ಶವಾದಿಯನ್ನು ಕೊಂಡಾಡಿದವರು. ಇಂದಿನ ಎಳೆಯರನ್ನು ನಾಳಿನ ನಾಡ ಸತ್‌ಪ್ರಜೆಗಳನ್ನು ತಯಾರು ಮಾಡುವ ಶಿಲ್ಪಿಗಳು, ದೂರದೃಷ್ಟಿಯುಳ್ಳ ಮಾನವತಾವಾದಿ, ಶಿಕ್ಷಕ ಸಂಕುಲಕ್ಕೆ ಮುಕುಟ ಪ್ರಾಯವಾದವರು, ರಾಧಾಕೃಷ್ಣನ್‌ರು ಅವರ ದಿವ್ಯ ದೃಷ್ಟಿ ನಿತ್ಯ ಸತ್ಯ ಗುಣಧರ್ಮಗಳು 'ಗುರುಕುಲ' ಸಂತತಿಗೆ ಮಾರ್ಗದರ್ಶಿಯಾದವುಗಳೆಂದು ಹೇಳುವ ಕಂಚ್ಯಾಣಿಯವರು ಸ್ವತಃ ಆ ಮಾರ್ಗವನ್ನು ಅನುಸರಿಸಿದ ಶಿಕ್ಷಣ ಪ್ರೇಮಿ, ಉತ್ತಮ ಶಿಕ್ಷಕರು ಹಾಗೂ ಹಿತ ಚಿಂತಕರು ಭಾರತೀಯ ಸಂಸ್ಕೃತಿಯ ಪ್ರತಿಬಿಂಬವೇ ಶಿಕ್ಷಕ ಸಮೂಹ ಎಂದರೆ ತಪ್ಪಾಗಲಾರದು.

ಹರೆಯ ಉಕ್ಕಿ ಹರಿಯುವಾಗ
ಭೋಗ ಭಾಗ್ಯ ತೊರೆದನು
ರಾಜ್ಯ ಪದವಿ ಮುದ್ದು ಪಡದಿ
ಎಲ್ಲ ಬಿಟ್ಟು ನಡೆದನು ॥ ೩

---

೧. ನಾಡಗುಡಿ : ತಮ್ಮನ ಶಾಲೆ ಪುಟ-೩೬ ಕಂಚ್ಯಾಣಿ ಶರಣಪ್ಪ.

೨. ರಾಧಾಕೃಷ್ಣನ್ : ನೂರೊಂದು ಕವಿತೆಗಳು ಪುಟ-೧೧೯ ಕಂಚ್ಯಾಣಿ ಶರಣಪ್ಪ.

೩. ದಯಾಮೂರ್ತಿ ಬುದ್ಧ : ನೂರೊಂದು ಕವಿತೆಗಳು ಪುಟ-೧೩೪ ಕಂಚ್ಯಾಣಿ ಶರಣಪ್ಪ.

ದರ್ಯಾಮೂರ್ತಿ ಕಂಚ್ಯಾಣಿಯವರ ಶಿಶು ಕವಿತೆಗಳಲ್ಲಿ ವಿಶಿಷ್ಟವಾದುದು. 'ಬುದ್ಧ' ಜಗತ್ತಿಗೆ ಶಾಂತಿಯ ಸಂದೇಶವನ್ನು ನೀಡಿದ ಮಹಾನುಭಾವ. ಜಗತ್ತೆಲ್ಲ ಅಂಧಕಾರದಲ್ಲಿ ಮುಳುಗಿದಾಗ ಇವನಿಗೆ ಎಚ್ಚರವಾಗುವದು. ಘೋರತಪದ ಪರಿಣಾಮ ದಿವ್ಯ ಜ್ಞಾನ ಪಡೆಯುವ ಬುದ್ಧನು ಜಗದ ಜ್ಯೋತಿಯಾದವನು. ಹಿಂಸೆ ಮೂಢನಂಬಿಕೆ ಮತ್ತು ಆಶೆ ಮೂದಲಾದ ಜೀವನ ಮೌಲ್ಯಗಳನ್ನು ಜಗದ ಜೀವಿಗಳಿಗೆ ಕೊಟ್ಟ ಕರುಣಾಮೂರ್ತಿ. ದಯವೇ ಧರ್ಮದ ಮೂಲ ಎಂಬ ಮಂತ್ರವನ್ನು ಸಾರಿದ ಬಸವಣ್ಣನವರಂತೆ. ಕಂಚ್ಯಾಣಿಯವರು ಬದುಕಿನುದ್ದಕ್ಕೂ ಅನುಸರಿಸುತ್ತ ನಡೆದವರು.

ಕಂಚ್ಯಾಣಿ ಶರಣಪ್ಪನವರು ಬುದ್ಧನನ್ನು ಕಣ್ತುಂಬ ಕಟ್ಟುವಂತೆ ಚಿತ್ರಿಸಿ, ಮಕ್ಕಳಲ್ಲಿ ಜೀವನದ ಬಹುಮುಖ ಆದರ್ಶಗಳನ್ನು ಅಳವಡಿಸಿಕೊಳ್ಳಲು ಸಲಹೆ ನೀಡುವ ಸಂಗತಿ ಚೆತೋಹಾರಿಯಾದುದು.

## ❖ ಅನುಭಾವ ಗೀತೆಗಳು :

" ಆನಂದಮಯ ಈ ಜಗ ಹೃದಯ
ಏತಕೆ ಭಯ ಮಾಣೋ
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೋ" ॥ ೧

ಕುವೆಂಪುರವರದು ಆಧ್ಯತ್ಮಿಕ ಜೀವನ. ಗುರು ಕರುಣೆಯ ಮೂಲಕ ಸಾಧನೆ ಮಾಡಿದ ಸಾಧಕರು. 'ಅರಿವಾಸೆ ಬಿಡು ಇರುವಾಸೆ ತೊಡು' ಎಂಬ ಕವಿವಾಣಿ ಜೀವಂತವಾಗಿ ತೋರುತ್ತದೆ.

"ಈ ಲೋಕವೆಲ್ಲ ಸುಂದರ ಕಾರಣ ತಾನು ದೇವರ ಅತಿಥಿ. ಈ ಲೋಕದ ಯಾವುದು ತನಗೆ ಅಡೆತಡೆಯಾಗದು. ಕಾರಣ ತಾನಿಲ್ಲಿ ಆಗಂತುಕನಷ್ಟೆ. ಈ ಮನಸಿದ್ಧಿಯು ಕವಿಗೆ ಲೋಕ ಬಂಧನವಲ್ಲ, ರಸಸ್ಪಂದನವಗುತ್ತದೆ. ಲೋಕವಿಮೂಖತೆಯಿಂದ ಕವಿಗೆ ರಸಾನುಭವವಾಗದು. ಸೃಷ್ಟಿಯ ಎಲ್ಲ ಸಮಸ್ಯಗಳಿಗೆ ಸೌಂದರ್ಯ-ರಸ-ಆನಂದ ಉತ್ತರವಾಗಿ ಬರುತ್ತದೆ." ೨

ಕಂಚ್ಯಾಣಿಯವರು ಈ ಮೇಲಿನ ಸಾಲುಗಳಿಂದ ಹೊರತಾಗಿಲ್ಲ ಡಿ.ವಿ.ಜಿ. ಪ್ರ.ತಿ.ನ. ಕುವೆಂಪು, ಬೇಂದ್ರೆ ಮದುರಚೆನ್ನ, ಶಿವರುದ್ರಪ್ಪ ಕಣವಿ ಮೊದಲಾದ ಅನುಭಾವಿ ಕವಿಗಳ ಸಾಲಿನಲ್ಲಿ ನಿಲ್ಲುವ ವ್ಯಕ್ತಿತ್ವ ಕಂಚ್ಯಾಣಿಯವರದು. ಮಕ್ಕಳ ಮನಮುಟ್ಟುವ ಕವಿತೆಯ ರಚನೆಯೊಂದಿಗೆ ಅನುಭಾವ ದರ್ಶನ ಮಾಡುವದು ಕಷ್ಟದ ಕೆಲಸ ಅರವಿಂದರ, ಸ್ವಾಮಿ ಶಿವಾನಂದರ ಅನುಭಾವ ದರ್ಶನ ಪ್ರತಿಮಾ ರೂಪದ ಕಾವ್ಯಕ್ಕೆ ಅನುಭಾವದ ಲೇಪನ ಮಾಡುವದು ಸರಳವಲ್ಲ. ಇದು ಕಂಚ್ಯಾಣಿಯವರ ಶಿಶು ಕವಿತೆಗಳಲ್ಲಿ ಅಲ್ಲಲ್ಲಿ ದರ್ಶನವಾಗುತ್ತದೆ.

---

೧. ಆನಂದಮಯ ಈ ಜಗ ಹೃದಯ : ಪಕ್ಷಿಕಾಶಿ – ಕುವೆಂಪು.

೨. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು : ಬೆಂ.ವಿ.ವಿ. ೧೯೮೧ ಪುಟ ೩೯ ಸುಜನಾ.

ಜಡವನು ಜಾಡಿಸಿ
ಚೇತನ ಚಿಮುಕಿಸಿ
ಕುಲುಕುಲು ನಗುತಿಹನು । ೧

ಜಗತ್ತಿಗೆ ಬೆಳಕನು ನೀಡುವ ಸೂರ್ಯನು ಚೈತನ್ಯ ಸ್ವರೂಪಿ. ಜಡ ಭಾವದ ಜಗತ್ತಿಗೆ ಅರಿವನ್ನು ನೀಡುವ ಕಾಯಕ ಸೂರ್ಯನದು. ಬೆಳಗಿನ ಜಾವದಲ್ಲಿ ಚುಮುಚುಮು ಬೆಳಕನು ಚೆಲ್ಲಿ ಕುಲು ಕುಲು ನಗುತಿರುವದು, ಮೂಡಲ ಮನೆಯಿಂದ ಮೆಲ್ಲನೆ ಮೇಲಕೇರುವ ಸೂರ್ಯನ ಬೆಳಕಿಗೆ ಅರಳುವ ಹೂವುಗಳು ಸೃಷ್ಠಿಯ ಸೊಬಗು ಬೆಳಗಿನ ವರ್ಣನೆ ಮಾಡುವ ಕಂಚ್ಯಾಣಿಯವರು ಕಾಡಿಗೆ-ಬೀಡಿಗೆ, ಗುಡಿಸಲು-ಮಹಡಿಗೆ ಬೆಳಕನು ಬೀರುವ ಚೈತನ್ಯ ಸ್ವರೂಪಿಯಿಂದ ಆಕಾಶವೆಲ್ಲ ಚಿನ್ನದ ಲೇಪನದ ಹೊಂಬಣ್ಣದಂತೆ ಕಾಣುವ ಸ್ವರೂಪ ವಿಸ್ಮಯ. ಬದುಕಿನಲ್ಲಿ ಅಂಧಕಾರದ ಕತ್ತಲೆಯಲ್ಲಿ ಮುಳುಗಿದವರಿಗೆ ಇದು ಕಂಚ್ಯಾಣಿಯವರ ಸಂದೇಶ.

ಬಾಳಿನಲ್ಲಿ ಶುಭದ ಗಳಿಗೆ
ಒಮ್ಮೆ ಬರುವುದು
ಬಂದು ಸರಿದು ಹೋದ ಮೇಲೆ
ಮರಳಿ ಬಾರದು ॥ ೨

ಹೊತ್ತು ಹೋದರೆ ಬಾರದು ಮುತ್ತು ಒಡೆದರೆ ಮತ್ತೆ ಬಾರದು ಎನ್ನುವ ಗಾದೆ ಬದುಕಿಗೆ ಪೂರಕ. ಕಂಚ್ಯಾಣಿಯವರ ಕವಿತೆಯಲ್ಲಿ ಇದು ಸಾರ್ಥಕವಾಗಿದೆ. ತಿರುಕನು ಕನಸಲ್ಲಿ ರಾಜನಾಗಿ ಮೆರೆಯುತ್ತಿದ್ದು, ವೈರಿ ಬಂದು ಅವನ ಮುತ್ತಿಕೊಳ್ಳಲು ಪ್ರಾಣ ಭಯದಿಂದ ಎಚ್ಚರಾಗಿ ಕನಸು ಒಡೆದು ಹೋಗುವದು ಮತ್ತೆ ಕನಸು ಕಾಣಲೆತ್ನಿಸುವ ತಿರುಕ ವ್ಯರ್ಥ ಪ್ರಯತ್ನ ಮಾಡುವನು.

ತಾತ್ವಿಕವಾಗಿ ಕಂಚ್ಯಾಣಿಯವರು ಅನುಭಾವದ ಮೂಸೆಯಲ್ಲಿ ಕವಿತೆ ಹೊಸೆದದ್ದು ಮಾರ್ಮಿಕ. ಬದುಕಿನಲ್ಲಿ ಸಂತಸದ-ಶುಭ ಸಮಯ ಒಂದೇ ಸಲ ಬರುವದು ಮರಳಿ ಬರದು ಎಂಬ ಸತ್ಯ ವ್ಯಕ್ತ ಪಡಿಸಿದ್ದಾರೆ.

ಬೆಳದಿಂಗಳ ಸಿರಿಯು
ಕರಗಿಹುದು ನೋಡ ।
ಇದ್ದಾಗ ಬಂಧುಗಳು
ಬಂದು ಮುಕುರುವರು ।
ಬಡತನವು ಬಂದಾಗ
ದೂರ ಸರಿಯುವರು ॥ ೩

ಕಂಚ್ಯಾಣಿಯವರ ಕವಿತೆಗಳು ಅನುಭಾವಕ್ಕೆ ನಿದರ್ಶನವಾಗಿವೆ ಎಂಬುದು ಇಂಗಿತ.

---

೧. ಬಣ್ಣದ ಬೆಳಗು : ತೊಟ್ಟಿಲು ಗುಬ್ಬಿ ಪುಟ-೧೧ ಕಂಚ್ಯಾಣಿ ಶರಣಪ್ಪ.
೨. ಕನಸು : ತಮ್ಮನ ಶಾಲೆ ಪುಟ-೨೯ ಕಂಚ್ಯಾಣ ಶರಣಪ್ಪ.
೩. ಹಗಲಿನ ಚಂದಿರ : ಬೆದರು ಬೆಚ್ಚ ಪುಟ-೧೧ ಕಂಚ್ಯಾಣಿ ಶರಣಪ್ಪ.

ಮಕ್ಕಳ ಮನಸಿನ ಕಂಚ್ಯಾಣಿಯವರು, ಮಗುವಿನ ಪ್ರಶ್ನೆಯನು ಚಿತ್ರಿಸುತ್ತ ಚಂದಿರನನ್ನು ಕಳೆಗೆಟ್ಟ ಮುಖದವನು, ಮನೆಯಿಂದ ಹೊರಗೆ ಹಾಕಿಸಿಕೊಂಡವನು, ಹಗಲಿನಲ್ಲಿ ಎತ್ತ ಹೊರಟಿಹನು ಎಂಬಲ್ಲಿ ಮಗುವಿನ ಮುಗ್ಧತೆಯನ್ನು ಕಂಡರೆ, "ಸಿರಿ-ಸಂಪತ್ತು ಇದ್ದಾಗ ಎಲ್ಲ ಬಂಧುಗಳು, ಬಡತನ ಬಂದಾಗ ದೂರ ಸರಿಯುವರು" ಎನ್ನುವಲ್ಲಿ ಬೆಳದಿಂಗಳು ಚಂದಿರನಂತೆ ಕ್ಷಣಿಕವಾದುದೆಂದು ಕಂಚ್ಯಾಣಿಯವರು ಸಮಯವನ್ನು ಚಿತ್ರಿಸಿದ್ದಾರೆ.

ಕಂಚ್ಯಾಣಿಯವರ ಸಾಹಿತ್ಯ ನೀರಿನಂತೆ ಪರಿಶುದ್ಧವಾದುದು. ಸಮುದ್ರದ ಅಲೆಗಳಂತೆ ಸಾಗುವ ಕವಿತೆಗಳು ಮಕ್ಕಳಿಗೆ ಮುದ ನೀಡುವಂಥವು ಅನುಭಾವದ ಹೊಳೆಯಲ್ಲಿ ತೇಲುವ ಮನಸುಗಳಿಗೆ ನೆಮ್ಮದಿಯನ್ನು ನೀಡುವ ಸರಳ ವಿಧಾನದ ನುಡಿಗಳಾಗಿವೆ.

## ❖ ನೀತಿಯ ಕವಿತೆಗಳು

ಕಂಚ್ಯಾಣಿಯವರ ಸಾಹಿತ್ಯವೂ ಕೂಡ "ನೀರಿನಂತೆ ನಿರ್ಮಲ ಪ್ರವಹನಶೀಲ ಅದು ಆಶಯಕ್ಕೆ ತಕ್ಕ ಆಕೃತಿ ಪಡೆಯುತ್ತದೆ. ಸರಳ ವ್ಯಕ್ತಿತ್ವದ ಗಾಢ ಪ್ರಭಾವದಂತೆ ಅವರ ಸರಳ ಶೈಲಿ ಗಾಢವೆಂದರೂ ಜಟಿಲವಲ್ಲ ಅಲ್ಲಿ ವಚನ ಸಾಹಿತ್ಯದ, ಗಾಂಧಿ ಸಾಹಿತ್ಯದ ಸಾತ್ವಿಕ ಶೈಲಿ ತುಂಬಿಕೊಂಡಿದೆ ಅದು ಸಂಶೋಧನ ಸಾಹಿತ್ಯಕ್ಕೂ ಶ್ರಮಿಸಬಲ್ಲುದು, ವಿಚಾರ ಸಾಹಿತ್ಯಕ್ಕೂ ದುಡಿಯಬಲ್ಲದು ಮಕ್ಕಳ ಸಾಹಿತ್ಯಕ್ಕೂ ಮಣಿಯಬಲ್ಲುದು"॥೧ ಇಂತಹ ವಿಶೇಷವಾದ ಲಕ್ಷಣಗಳಿಂದ ಕೂಡಿದ ಕಂಚ್ಯಾಣಿಯವರ ಶಿಶು ಕವಿತೆಗಳು ಕಿರಿಯರನ್ನು, ಹಿರಿಯರನ್ನು ರಂಜಿಸುತ್ತವೆ, ಮನಸೆಳೆಯುತ್ತವೆ.

ಪ್ರಪಂಚದ ಅನೇಕ ರಾಷ್ಟ್ರಗಳಿಗಿಂತ ಭಾರತವು ವಿಶೇಷವಾದ ಪ್ರಾಕೃತಿಕ ಸುಖ ಸೌಲಭ್ಯ, ಸಂಪತ್ತು, ಹವಾಮಾನದ ಏರಿಳಿತಗಳನ್ನು ಪಡೆದಿದೆ. ಇಲ್ಲಿಯ ಜನರು ಧಾರ್ಮಿಕ ಸಾಮಾಜಕ ನೈತಿಕ ಮತ್ತು ಸಂಸ್ಕೃತಿಕ ವಿಷಯಗಳಲ್ಲಿ ವೈಶಿಷ್ಟ್ಯವುಳ್ಳರಾಗಿದ್ದಾರೆ. ವಿಭಿನ್ನ ಕಾರ್ಯಕಗಳಿಂದ ವೈವಿಧ್ಯಮಯ ಜನಸಂಸ್ಕೃತಿಯಿಂದ ಇದು ವೈವಿಧ್ಯಪೂರ್ಣ ದೇಶವಾಗಿದೆ. ವಿವಿಧತೆಯಲ್ಲಿ ಏಕತೆ ಸಾಧಿಸಿದೆ ಬಹುಶಃ ಜಗತ್ತಿನಲ್ಲಿಯ ಯಾವ ದೇಶದಲ್ಲಿ ಇರದಷ್ಟು ವಿಶೇಷತೆಗಳು ಇಲ್ಲಿವೆ. ಸಾಮಾಜಿಕ ಮತ್ತು ನೈತಿಕವಾದ ಹಲವಾರು ವೈಶಿಷ್ಟ್ಯತೆಗಳು ಕಂಚ್ಯಾಣಿಯವರ ಕವಿತೆಗಳಲ್ಲಿ ಹಾಸು ಹೊಕ್ಕಾಗಿವೆ.

ಬಡವನಾದರೇನು ಮಾದ
ಆಶೆ ಮೋಸವರಿಯನು
ಕನಸಿನಲ್ಲೂ ಸುಳ್ಳು ಹೇಳ
ದಂತ ಸತ್ಯವಂತನು । ೨

ಕಾಯಕದಲ್ಲಿ ನಿರತನಾದರೆ ಗುರುವಾದರೂ ಮರೆಯಬೇಕು. ನಿಷ್ಠೆಯಿಂದ ದುಡಿಯುವ ಮಾದ ಇದ್ದುದರಲ್ಲಿಯೇ ಸಂತಸ ಪಡುವನು. ತನ್ನದಲ್ಲದ ವಸ್ತುವಿಗೆ ಆಶೆಯನ್ನು ಮಾಡದವನು. ಕೊಡಲಿ ಜಾರಿ ಬಾವಿಯಲ್ಲಿ ಬಿದ್ದಾಗ ಪರೀಕ್ಷೆಗೋಸ್ಕರ ದೇವ ಬೆಳ್ಳಿಯ-ಚಿನ್ನದ ಕೊಡಲಿಯನ್ನು ಕೊಟ್ಟರೂ ತೆಗೆದುಕೊಳ್ಳದ ತನ್ನ ಕಬ್ಬಿಣ ಕೊಡಲಿಯನ್ನು ತೆಗೆದುಕೊಳ್ಳುವ ಮಾದ ಆಶೆ-ಮೋಸದ ಭಾವದವನಲ್ಲ ಎಂಬ ಸತ್ಯದ ಅರಿಕೆ ಮಾಡುವದು ಕಂಚ್ಯಾಣಿಯವರ ವೈಶಿಷ್ಟ್ಯ.

---

೧. ಕರ್ನಾಟಕ ಗಾಂಧಿ : ಡಾ ಮಲ್ಲಿಕಾರ್ಜುನ ಮೇತ್ರಿ ಪುಟ-೫೮

೨. ಸತ್ಯಸಂದ ಮಾದ : ನೂರೊಂದು ಕವಿತೆಗಳು ಪುಟ-೭೬ ಕಂಚ್ಯಾಣಿ ಶರಣಪ್ಪ

ಆಶೆಬುರುಕ ಈರ ತನ್ನ
ದೆಂದು ಕೈಯ ಚಾಚಿದ
ಕೊಡಲಿಯನ್ನು ಕೊಡದೆ ದೇವ
ಸಿಟ್ಟುಗೊಂಡು ಹೇಳಿದ
"ಈರ ನೀನು ಮೋಸಗಾರ". ೧

ದೇವನಿಂದ ದೂಷಿಸಿಕೊಂಡ ಈರ ಪಶ್ಚಾತಾಪಪಟ್ಟುಕೊಳ್ಳುವದು ಸುಳ್ಳಿನಿಂದ, ಅತೀ ಆಶೆಯಿಂದ ಎನ್ನುವ ಸಂಗತಿ ಮಕ್ಕಳಿಗೆ ಪರಿಣಾಮಕಾರಿಯಾಗಿ ಪ್ರಭಾವ ಬೀರುವ ಕಥನ ಕವನವಾಗಿದೆ. ಸತ್ಯ-ಸುಳ್ಳುಗಳಿಗೆ ಮಾದ ಮತ್ತು ಈರ ಸ್ಪಷ್ಟ ಉದಾಹರಣೆಗಳು. ಮಕ್ಕಳು ಆದರ್ಶದ ಬದುಕು ಕಲಿತುಕೊಳ್ಳುವಲ್ಲಿ ನಿದರ್ಶನವಾಗಿದೆ.

ಕಂಚ್ಯಾಣಿಯವರ ಹೆಚ್ಚಿನ ಕವಿತೆಗಳು ನೀತಿಯ ನೆಲೆಯಲ್ಲಿ ನಿಲ್ಲುತ್ತವೆ. ಉಪದೇಶದ ಮಾದರಿಯಲ್ಲಿ ಸಾಗುತ್ತವೆ.

'ಸೊಕ್ಕಿನ ನರಿ ತಾ ಬಿಂಕದಿ ಕೇಳಿತು'
ಭೂಮಿಯೆ ! ಹಣ್ಣಿನ ಬೆಲೆಯೇನೆ ?
ಆ ನರಿ ಸೊಕ್ಕನು ಮುರಿಯಲುಭೂಮಿಯು
ಆಗಳೆ ಹೇಳಿತು ಒಂದಾಣೆ। ೨

ಠಕ್ಕ ಸ್ವಭಾವದ ನರಿ ಮೋಸದಿಂದ ಮರುಳ ಮಾಡಿ-ಬೇಟೆಯಾಡಿ ಕಾಡಿನಲ್ಲಿ ಕೊಟ್ಟಿನಿಂದ ತಿರುಗುತ್ತಿತ್ತು. ಕಾಡಿನಲ್ಲಿ ಮೆಕ್ಕೆಯ ಹಣ್ಣನ್ನು ನೋಡಿ ತಿನ್ನುದ ಆಶೆಯಿಂದ ಜೊಲ್ಲು ಸುರಿಸಿ ಬಿಂಕದಿಂದ ಭೂಮಿಯನ್ನು ಕೇಳುವ ನರಿಯ ಪರಿ, ಹಣ್ಣಿನ ಬೆಲೆಯೇನು? ಅದಕ್ಕೆ ಭೂತಾಯಿಯ ಉತ್ತರ 'ಒಂದಾಣಿ' ಮೋಸದಿಂದ ಹೊಂಚು ಹಾಕಿ, ಕಣ್ಣು ತಪ್ಪಿಸಿ ತಿರುಗುವ ಆಲೋಚನೆಯಿಂದ ಹಣ್ಣು ತಿಂದಿತು ನರಿಯ ಹೆಜ್ಜೆ ಭೂಮಿ ಮೇಲೆ, ಭೂಮಿ ತಾಯಿ ಸರ್ವವ್ಯಾಪಿ ಎಂಬುದನ್ನು ಮರೆತ ನರಿ ಜಂಬದಿಂದ ತಿರುಗುವಾಗ ಭೂಮಿ ಕೇಳಿತು, ಆಣೆ ಎಂದು ಕೊಡುವಿ ಭಯದಿ ನರಿಯು ನಾಚಿ ನಾಳೆಗೆಂದಿತು.

"ನಾಳಿಗೆ ನಾಳಿಗೆ ಅನ್ನುವ ಏಕೆ?
ಆಣೆಯ ಕೊಡಲು ಗತಿ ಇಲ್ಲ ।
ಬಿಂಕದ ಮಾತು ಆಡಿದೆ ಏಕೆ ?
ಸುಳ್ಳಿನ ಜೀವಕೆ ಸುಖವಿಲ್ಲ" । ೩

ಅಹಂಕಾರದಿಂದ ಸೊಕ್ಕಿ ಮೆರೆಯುವ ನರಿ ಆಣೆ ಕೊಡಲು ಗತಿಯಿಲ್ಲದೆ ಮುಖ ಮರೆಮಾಚಿ ತಿರುಗಿದರೂ ಸಾಧ್ಯವಾಗದೆ ಕೆಟ್ಟೆನು ಎನುತ ನಾಚಿ ತಲೆಯ ತಗ್ಗಿಸಿ, ಭೂಮಿಯ ಮಹಿಮೆ ಅರಿಯದೆ ಕ್ಷಮೆಯನ್ನು ಬೇಡಿತು. ಇಂಥ ಗರುವದ, ಅಹಂಕಾರದ ಸೊಕ್ಕಿನ ನುಡಿಯಿಂದ ಯಾವುದು ಪ್ರಯೋಜನವಿಲ್ಲ ಎನ್ನುವದನ್ನು ಕಂಚ್ಯಾಣಿಯವರು ಮಕ್ಕಳಿಗೆ ಸಂದೇಶ ನೀಡುತ್ತಾರೆ.

---

೧. ಸತ್ಯಸಂದ ಮಾದ : ನೂರೊಂದು ಕವಿತೆಗಳು ಪುಟ-೭೭ ಕಂಚ್ಯಾಣಿ ಶರಣಪ್ಪ.
೨. ನರಿಯ ಗರುವ ಭಂಗ : ತಮ್ಮನ ಶಾಲೆ ಪುಟ-೨೧ ಕಂಚ್ಯಾಣಿ ಶರಣಪ್ಪ.
೩. ನರಿಯ ಗರುವ ಭಂಗ : ತಮ್ಮನ ಶಾಲೆ ಪುಟ-೨೨ ಕಂಚ್ಯಾಣಿ ಶರಣಪ್ಪ.

ಮಕ್ಕಳ ಸಾಹಿತ್ಯದಲ್ಲಿ ಕಥನ ಕವನಗಳು ಮಹತ್ವಪೂರ್ಣ ಸ್ಥಾನವಹಿಸುತ್ತವೆ. ಮಕ್ಕಳ ಮನಸ್ಸಿಗೆ ಮುಟ್ಟುವಂತೆ ಆದರ್ಶರಾಗಿ ಬದುಕಿದ ನಾಯಕ ಇರಬಹುದು ಇಲ್ಲವೆ ಸಂಗತಿಯನ್ನು ಕಥನ ಕವನದಲ್ಲಿ ಹೆಳುವದು ಮುಖ್ಯ.

ಮಕ್ಕಳಿಗೆ ಕಥೆ ಹೇಳುತ್ತಿದ್ದೇವೆ ಎನ್ನುವ ಪರಿಕಲ್ಪನೆ ಬರುವಂತೆಯೇ ಚರಿತೆಯ, ಸಾಧನೆ, ಕಾರ್ಯ ವಿಶೇಷ ನೀತಿಬೋಧೆ ಮುಂತಾದವುಗಳನ್ನು ತಿಳಿಸಬೇಕು "ಮಕ್ಕಳ ಮನಸ್ಸು ಪಾದರಸದಂತೆ ಹರಿದಾಡುತ್ತಿರುವ ಭಾವನೆಗಳ ಒಂದು ಸಾಮ್ರಾಜ್ಯ ಹೊಸ ಭಾವನೆಗಳು ಕಲ್ಪಿತವಾದಂತೆ ಅವುಗಳ ಚಟುವಟಿಕೆಯ ಕಾರ್ಯಕ್ರಮವು ನಿರ್ಧಾರವಾಗುವದು. ಆಶೆಗಳು ಕೊನೆ ಮೊದಲಿಲ್ಲದ ರೀತಿಯಲ್ಲಿರುವವು,"॥೧ ಅದಕ್ಕಾಗಿ ಮಕ್ಕಳ ಮನಸ್ಸರಿಯದವ ಮಕ್ಕಳ ಸಾಹಿತ್ಯ ಸೃಷ್ಟಿಗೆ ಕೈ ಹಾಕಕೂಡದು ಎನ್ನುವ ಕಂಚ್ಯಾಣಿಯವರು ತಮ್ಮ ವೃತ್ತಿ ಜೀವನದಲ್ಲಿ ಅದನ್ನು ಕರಗತ ಮಾಡಿಕೊಂಡವರು.

'ಕುಂಟನನ್ನು ಕುರುಡ ಹೆಗಲ ಮೇಲೆ ಹೊತ್ತು ನಡೆದನು ।
ಮೇಲೆ ಕುಳಿತ ಕುಂಟ ಅವಗೆ ಹಾದಿ ಹೇಳುತ್ತಿದ್ದನು ।
ಕುಂಟ ಆಗ ಕಣ್ಣು ಆದ ದಾರಿ ತೋರಿ ಕುರುಡಗೆ ।
ಕುರುಡ ತಾನೆ ಕಾಲು ಆದ ಮೇಲೆ ಕುಳಿತ ಕುಂಟಗೆ ॥ ೨

ಕಂಚ್ಯಾಣಿಯವರು ಮಕ್ಕಳಿಗೆ ನೀತಿಯ ಕಥೆಗಳನ್ನು ಕಥನ ಕವನಗಳಾಗಿ ಹೇಳುವ ಧಾಟಿ ಅದ್ಭುತ ಕುಂಟ-ಕುರುಡರ ಸನ್ನಿವೇಶವನ್ನು ಕವಿತೆಯಾಗಿ ಮಾರ್ಪಡಿಸಿದ್ದು ಅವರ ಕಾವ್ಯ ಶೈಲಿಗೆ ನಿದರ್ಶನ. ಬದುಕಿನ ಹಾದಿಯನ್ನು ಸವೆಸಲು ಯುಕ್ತಿ ಅವಶ್ಯಕ ಎನ್ನುವದನ್ನು ನದಿ ದಾಟುವ ಕುಂಟ-ಕುರುಡರ ಕವಿತೆ ವಿಸ್ಮಕಾರಿ ಮಕ್ಕಳ ಮನಸ್ಸಿಗೆ ಬಲು ಸೊಗಸು.

'ತೊಟ್ಟ ಅಂಗಿ ತಿರುವು ಮುರುವು
ಅಡ್ಡ ತಿಡ್ಡ ಟೊಪ್ಪಿಗೆ
ತಪ್ಪ ತನ್ನ ತಪ್ಪು ತಿಳಿದು
ನಿಂತುಕೊಂಡ ತೆಪ್ಪಗೆ । ೩

ಎಲ್ಲ ಬಲ್ಲೆನೆಂಬ ಜಂಬದಿಂದ ರವಿಯು ಕಾಣದ್ದನ್ನು ಕವಿ ಕಾಣುವನು, ರವಿಯು ಕವಿಯು ಕಾಣದ್ದನ್ನು ತಾನೆ ಕಾಣುವೆನೆನ್ನುವ ತಿಪ್ಪ ಕಾವ್ಯಗೋಷ್ಠಿಯಲ್ಲಿ ಬೆಪ್ಪನಾಗಿ ನಿಲ್ಲುವ ಪ್ರಸಂಗ ಮಕ್ಕಳ ಮನಸ್ಸನ್ನು ತಟ್ಟುತ್ತದೆ "ತುಂಬಿದ ಕೊಡ ತುಳುಕುವದಿಲ್ಲ" ಎಂಬ ಗಾದೆಯಂತೆ ಇರದ ತಿಪ್ಪ ಅಸ್ತ-ವ್ಯಸ್ತತೆಯ ಆಗರ ಅಜ್ಞಾನದ ಕೊಡವಿದ್ದಂತೆ ಡಂಬಾಚಾರಿ ಇಂಥ ಹಲವಾರು ನಿದರ್ಶನಗಳು ಕಂಚ್ಯಾಣಿಯವರ ನೀತಿಯ ಕವಿತೆಗಳು ನಾಡಿನ ಮಕ್ಕಳಿಗೆ ಮಾದರಿಯಾಗಿದೆ.

---

೧. ಎಸ್.ಕೃಷ್ಣಪ್ಪ : ಶಿಕ್ಷಣದ ಸಮಸ್ಯಗಳು ಪುಟ-೧೩೫

೨. ಯುಕುತಿ : ತಮ್ಮನ ಶಾಲೆ ಪುಟ-೨೭ ಕಂಚ್ಯಾಣಿ ಶರಣಪ್ಪ.

೩. ಬೆಪ್ಪ : ತಮ್ಮನ ಶಾಲೆ ಪುಟ-೩೩ ಕಂಚ್ಯಾಣಿ ಶರಣಪ್ಪ.

ಮನುಷ್ಯನ ಬುದ್ಧಿಯ ಬೆಳವಣಿಗೆಗೆ ಉಪದೇಶ ಹಾಗೂ ಬೋಧನೆ ಮೈಲುಗಲ್ಲಾಗಿ ನಿಲ್ಲುತ್ತವೆ. ಮಕ್ಕಳಲ್ಲಿ ಯುವಕರಲ್ಲಿ ಇದನ್ನು ತುಂಬುವದು ಅತ್ಯಂತ ಶ್ರೇಷ್ಠ ಕೆಲಸ. ಮಕ್ಕಳ ಸಾಹಿತ್ಯ ರಂಜನೆ-ವಿನೋದ ನೀಡುವದರ ಜೊತೆಗೆ ಜನಾಂಗ ರೂಪಿಸುವ ಉಪದೇಶ, ಬೋಧನೆಗಳನ್ನು ನೀಡುವಂಥದ್ದು. ಇದು ಕಂಚ್ಯಾಣಿಯವರ ಕವಿತೆಗಳಲ್ಲಿ ಹಚ್ಚು ಹಸರಾಗಿ ಮೂಡಿದೆ.

ಕಂಚ್ಯಾಣಿಯವರು ಮಕ್ಕಳಲ್ಲಿ ಪರಿಸರ ಪ್ರೇಮ ಮತ್ತು ಪ್ರಜ್ಞೆಯನ್ನು ಬೆಳೆಸುವದರೊಂದಿಗೆ ನೀತಿಯ ಮನೋಧರ್ಮವನ್ನು ಬಿತ್ತರಿಸುತ್ತಾರೆ.

"ನಾಡ ಜೀವ ನಾಡಿಯಾದ
ನದಿಗೆ ದ್ರೋಹ ಬಗೆವೆವು
ನಾವು ಕುಳಿತ ಟೊಂಗೆಯನ್ನೆ
ನಾವೆ ಕಡಿಯುತಿರುವೆವು" । ೧

ನಾಡಿನ ಜೀವನಾಡಿ ನದಿಗಳಾದ ಗಂಗೆ, ಯಮುನೆ, ತುಂಗೆ, ಕೃಷ್ಣ, ಕಾವೇರಿಗಳಲ್ಲಿ ದಿನಾಲು ಸಾವಿರಾರು ಶವಗಳ ಬೂದಿ, ಹೆಣಗಳ ರಾಶಿ ತೇಲಿ ಬಿಡುವದು, ನಗರದ ಕೊಳಚೆ, ಹೇಸಿಗೆ ಬಂದು ಸೇರುವದು, ಹಲವು ಬಗೆಯ ರೋಗ-ರುಜಿನಗಳಿಂದ ಕೂಡಿ ನದಿಗಳು ನರಳುವಂತಾಗಿದೆ ನದಿಗಳು ನಿರ್ಮಲವಾಗಿರಲು ಬಿಡದೆ ಹಗಲಿರುಳು ಕಲುಸಿತಗೊಳಿಸುತ್ತಿದ್ದೆ, ಎನ್ನುವ ಕಂಚ್ಯಾಣಿಯವರು ನಮ್ಮ ಬದುಕನ್ನು ನಾವೇ ನಾಶಪಡಿಸಿಕೊಳ್ಳುತ್ತಿದೇವೆ ಎಂದು ನೋವಿನಿಂದ ಹೇಳಿದ್ದರೆ.

ಕಾಗೆಯಂತೆ ಕೂಗಿ ಬಳಗ ಕರೆಯಬೇಕು ।
ಕೋಳಿಯಂತೆ ಕರೆದು ಗುಟುಕು ಇಕ್ಕಬೇಕು ।
ನಂಬಿಗಿಟ್ಟು ನಾಯಿಯಂತೆ ನಡೆಯಬೇಕು ।
ಒಳ್ಳೆತನದಿ ಬಾಳಿ ಜಗದಿ ಬೆಳೆಯಬೇಕು ॥ ೨



ಪ್ರಾಣಿ-ಪಕ್ಷಿಗಳಲ್ಲಿರುವ ಗುಣಗಳು ಮಾನವರಲ್ಲಿ ಇಲ್ಲ ಎಂಬ ಅಳಲು ಕಂಚ್ಯಾಣಿಯವರದು. ಸ್ವಾರ್ಥಿಗಳಿಂದ ತುಂಬಿರುವ ಸಮಾಜವನ್ನು ಕುರಿತು ವಚನಕಾರರು ಪ್ರಾಣಿ-ಪಕ್ಷಿಗಳಿಗಿಂತ ಕರಕಷ್ಟ ಮಾನವನ ಬದುಕು ಎಂದಿದ್ದಾರೆ. ಅದರಂತೆ ಕಂಚ್ಯಾಣಿಯವರು ನಿಸ್ವಾರ್ಥದಿಂದ ಕಾಗೆ, ಕೋಳಿ, ನಾಯಿ, ಕತ್ತೆಯಂಥ ಪ್ರಾಣಿ-ಪಕ್ಷಿಗಳ ಗುಣ-ಲಕ್ಷಣಗಳನ್ನು ಅಳವಡಿಸಿಕೊಂಡು ಬದುಕು ಸಾರ್ಥಕಮಾಡಿಕೊಳ್ಳಬೇಕೆಂದು ಮಕ್ಕಳಿಗೆ ಸಂದೇಶ ನೀಡಿದ್ದಾರೆ, ಆಶಿಸಿದ್ದಾರೆ.

ಕಂಚ್ಯಾಣಿಯವರು ದೇಶದ ಅರ್ಥವ್ಯವಸ್ಥೆಯನ್ನು ಅರಿತವರು ಸರ್ವರೂ ಕೂಡಿ ಚಿಕ್ಕ ಉಳಿಕೆ ಮಾಡಿದರೆ ಸುಂದರ-ಸಮೃದ್ಧಿಯ ಬದುಕು ಸವೆಸಲು ಸಾಧ್ಯವೆಂದು ತಮ್ಮ 'ಉಳಿತಾಯ' ಕವಿತೆಯಲ್ಲಿ ವ್ಯಕ್ತಪಡಿಸುತ್ತಾರೆ. ಹನಿಗೆ ಹನಿಯು ಕೂಡಿ ಹಳ್ಳ ಹರಿಯ ತೊಡಗಿತು ತೆನೆಗೆ ತೆನೆಯು ಕೂಡಿ ದೊಡ್ಡ ರಾಶಿಯಾಯಿತು ಎನ್ನುವ ಕಂಚ್ಯಾಣಿಯವರು ಗಳಿಕೆ, ಬಳಿಕೆ, ಉಳಿಕೆಗಳು ಮೂಲ ಮಂತ್ರಗಳೆಂದು ತಿಳಿದು ಬಾಳಬೇಕೆಂದು ಮಕ್ಕಳಿಗೆ ತಿಳಿಯ ಪಡಿಸುವ ನಿಲುವುಗಳು ಮಾರ್ಗದರ್ಶಕವಾಗಿದೆ.

---

೧. ನರಳುತಿಹವು ನದಿಗಳು : ತಮ್ಮನ ಶಾಲೆ ಪುಟ-೩೯ ಕಂಚ್ಯಾಣಿ ಶರಣಪ್ಪ.
೨. ಕಲಿಯಬೇಕು : ತೊಟ್ಟಿಲು ಗುಬ್ಬಿ ಪುಟ-೭ ಕಂಚ್ಯಾಣಿ ಶರಣಪ್ಪ.

'ಕುಡಿತದ ಕುತ್ತು' ಕವಿತೆಯು ಸಹ ಸಮಾಜಕ್ಕೆ ಹತ್ತಿದ ಪಿಡುಗನ್ನು ಬಿತ್ತರಿಸುತ್ತದೆ. ಮಡದಿ-ಮಕ್ಕಳ ಮೇಲೆ ಪರಿಣಾಮ ಬೀರುವದಲ್ಲದೆ, ತನ್ನ ಆರೋಗ್ಯ ಹಾಳುಮಾಡಿಕೊಂಡು ಸಮಾಜಕ್ಕೆ ಕಂಟಕ ಪ್ರಾಯರಾಗಿ ಕಾಣುವ ಕುಡುಕರು, ಮನೆಯನ್ನು ಮಸಣವಾಗಿಸುವ ದುರಂತವನ್ನು ಕಂಚ್ಯಾಣಿಯವರು ಕಣ್ಣಾರೆ ಕಂಡು ಚಿತ್ರಿಸಿದ್ದು ನೈತಿಕತೆಗೆ ಹಿಡಿದ ಕನ್ನಡಿಯಾಗಿದೆ.

"ನೀನೆನಗಾದರೆ
ನಾ ನಿನಗೆನ್ನುವ
ಮಾತಿನ ಮರ್ಮವನು
ತಿಳಿವುದು ನಡೆವುದು
ರೀತಿಯ ನೀತಿಯ
ಮರೆಯದೆ ನೀನಿನ್ನು" ೧

ಸಮಾಜ ಜೀವಿಯಾದ ಮಾನವನು ಸಹಕಾರ ಮನೋಭಾವದಿಂದ ಬಾಳಲು ಕವಿ ಕಂಚ್ಯಾಣಿಯವರು ಕರೆನೀಡಿದ್ದಾರೆ. ನಾವು ಇನ್ನೊಬ್ಬರಿಗೆ ಸಹಾಯ-ಸಹಕಾರ ಮಾಡಿದರೆ ಅವರಿಂದ ನಮಗೂ ಸಹಾಯವಾಗುವದರಲ್ಲಿ ಸಂದೇಹವೇ ಇಲ್ಲ. ಆದರೆ ಈ ಕವಿತೆಯಲ್ಲಿ ಕುಂಬಳ ಬಳ್ಳಿನೀರು ಹನಿಸೆಂದು ತಿಪ್ಪನಿಗೆ ಕೇಳುವದು ಕಸವನ್ನು ಕೀಳೆಂದು ಸವತೆಯ ಬಳ್ಳಿ ಹೇಳುವದು, ಮಾವಿನ ಮರ-ಪೇರಲ ಮರಗಳು ಬೇಲಿಯನ್ನು ಹಾಕಲು ಕೇಳಿದಾಗ ತಿಪ್ಪ ತಿರಸ್ಕರಿಸಿ ಹೋಗುವನು ತಿರುಗಾಡಿದತಿಪ್ಪ ಹಸಿವಾದಾಗ ಗಿಡ-ಮರ-ಬಳ್ಳಿಗಳಿಗೆ ತಿನ್ನಲು ಬೇಡಿದಾಗ 'ಛೀಛೀ ನಡೆ' ಎಂದಾಗ ಪೆಚ್ಚಾದ ತಿಪ್ಪನ-ಗತಿಯ ದೃಷ್ಟಾಂತವನ್ನು ಅರಿತು ನಡೆಯಲು ಕಂಚ್ಯಾಣಿಯವರು ಮಕ್ಕಳಲ್ಲಿ ನೈತಿಕ ಹೊಣೆಗಾರಿಕೆಯನ್ನು ಹೆಚ್ಚಿಸಲು ಪ್ರೇರಣೆ ನೀಡಿದ್ದಾರೆ.

## ❖ ಸಾಮಾಜಿಕ ಕವಿತೆಗಳು :

"ಸಾಹಿತ್ಯವು ಒಂದು ಕಾಲದ ಸಾಮಾಜಿಕ ಸಂದರ್ಭದಲ್ಲಿ ಸಂಭವಿಸುತ್ತದೆ. ಸಾಹಿತಿಯು ಆ ಸಮಾಜದ ಒಂದು ಅನಿವಾರ್ಯವಾದ ಅಂಗವಾಗಿರುವದರಿಂದ, ಮತ್ತು ತನ್ನ ಸಾಮಾಜಿಕ ಸಂಪರ್ಕ ಮಾಧ್ಯಮವಾದ ಭಾಷೆಯ ಮೂಲಕವೇ ತನ್ನ ಸಮಾಜದೊಂದಿಗೆ ಕೃತಿ ಮುಖೇನ ವ್ಯವಹರಿಸುತ್ತಾನೆ"॥೨ ಎಂಬ ಅಭಿಪ್ರಾಯಕ್ಕೆ ಅನುಸಾರವಾಗಿ ಸಾಹಿತ್ಯ ಹಾಗೂ ಸಮಾಜಗಳ ಸಂಬಂಧ ತೀವ್ರ ಸಂವೇದನಶೀಲವಾದುದೆಂದು ಕಂಡುಬರುತ್ತದೆ. ಇದಕ್ಕನುಗುಣವಾಗಿ ಕಂಚ್ಯಾಣಿಯವರು ಸಮಕಾಲೀನ ಸಮಾಜವನ್ನು ಸ್ಪಂದಿಸಿ ಅಲ್ಲಿರುವ ಆಗು-ಹೋಗುಗಳು, ಲೋಪ-ದೋಷಗಳು, ಹಿರಿಮೆ-ಗರಿಮೆ, ಧಾರ್ಮಿಕ ವಿಚಾರ ಮುಂತಾದವುಗಳನ್ನು ತಿಳಿದುಕೊಂಡು ಸಾಮಾಜಿಕ ಬದ್ಧತೆಯನ್ನು ತೋರಿಸುವ ಸಾಹಿತ್ಯ ಸೃಷ್ಟಿಸಿದರು.

---

೧. ನೀನೆಗಾದರೆ ನಾ ನಿನಗೆ : ತಮ್ಮನ ಶಾಲೆ ಪುಟ-೧೬ ಕಂಚ್ಯಾಣಿ ಶರಣಪ್ಪ.
೨. ಸಂ.ಜಿ.ಎಸ್. ಶಿವರುದ್ರಪ್ಪ : ಸಾಹಿತ್ಯ ಮತ್ತು ಸಾಮಾಜಿಕ ಪ್ರಜ್ಞೆ ಪುಟ ೧೦೬

"ಹಳೆಯದರಲ್ಲಿಯೆ ಹೊಸತನ ತೋರುವ
ಕೌದಿಯ ಕಲೆಯನು ಮೆಚ್ಚುವರು
ಕಸದಲಿ ರಸವನು ತೆಗೆಯುವ ಅಜ್ಜಿಯ
ಬಿಜ್ಜೆಗೆ ತಲೆಯನು ತೂಗುವರು" । ೧

ಕಂಚ್ಯಾಣಿಯವರು ಮಕ್ಕಳಿಗಾಗಿ ಮಾತ್ರ ಕವಿತೆ ರಚಿಸಲಿಲ್ಲ ಸಾಮಾಜಿಕ ದೃಷ್ಟಿಕೋನವಿಟ್ಟುಕೊಂಡು ಕವಿತೆಗಳನ್ನು ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸಾಮಾಜದ ಆಗು-ಹೋಗುಗಳನ್ನು, ಕಾರ್ಯವಿಧಾನಗಳನ್ನು ಕಂಡು ಅನುಭವಿಸಿದೆ. ಕಂಚ್ಯಾಣಿಯವರು ನಮ್ಮ ಹಳ್ಳಿಯ ಸಂಸ್ಕೃತಿಯನ್ನು ಚಿತ್ರಿಸುತ್ತಾರೆ. ಹಳ್ಳೀಯಲ್ಲಿ ಹುಟ್ಟ ಬೆಳೆದ ಕವಿ ಕೌದಿಯ ಕಲೆಯನ್ನು ಮೆಚ್ಚಿಕೊಂಡವರು. ಕೌದಿ ಹೊಲಿಯುವ ಅಜ್ಜಿ, ಸಂದಿ-ಗೊಂದಿಯ ಚಿಂದಿಯಿಂದ, ಬಾಲೆಗೆ ಚಾರದ ಅರಿವೆಯಿಂದ ಚಂದದ ಚಿತ್ತಾರವಾಗಿ ಹೊಲಿಯುವ ಕೌದಿ ಹೆಣ್ಣು ಮಕ್ಕಳ ಕಲಾಕೌಶಲ್ಯವನ್ನು ಎತ್ತಿ ತೋರುವ ಕಂಚ್ಯಾಣಿಯವರು ಜೀವನ ಪರಂಪರೆಯನ್ನು ನೆನಪಿಸುತ್ತಾರೆ.

'ಹರಿದಂಥ ಸಾಣಿಗೆ ಮುರಿದಂಥ ಛತ್ತರಿ
ಜೋಗೇರು ಸರಿ ಪಡಿಸಿ ಕೊಟ್ಟಾರ
ಹಳೆಯ ಡಬ್ಬಿಯ ಮುರಿದು ಹೊಸದಾಗಿ ಮಾಡ್ಯಾರ
ಕಸದಲ್ಲಿ ರಸವನ್ನು ತೆಗೆದಾರ' । ೨

ಗ್ರಾಮೀಣ ಸಂಸ್ಕೃತಿಯಲ್ಲಿ ಕಂಡುಬರುವ ವೈವಿಧ್ಯಮಯ ಮುಖಗಳನ್ನು ಕಂಚ್ಯಾಣಿಯವರು ನೋಡಿ ನಲಿದವರು, ಹಾಡಿ ಆಡಿದವರು. ಇವರದು ಸಮಾಜಮುಖಿ ಬದುಕು. ಅಲೆಮಾರಿ ಜನಾಂಗವಾದ ಜೋಗೇರು ವ್ಯಾಪಾರಕ್ಕೆ ಊರೂರು ತಿರುಗುತ್ತ ಕರಿಮಣಿ ಕಲ್ಮುತ್ತು, ಕನ್ನಡಿ-ಕೈಕಟ್ಟು, ಚಂಡು, ಗೋಲಿಗುಂಡು, ಗಿಲಿಗಿಂಚಿ, ಉಂಗುರು, ಮುತ್ತಿನ ಸರ, ಚಿಮಣಿ, ಲಾಳಿಕೆ, ಪಿನ್ನು, ಡಬ್ಬಣ, ಸೂಜಿ ಹಲವಾರು ವಸ್ತುಗಳನ್ನು ಮಾರುತ್ತ ಸಾಗುವರು. ಮಕ್ಕಳು-ಮಹಿಳೆಯರು ಇವರನ್ನು ಹಿಂಬಾಲಿಸಿ ಮುತ್ತುಕೊಳ್ಳುವ ದೃಶ್ಯ ಮನಮೋಹಕವಾದುದು.

'ಉಪವಾಸ ವನವಾಸ ಅಜ್ಞಾತವಾಸವನು
ದೀರತನದಲಿ ಕಾದಿ ಗೆದ್ದಾರ
ನ್ಯಾಯ ತಕ್ಕಡಿಯಲ್ಲಿ ತೂಗಿ ಬಂದಾರಿವರು
ದೇವ ಮಾನವರಾಗಿ ನಿಂದಾರ.' । ೩

ಮಕ್ಕಳಲ್ಲಿ ಪೌರಾಣಿಕ ಕಥಗಳನ್ನು ಕಲ್ಪನೆ ಮಾಡಿಕೊಡುವ ಕೆಲಸವನ್ನು ಶಿಶು ಕವಿ ಕಂಚ್ಯಾಣಿಯವರ ಈ ಮೇಲಿನ ಸಾಲುಗಳಲ್ಲಿ ಕಂಡುಬರುತ್ತದೆ.

---

೧. ಕೌದಿ : ನೂರೊಂದು ಕವಿತೆಗಳು ಪುಟ-೨೫ ಕಂಚ್ಯಾಣಿ ಶರಣಪ್ಪ.
೨. ಊರಿಗೆ ಜೋಗೇರು ಬಂದಾರ : ನೂರೊಂದು ಕವಿತೆಗಳು ಪುಟ-೨೯ ಕಂಚ್ಯಾಣಿ ಶರಣಪ್ಪ.
೩. ಹೆಂಡಿಯ ಪಾಂಡವರು : ನೂರೊಂದು ಕವಿತೆಗಳು ಪುಟ-೩೫ ಕಂಚ್ಯಾಣಿ ಶರಣಪ್ಪ.

ಮಗು ಮಹಾಭಾರತದ ವೀರರಾದ ಪಾಂಡವರನ್ನು ಗುರುತಿಸಿಕೊಳ್ಳುವ ಬಗೆಯನ್ನು ಕವಿತೆಯುದ್ದಕ್ಕೂ ಮೂಡಿಬಂದಿದೆ. ದಿಪಾವಳಿಯ ಸಂದರ್ಭದಲ್ಲಿ ಹೆಂಡಿಯ ಪಾಂಡವರನ್ನು ನಿರ್ಮಿಸಿ, ಶೃಂಗರಿಸಿ ನೋಡುವ ಕುತೂಹಲ ಮಗುವಿನದು. ತಮ್ಮ ಅಸ್ತ್ರಗಳನ್ನು ಕಟ್ಟ ಮರದಲ್ಲಿ ಒಟ್ಟುವದು ಒಂದು ಅರ್ಥದಲ್ಲಿ ಪೌರುಷವನ್ನು ಕಳಚಿಕೊಳ್ಳುವದು. ಇಂಥ ಪಾಂಡವರು ವಿರಾಟ ರಾಜನ ಆಸ್ಥಾನದಲ್ಲಿ ನಾನಾ ವಿಧದ ವೇಷ ಬದಲಿಸಿಕೊಂಡು ಬದುಕನ್ನು ಕಳೆಯುವದರೊಂದಿಗೆ, ಹಲವರು ರಕ್ಕಸರನ್ನು ಸದೆಬಡಿದುದು, ಉತ್ತರನ ಪೌರುಷ, ಗೋವುಗಲನ್ನು ಸೆರೆಯಿಂದ ಬಿಡಿಸಿದುದು ಮಗುವಿನಲ್ಲಿ ಅಚ್ಚಳಿಯದೆ ಉಳಿಯುವಂತೆ ಕಂಚ್ಯಾಣಿಯವರು ಕವಿತೆಯಾಗಿ ಚಿತ್ರಿಸಿದ್ದಾರೆ.

"ಇವನ ಕಂಡು ಹಕ್ಕಿಪಕ್ಕಿ
ಹಾರಿ ಹೋದವು
ತುಡುಗ ದನವು ಹೊಲದ ಸನಿಹ
ಸುಳಿಯಲಾರವು" ೧

ಕೃಷಿಕ ಮನೆತನದ ಕಂಚ್ಯಾಣಿಯವರು 'ಬೆಳೆಯನ್ನು ಕಾಯುವ ಬೆಚ್ಚ' ನಿರ್ಮಾಣದ ರೀತಿ ಕುತೂಹಲಕಾರಿ. ಹಳೆಯ ಲುಂಗಿ ಸುತ್ತಿ, ಹರಿದ ಅಂಗಿ ತೊಟ್ಟು, ಸುಣ್ಣ ಬಳಿದ ಒಡಕು ಮಡಿಕೆ ತಲೆಗೆ ಇಟ್ಟುಕೊಂಡು, ಬಡಿಗೆ ಹಿಡಿದು ಬಯಲಿನಲ್ಲಿ ನಿಂತವನು ಚಳಿ-ಮಳೆ-ಬಿಸಿಲಿ ಜಗ್ಗದವನು. ಪಕ್ಷಿಗಳು-ಪ್ರಾಣಿಗಳು ಇವನನ್ನು ಕಂಡು ಭಯದಿಂದ ಹೊಲದ ಸನಿಹ ಸುಳಿಯಲಾರವು ಕಳ್ಳಕಾಕರು ಹೆದರಿ ಓಡುವರು ಆದರೆ ಮಾತ್ರ ಈತ ಗಸ್ತು ತಿರುಗಲಾರನು, ಗಟ್ಟಿಗಾವಲಾಗಿ ನಿಂತ ಬೆದರು ಬೆಚ್ಚನು' ಎಂದು ರೈತರು ಒಡನಾಡಿ ಬೆಚ್ಚನನ್ನು ಚಿತ್ರಿಸಿದ್ದಾರೆ.

'ಬಗೆ ಬಗೆ ಬೇನೆಯ ಬರಿಸಿದವು
ವಾಂತಿ ಭೇದಿಯ ಹರಡಿದವು
ಪರಿಸರ ಹಾಳು ಮಾಡಿದವು
ಎಲ್ಲೆಡೆ ಭೀತಿಯ ಬಿತ್ತಿದವು' : ೨

ಮಾನವನಲ್ಲಿ ಪರಿಸರ ಸಂರಕ್ಷಣೆಯನ್ನು ಮಾಡುವ ಗುಣ ಹಾಗೂ ರೋಗಗಳ ಬಗ್ಗೆ ತಿಳಿಯಪಡಿಸುವ ಕಂಚ್ಯಾಣಿಯವರು, ಜಡ್ಡು ಹರಡಲು ನೊರಜು-ನೊಣ ಕಾರಣ ಎನ್ನುವಲ್ಲಿ ಹಳಸಿದ ಬುತ್ತಿ, ಎಂಜಲು-ಮಂಜಲು ಮುಕ್ಕಿ, ಕೊಳೆತ ಹಣ್ಣಿಗೆ ಜೊಲ್ಲ ಸುರಿಸಿ ನೆಕ್ಕುವ, ಮಿಠಾಯಿ ಅಂಗಡಿ ತಿಂಡಿ-ತಿನಿಸು ಕೆಡಸುವ ಕ್ರಿಮಿಗಳು ಸಾಂಕ್ರಾಮಿಕ ರೋಗಗಳಿಗೆ ಪೂರಕವಾಗಿದೆ.

"ಜನಪದ ನಂಬಿಕೆಗಳು ಮನುಷ್ಯನ ಮನಸ್ಸಿನ ಪರಿಸ್ಥಿತಿಗೆ ಸಂಬಂಧಿಸಿದವು ಆಗಿರುವದರಿಂದ ಅವು ಸಾರ್ವತ್ರಿಕವಾಗಿವೆ. ಹಾಗೆಯೇ ಅನೇಕ ದೇಶಗಳ ಜನಪದ ನಂಬಿಕೆಗಳು ಸಮಾನವಾಗಿವೆ. ಆದ್ದರಿಂದಲೇ ನಮ್ಮ ಜನಪದ ನಂಬಿಕೆಗಳು ಜಗತ್ತಿನ ದೇಶಗಳ ಜನಪದ ನಂಬಿಕೆಗಳಿಗಿಂತ ವಿಶೇಷ ಭಿನ್ನವಾಗಿ ಕಾಣಿಸುವದಿಲ್ಲ"॥೩ ಕಂಚ್ಯಾಣಿಯವರ ಕವಿತೆಗಳು ಇದೇ ನೆರಳಿನಲ್ಲಿ ಸಾಗಿದವು.

---

೧. ಬೆದರು ಬೆಚ್ಚ : ಬೆದರು ಬೆಚ್ಚ ಪುಟ-೨೧ ಕಂಚ್ಯಾಣಿ ಶರಣಪ್ಪ.
೨. ಜಡ್ಡಿನ ಜಾತ್ರೆ : ನೂರೊಂದು ಕವಿತೆಗಳು ಪುಟ-೧೪೬ ಕಂಚ್ಯಾಣಿ ಶರಣಪ್ಪ.
೩. ಸಂ.ಜಿ.ಎಸ್. ಶಿವರುದ್ರಪ್ಪ : ಕರ್ನಾಟಕ ಜಾನಪದ ಪುಟ-೧೭೧.

"ಮದ ಮತ್ಸರಗಳ ಅಡಗಿತು ಗುಲ್ಲು ।
ಬನ್ನಿರಿ ಬನ್ನಿರಿ ವಿನಯದ ಸೊಲ್ಲು ।
ಹಮ್ಮು ಬಿಮ್ಮುಗಳ ದಾಂಟುತೆ ನಿಲ್ಲು ।
ಸ್ನೇಹದ ಸಿರಿ ಹೊರೆ ಹರಿವುದು ಎಲ್ಲೂ" ॥ ೧

ಪರಂಪರೆಯ ಸಂಪ್ರದಾಯವನ್ನು ಮುಂದುವರೆಸಿಕೊಂಡು ಬರುವ ಈ ಹೊತ್ತಿನ ಯುವ ಜನತೆಯಲ್ಲಿ ಕಂಚ್ಯಾಣಿಯವರು ಸಾಮರಸ್ಯವನ್ನು ಬಿತ್ತುವಲ್ಲಿ ಯಶಸ್ವಿಯಾಗಿದ್ದಾರೆ. ಕನ್ನಡ ನಾಡಿನ ಚಿನ್ನದ ಹಬ್ಬ ಇದುವೆ ಬನ್ನಿಯ ಹಬ್ಬ ಈ ಸಂದರ್ಭದ ನಾಡಿನ ವೈಭವ, ಸಂಭ್ರಮವನ್ನು ಕಂಚ್ಯಾಣಿಯವರು ಮನದುಂಬಿ ವರ್ಣಿಸಿ ಸರ್ವರೂ ಮದ-ಮತ್ಸರ ಅಡಗಿಸಿ ಸ್ನೇಹದಿಂದ ಇರಲು ಹಾರೈಸಿದ್ದಾರೆ.

ನೆಗಡಿಯ ಕಾಟ ಕಂಚ್ಯಾಣಿಯವರಿಗೂ ಬಿಟ್ಟಿಲ್ಲ. ಇದೊಂದು ಮಾರಕ ರೋಗವಾಗಿರದಿದ್ದರೂ ವ್ಯಕ್ತಿಯನ್ನು ಬಳಲಿಸುತ್ತದೆ. ಅದಕ್ಕೆ ಅವರು,

"ನೂರು ಸೀನು ಮೂಗಿನಲ್ಲಿ
ನೀರು ಕಣ್ಣು ಕುಣಿಕೆಯಲ್ಲಿ
ನೋವು ತಲೆಯ ಗೂಡಿನಲ್ಲಿ
ನರಳಿ ನರಳಿ ಸಾವುದಿಲ್ಲ" । ೨

ಎಂದಿದ್ದಾರೆ 'ನೆಗಡಿ ಜಡ್ಡಲ್ಲ ಬುಗುಡಿ ಬಂಗಾರವಲ್ಲ' ಜಾಣನರಿತು ನುಡಿದನಲ್ಲಿ, ಅದರ ಮರ್ಮ ಅವನೇ ಬಲ್ಲ ಎಂದ ಕಂಚ್ಯಾಣಿಯವರು ಸಾಮಾಜಿಕ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

'ಬಾನಿನಲ್ಲಿ ಬೋಲಬಗರಿ
ತಿರುಗೆ ತಿರುಗಿದೆ
ಮೇಲೆ ಕೆಳಗೆ ಸುತ್ತ ಮುತ್ತ
ಆಸರೆಲ್ಲಿದೆ'? ೩

ಭೂಮಿಯನ್ನು ಕುರಿತು ಕಂಚ್ಯಾಣಿಯವರಿಗೆ ವಿಸ್ಮಯ ಮೂಡಿದಂತಿದೆ. ಆಕಾಶದಲ್ಲಿ ತೇಲುವ ಈ ಭೂಮಿ ಬಗರಿಯ ಹಾಗೆ ಕಂಡಿದೆ ಎಲ್ಲಿಯೂ ಆಸರೆಯಿಲ್ಲದೆ ತನ್ನ ಸುತ್ತ ತಿರುಗುತ್ತ ಹಗಲು-ರಾತ್ರಿಗಳಾಗಿ, ಋತುಗಳು ಬದಲಾಗುತ್ತ ವರ್ಷ ಕಳೆಯುವದು, ಧರೆ ಸೂರ್ಯನ ಸುತ್ತುವರಿದು ಬರಲು' ನಿಜವಾಗಿಯೂ ವಿಸ್ಮಯಕಾರಿ.

'ಮನೆಯ ಮೊದಲ ಪಾಠಶಾಲೆ, ತಾಯಿ ತಾನೆ ಮೊದಲ ಗುರು' ಎಂಬ ಮಾತನ್ನು ಅನುಸರಿಸಿ, ಶಿಕ್ಷಣ ಕೊಡುವಲ್ಲಿ ಗೃಹ, ಗುರು ಮತ್ತು ಮಾನವ ಕುಟುಂಬಗಳ ಜವಾಬ್ದಾರಿ ಸಾಕಷ್ಟಿದೆ. ಮಕ್ಕಳು ಸದಾಚಾರಿಗಳು, ಸುದ್ಗುಣಿಗಳಾಗಲು ಮಾನಸಿಕವಾಗಿ ಮನೆಯಲ್ಲಿಯೇ ತಯಾರಾಗುತ್ತಾರೆ.

---

೧. ಚಿನ್ನದ ಹಬ್ಬ : ನೂರೊಂದು ಕವಿತೆಗಳು ಪುಟ-೧೧೯ ಕಂಚ್ಯಾಣಿ ಶರಣಪ್ಪ.
೨. ನೆಗಡಿ : ನೂರೊಂದು ಕವಿತೆಗಳು ಪುಟ-೪೩ ಕಂಚ್ಯಾಣಿ ಶರಣಪ್ಪ.
೩. ಬೊಲ ಬಗರಿ : ನೂರೊಂದು ಕವಿತೆಗಳು ಪುಟ-೪೮ ಕಂಚ್ಯಾಣಿ ಶರಣಪ್ಪ.

"ಮನುಷ್ಯನಿಗೆ ಮನುಷ್ಯತ್ವ ಪ್ರಾಪ್ತವಾಗಬೇಕಾದರೆ ಶಿಕ್ಷಣವು ಅವಶ್ಯವಾಗಿಬೇಕು. ಶಿಕ್ಷಣವೆಂದರೆ ಮನುಸ್ಸು, ಬುದ್ಧಿ ಮತ್ತು ದೇಹಗಳಿಗೆ ದೊರೆಯುವ ಸಂಸ್ಕಾರವು ಇಂಥ ಸಂಸ್ಕಾರವು ಮನುಷ್ಯನಿಗೆ ಸಕಾಲದಲ್ಲಿ ದೊರೆಯದಿದ್ದರೆ ಆತನು ಸುಖ-ಶಾಂತಿಗಳನ್ನು ಅನುಭವಿಸುವದು ಸಾಧ್ಯವೇ ಇಲ್ಲ"।೧ ಎಂದು ಶಿಕ್ಷಣದ ಅವಶ್ಯಕತೆಯನ್ನು ತಿಳಿಸಿ ಅದರ ಮಹತ್ವವನ್ನು ಹೇಳುತ್ತಾರೆ.

"ಅರಿವಿನ ಪರಿಯನು ಅರುಹುತ್ತ
ಮೂಢನಂಬಿಕೆಯ ಅಳಿಸುತ್ತ
ನೀತಿಯ ದಾರಿ ತೆರೆಯುತ್ತ
ಸಮತಾ ಭಾವದಿ ನಡೆಯುತ್ತು"।೨

ದೇಶದ ಪ್ರತಿಯೊಬ್ಬ ಮಗ ಅಕ್ಷರ ಕಲಿಕೆಯಿಂದ ಸಾಕ್ಷರರಾಗಬೇಕೆಂದು, ಎಲ್ಲೆಡೆ 'ಅಕ್ಷರ ಕ್ರಾಂತಿ' ಮೊಳಗಬೇಕು ಎನ್ನುವ ಆಶಯ ಕಂಚ್ಯಾಣಿಯವರದು. ಜ್ಞಾನದಿಂದ ಅಜ್ಞಾನವನ್ನು ತೊಲಗಿಸಿ, ನೀತಿ-ಸಮಾನತೆಯ ಭಾವ ಎಲ್ಲರಲ್ಲಿ ತುಂಬಲಿ ಎಂದು ಹಾರೈಸಿದ್ದಾರೆ.

ಶಿಕ್ಷಣ ಬದುಕಿನಲ್ಲಿ ಸಮಗ್ರ ವ್ಯಾಕ್ತಿತ್ವವನ್ನು ಅರಳಿಸುತ್ತದೆ. ಆತ್ಮತೃಪ್ತಿ, ಅಂತರಂಗ ಶೋಧದ ವ್ಯಕ್ತಿಯೊಬ್ಬ ರೂಪಗೊಳ್ಳುವಲ್ಲಿ ಸಹಕಾರಿಯಾಗುತ್ತದೆ. ಸರಿಯಾದ ಮಾರ್ಗದಲ್ಲಿ ನಾವು ಬೆಳೆಯಲು ಶಿಕ್ಷಣ ಬೇಕೇಬೇಕು ವ್ಯಕ್ತಿಯಲ್ಲಿ ಅದಮ್ಯವಾದ ಶಕ್ತಿ-ಸಾಮರ್ಥ್ಯವಿದೆ, ಅದನ್ನು ಶಿಕ್ಷಣ ಸರಿಯಾದ ಸಮಯದಲ್ಲಿ ತಿದ್ದಿ, ಉತ್ತಮ ಮಾರ್ಗದಲ್ಲಿ ನಡೆಯುವಂತೆ ಮಾಡುವದಲ್ಲದೆ, ವ್ಯಕ್ತಿಯ ಮಾನಸಿಕ, ಬೌದ್ಧಿಕ ಮತ್ತು ಶಾರೀರಿಕ ಬೆಳವಣಿಗೆಗೆ ಕಾರಣವಾಗುತ್ತದೆ.

ಹೀಗೆ ಕಂಚ್ಯಾಣಿಯವರು ಕಾವ್ಯ ಕೌಟುಂಬಿಕ ವಾತ್ಸಲ್ಯ, ನಿಸರ್ಗ ಕವಿತೆಗಳ, ಅನುಭಾವ ಗೀತೆಗಳ, ದೇಶಾಭಿಮಾನದ ಕವಿತೆಗಳ, ನೀತಿಯ-ಸಾಮಾಜಿಕ ಕವಿತೆಗಳ ನೆಲೆಗಳಲ್ಲಿ ಮೂಡಿನಿಂತಿದೆ.

---

೧. ಗ.ಸ. ಹಾಲಪ್ಪ : ರಾಷ್ಟ್ರಧರ್ಮದ್ರಷ್ಟಾರ ಹರ್ಡೆಕರ ಮಂಜಪ್ಪ ಪುಟ-೮೮೪
೨. ಅಕ್ಷರ ಕ್ರಾಂತಿ : ಪುಟ್ಟಿಯ ತೋಟ ಪುಟ-೨೨ ಕಂಚ್ಯಾಣಿ ಶರಣಪ್ಪ.

# ಅಧ್ಯಾಯ ಐದು

# 'ಕಂಚ್ಯಾಣಿಯವರ ಶಿಶು ಕಾವ್ಯ'

## ಅಧ್ಯಾಯ : ೫ ಕಂಚ್ಯಾಣಿಯವರ ಕಥೆಗಳಲ್ಲಿ ಕಾವ್ಯ ನಿರೂಪಣೆ :

"ಭಾಷೆಯಿಲ್ಲದೆ ಸಾಹಿತ್ಯವಿಲ್ಲ ಸಾಹಿತ್ಯವಿಲ್ಲದ ಭಾಷೆ ಇಲ್ಲ". ಲಿಖಿತ ~ ಅಲಿಖಿತ ಸಾಹಿತ್ಯವೆಂಬ ಎರಡು ಪ್ರಕಾರಗಳಿವೆ. ಜಾನಪದ ಸಾಹಿತ್ಯವು ಅಲಿಖಿತಕ್ಕೆ ಉದಾಹರಣೆಯಾದರೆ, ಗ್ರಾಂಥಿಕ ಭಾಷೆ ಲಿಖಿತ ಸಾಹಿತ್ಯಕ್ಕೆ ಉದಾಹರಣೆ. ಸಾಹಿತ್ಯದಲ್ಲಿ ವಿವಿಧ ಅಲಂಕಾರಗಳು, ವಿವಿಧ ಛಂದೋರೂಪಗಳು ಸಾಂದರ್ಭಿಕವಾಗಿ ಬಂದು ಕಾವ್ಯದ ಸೌಂದರ್ಯವನ್ನು ಹೆಚ್ಚಿಸುತ್ತದೆ. ಸಾಹಿತ್ಯದಲ್ಲಿ ಈ ಅಲಂಕಾರಗಳು ಮತು ಛಂದಸ್ಸುಗಳು ಭಾಷೆಯ ಬಗ್ಗೆ ಹಿಡಿತವನ್ನು ತಂದುಕೊಡುತ್ತವೆ.

ಭಾಷೆ ಬದಲಾದಂತೆ ಸಾಹಿತ್ಯದ ಅಂಶಗಳೂ ಬದಲಾಗುತ್ತವೆ. ಲಿಖಿತ ಸಾಹಿತ್ಯದಲ್ಲಿ ಸಾಂಪ್ರದಾಯಿಕವಾಗಿ ಬಳಕೆಯಲ್ಲಿರುವ ಎಷ್ಟೋ ಪ್ರಸಾದಿಗಳು, ಶೈಲಿಗಳು ಆ ಭಾಷೆಯನ್ನು ಅನುಸರಿಸಿ ಬದಲಾಗಬಹುದು.

ಜೀವನ ಅನುಭವವನ್ನು ಪೂರ್ವ ಕಲ್ಪಿತ ಸಂಗತಿಗಳು, ನಂಬಿಕೆಗಳು ಆವರಿಸಿಕೊಂಡಿರುವ ಬರಹಗಳು, ಕೈಗಾರಿಕಾ ಕ್ರಾಂತಿಯ ನಂತರವೂ, ಇಂದಿನ ಯುಗದಲ್ಲಿ ಎಷ್ಟು ಪ್ರಸ್ತುತ ಎನ್ನುವದನ್ನು ಚರ್ಚಿಸಬೇಕಾಗಿದೆ. ಇವುಗಳ ವಸ್ತುನಿಷ್ಠ ಅಧ್ಯಯನ, ವಿಶ್ಲೇಷಣೆ ಮಾತ್ರವೇ ಇಂದನ ಸಮಾಜದ ಅವಶ್ಯಕ ಬರವಣೆಗೆಯನ್ನು ರೂಪಿಸಲು ಸಾಧ್ಯ. ಇದು ಮಕ್ಕಳ ಸಾಹಿತ್ಯದಿಂದಲೇ ಆರಂಭವಾಗಬೇಕಿದೆ.

ಜನಪದ ಸಾಹಿತ್ಯದ ಕಥೆಗಳು ಅಜ್ಜಿ ಹೇಳಿದ ಕಥೆಗಳೆಂದೇ ಗುರುತಿಸಲ್ಪಟ್ಟಿವೆ. ಮಕ್ಕಳನ್ನು ಅಜ್ಜಿಯ ವಶಕ್ಕೆ ಒಪ್ಪಿಸಿ ದುಡಿಯಲು ಹೋಗುತ್ತಿದ್ದ ಹೆಂಗಸರು, ಗಂಡಸರು ತಾವು ತಮ್ಮ ಅಜ್ಜ-ಅಜ್ಜಿಯರಿಂದ ಕೇಳಿಸಿಕೊಂಡ ಕಥೆಗಳಿಗೆ ಅನುಭವದ ಲೇಪನವನ್ನು ಹಚ್ಚಿ ಕಥೆಯನ್ನು ಹೇಳುವಲ್ಲಿ ಪರಂಪರೆಯನ್ನು ಉಳಿಸಿಕೊಡು ಬಂದಿದ್ದಾರೆ.

ಅಳುವ ಮಕ್ಕಳನ್ನು ಸಂತಯಿಸಿ, ನಕ್ಕು ನಲಿಸಲು, ತುಂಟಾಟವನ್ನು ಅಡಿಗಿಸಲು ಅಜ್ಜಿ ಹೇಳುತ್ತಿದ್ದ-ಕಥೆಗಳು ಮುಂದೆ ಲಿಪಿ ಹಾಗೂ ಮುದ್ರಣ ಕಲೆಯ ಅವಿಷ್ಕಾರದಿಂದಾಗಿ ಪುಸ್ತಕಗಳಾಗ ಹೊರಬಂದವು.

ಪ್ರಾಣಿ, ಪಶು-ಪಕ್ಷಿಗಳು ಕಥೆ ಕೇಳುತ್ತಾ ತಮ್ಮ ಸುತ್ತಲಿನ ನಿಸರ್ಗವನ್ನು ತವಕದಿಂದ ನೋಡುತ್ತ, ತಮ್ಮದೇ ಸರಳತೆಯ ತರ್ಕಗಳಿಂದ ಪ್ರಶ್ನೆಗಳನ್ನು ಹಾಕುತ್ತಿದ್ದ ಮಕ್ಕಳಿಗೆ ಅಜ್ಜಿಯೇ ಪ್ರಪಂಚವಾದಳು. ಆದ್ದರಿಂದಲೇ "ಅಜ್ಜಿ ಇಲ್ಲದ ಮನೆಯಲ್ಲ; ಮಜ್ಜಿಗೆ ಇಲ್ಲದ ಊಟ ಊಟವಲ್ಲ" ಎಂಬ ಗಾದೆ ಹುಟ್ಟಿಕೊಂಡಿದೆ.

ಆಧುನಿಕ ಸಮಾಜ ವೇಗವಾಗಿ ಬೆಳೆಯುತ್ತಿರುವದರಿಂದ ಅವಿಭಕ್ತ ಕುಟುಂಬಗಳು ಒಡದು ಚಿಕ್ಕ-ಚೂಕ್ಕ ಸಂಸಾರದ ಮಕ್ಕಳು ಅಜ್ಜಿಯ ಕಥೆಗಳಿಂದ ವಂಚಿತರಾಗಿದ್ದಾರೆ ಇಂಥ ಪರಿಣಾಮದಿಂದ ಮುಕ್ತಗೊಳ್ಳಲು ಕಂಚ್ಯಾಣಿಯವರ ಮಕ್ಕಳ-ಮಕ್ಕಳಿಗಾಗಿ ಇರುವ ಕಥೆಗಳು ಎಲ್ಲ ವಿಧವಾದ ಸಮಸ್ಯಗಳನ್ನು ದೂರಗೊಳಿಸಿ ಮನಸೂರೆಗೊಂಡಿವೆ.

ಸಾಹಿತ್ಯವು ಭಾಷೆಯ ಮಾಧ್ಯಮದ ಒಂದು ಸಂಕೀರ್ಣ ಕಲೆ. ಈ ಸಂಕೀರ್ಣತೆಗೆ ಬುದ್ಧಿನಿಷ್ಠ ಮತ್ತು ಭಾವನಿಷ್ಠ ಎಂಬ ಎರಡು ಮಗ್ಗುಲಗಳಿವೆ. ಸಮಾನ್ಯವಾಗಿ ಸಾಹಿತ್ಯವೆಂದರೆ ಭಾವಗಮ್ಯವಾದುದೆಂದು ನಂಬಿಕೆಯಿಂದ ಅದನ್ನು ಸೃಷ್ಟಿಸುತ್ತ ಬರಲಾಗುತ್ತಿದೆ. ಆದರೆ ಇಂದು ಬುದ್ಧಿ ಪ್ರಧಾನವಾದ ಸಾಹಿತ್ಯ ಸಮೃದ್ಧವಾಗಿ ಬೆಳೆಯುತ್ತಲಿದೆ. ಇದನ್ನೆ ನಾವು 'ವಿಚಾರ ಸಾಹಿತ್ಯ' ಎಂದು ಕರೆಯುತ್ತೇವೆ. ಇಂಥ ವಿಚಾರಪೂರ್ಣವಾದ ಧ್ವನಿ ಹೊಂದಿರುವ ಕಂಚ್ಯಾಣಿಯವರ ಕಾವ್ಯ ಶಿಶು ಕವಿತೆಗಳಾಗಿ ಹೊರಹೊಮ್ಮಿರುವದು ವಿಶಿಷ್ಟ.

ಸಾಹಿತ್ಯ ರಚನೆಯ ದೃಷ್ಟಿಯಿಂದ ಹೇಳುವದಾದರೆ ಕಂಚ್ಯಾಣಿಯವರದು ಶರಣ 'ಮನೋಧರ್ಮ'ವುಳ್ಳದ್ದು. ಶರಣರ ನಿಲುವು ವ್ಯಕ್ತಿ ಕೇಂದ್ರಿತವಲ್ಲ, ಸಮಾಜ ಕೇಂದ್ರಿತವಾದುದು. ಹೀಗಾಗಿ ಕಂಚ್ಯಾಣಿಯವರು ಸಮಾಜಿಕತೆಯೊಂದಿಗೆ ಮಕ್ಕಳ ಮನೋಭಾವನೆಗಳನ್ನು ಮುಖ್ಯ ಕಾಳಜಿಯಾಗಿ ಮಾಡಿಕೊಂಡವರು. ಸಾಹಿತ್ಯದ ವಿಶಿಷ್ಟ ತಂತ್ರಗಾರಿಕೆಯನ್ನು ಬಳಸಿ ಸೃಜನ-ಶೀಲ ಸಾಹಿತ್ಯದ ಆಶಯಗಳನ್ನು ಹೊಂದಿ, ಜನಪರವಾದ ಸರಳ ಬರವಣಿಗೆಯಿಂದ ಜನರ ಬದುಕು-ಭಾವನೆಗಳನ್ನು, ಜೀವನ ದರ್ಶನದ ಮೌಲ್ಯಗಳನ್ನು ತಮ್ಮ ಸಾಹಿತ್ಯದಲ್ಲಿ ಹಿಡಿದಿಡುವ, ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸುವ ಹಲವಾರು ಕವಿತೆಗಳು ನಿದರ್ಶನವಾಗಿವೆ.

ನವೋದಯ ಕಾಲದ ಪ್ರಾರಂಭದಲ್ಲಿ ಸಾಹಿತ್ಯ ಕೃಷಿಯಲ್ಲಿ ತೊಡಗಿದ ಕಂಚ್ಯಾಣಿಯವರು ಅದರ ಪ್ರವಾದಲ್ಲಿ ಸಾಗಿದವರು ತಮ್ಮದೇ ಆದ ವಿಶೇಷವಾದ ಬರವಣಿಗೆಗ್ದೆ ಬದ್ದರಾದವರು ಪಶ್ಚಾತ್ಯ ಸಾಹಿತ್ಯದಿಂದ ಪ್ರಭಾವಗೊಂಡ ನವೋದಯ ಘಟ್ಟಾದಲ್ಲಿ "ಆದರ್ಶ" ಮತ್ತು "ಭಾವುಕತೆ"ಗಳೇ ತುಂಬಿರುವುದು ಹೆಚ್ಚು. ಕಂಚ್ಯಾಣಿಯವರು ಇಂತಹ ನಿಲುವುಗಳನ್ನು ತಮ್ಮ ಕಾವ್ಯದ ಬೆನ್ನೆಲುಬಾಗಿ ಮಾಡಿಕೊಂಡವರು. ನವೋದಯ ಪರಂಪರೆಯ ಭಾವುಕತೆ, ನಿಸರ್ಗ ಪ್ರೇಮ, ಶಬ್ದ ಬಳಕೆಯ ಕಲಾತ್ಮಕತೆ, ಗೇಯತೆಗಳು ಯುವಕರನ್ನು, ಸಮಾಜವನ್ನು ಉತ್ತಮ ರೀತಿಯಲ್ಲಿ ಬೆಳವಣಿಗೆ ಹೊಂದಲು ಪೂರಕ ಸಾಹಿತ್ಯ ನಿರ್ಮಿಸಿದರು.

ಕಂಚ್ಯಾಣಿಯವರ ಸಾಹಿತ್ಯವನ್ನು ಅವಲೋಕಿಸಿದಾಗಿ ಮುಖ್ಯವಾಗಿ ಕಂಡುಬರುವದು, ಹಳ್ಳಿಗರ ಬದುಕನ್ನು ಉದ್ದರಿಸುವ, ಮಕ್ಕಳ ಮನವನ್ನು ತಿದ್ದುವ, ರಾಷ್ಟ್ರಭಕ್ತಿ ಬೆಳಗಿಸುವ ಆದರ್ಶಗಳಿಂದ ಇವರ ಬರವಣಿಗೆ ರೂಪಗೊಂಡಿದೆ. ಗ್ರಾಮೀಣ ಪರಿಸರದಲ್ಲಿ ಸಾಮಾನ್ಯ ಕೃಷಿ ಕಾಯಕದ ಮದೆತನದಲ್ಲಿ ಹುಟ್ಟಿ-ಬೆಳೆದ ಕಂಚ್ಯಾಣಿಯವರದು ಸ್ವಯಂ ಪ್ರತಿಭೆ, ಕ್ರೀಯಾಶೀಲ ಮನೋಭಾವದ ಹಿನ್ನಲೆಯುವಳ್ಳ ಬದುಕು ಇವರದು ಪದಾ ಓದಿನಲ್ಲಿ ತಲ್ಲಿನರಾಗುವ, ಸಾಮಾಜಿಕ ಚಟುವಟಿಕೆಯ ವ್ಯಕ್ತಿತ್ವ

ಜೀವನದಲ್ಲಿ 'ಕಾಯಕ'ಕ್ಕೆ ಮಹತ್ವ ಕೊಟ್ಟಾ ಕಂಚ್ಯಾಣಿಯವರು, ಕಾಯಕವನ್ನು ಪವಿತ್ರ ದೃಷ್ಟಿಯಿಂದ ನೋಡಬೇಕು. ಯಾವ ಕಾಯಕವಾದರೇನು ಅದರಲ್ಲಿ, ತಮ್ಮನು ಸಂಪೂರ್ಣವಾಗಿ ತೊಡಗಿಸಿಕೊಂಡು ಬಾಳಿದರೆ ಯಶಸ್ಸು ಖಂಡಿತ 'ಕ್ರೀಯಾಶೀಲ ಮನೋಭಾವ ಹೊಂದಿದ ಜನರಿಂದಲೇ ಸದೃಢ ಹಾಗೂ ಸಮೃದ್ಧ ಸಮಾಜ ನಿರ್ಮಾಣ ಸಾಧ್ಯ' ಯುವಕರಲ್ಲಿ ಈ ವಿಚಾರಗಳು ಬೆಳೆಯಬೇಕು, ಅರಳಬೇಕು' ಎಂಬ ಮೊದಲಾದ ಅಭಿಪ್ರಾಯಗಳನ್ನು ಅವರು ಹೊಂದಿದ್ದರು.

ಕಂಚ್ಯಾಣಿಯವರ ಕಥಾ ಸಾಹಿತ್ಯವು ಈ ಎಲ್ಲ ಧೋರಣೆಗಳನ್ನು ಅಳವಡಿಸಿಕೊಂಡು ಬೆಳೆದಿದೆ. ಮಕ್ಕಳ ಸಾಹಿತ್ಯದಲ್ಲಿ ಕಥೆ ಹಾಗೂ ಜೀವನ ಚರಿತ್ರೆಗಳನ್ನು ಪ್ರಧಾನ ಪಾತ್ರವಹಿಸುತ್ತವೆ. ಮಕ್ಕಳ ಮನಸ್ಸಿಗೆ ಮುಟ್ಟುವಂತೆ ಜೀವನ ಗಾಥೆಯನ್ನು ಚರಿತೆ ರೂಪದಲ್ಲಿ, ಕಥಾರೂಪದಲ್ಲಿ ಹೇಳುವದು ಮುಖ್ಯ ಆದರ ಕಂಚ್ಯಾಣಿಯವರಲ್ಲಿ ಈ ರೂಪದ ಜೊತೆಯಲ್ಲಿಯೇ ಇನ್ನೊಂದು ಹೊಸತನವನ್ನು ಕಾಣಿತ್ತೇವೆ ಅದುವೇ' ಕಥೆಗಳಲ್ಲಿ ಕಾವ್ಯ ನಿರೂಪಣಾ' ವಿಧಾನ.

ಕಂಚ್ಯಾಣಿಯವರ ಕೃತಿಗಳನ್ನು ಮುಖ್ಯವಾಗಿ ಕವಿತೆಗಳು, ಕಥೆಗಳು, ಖಂಡಕಾವ್ಯ, ಚರಿತ್ರೆ ಎಂದು ವಿಭಾಗಿಸಿ ಒಟ್ಟು ಇಪ್ಪತ್ತು(೨೦) ಕೃತಿಗಳನ್ನು ರಚಿಸಿದ್ದಾರೆ. ಈ ಇಪ್ಪತ್ತು ಕೃತಿಗಳಲ್ಲಿ ಐದು(೫) ಕಥಾಸಂಕಲನಗಳನ್ನು ಪ್ರಕಟಿಸಿದ್ದಾರೆ ಇವುಗಳಲ್ಲಿ.

೧. ಗಿಲ್ ಗಿಲ್ ಗಿಡ್ಡ
೨. ತಿಪ್ಪನ ಕಥೆಗಳು
೩. ತಿಪ್ಪನ ಮತ್ತಷ್ಟು ಕಥೆಗಳು
೪. ಚತುರ ಚಿಣ್ಣರು
೫. (ಹಕ್ಕಿಯ ಹಾಡು)/ಹಾಡುವ ಹಕ್ಕಿ.

ಮಕ್ಕಳಿಗೆ ಕಥೆಗಳೆಂದರೆ ತುಂಬಾ ಪ್ರೀತಿ ಕಥೆ ಹೇಳುವ ಉದ್ಧೇಶ ಕೇವಲ ಮನರಂಜನೆ ಮಾತ್ರವಲ್ಲ. ಮಕ್ಕಳು ಒಳ್ಳೆಯ ಮಾರ್ಗದಲ್ಲಿ ನಡೆಯಲು ಕಥೆಗಳು ಪ್ರೇರಣೆ ನೀಡುತ್ತವೆ. ಇಂಥ ಕಥೆಗಳಲ್ಲಿ ಕಂಚ್ಯಾಣಿಯವರು ಪ್ರಾಣಿ ಪಕ್ಷಿಗಳ, ಅದ್ಭುತ, ಸಾಹಸದ, ಶಿಸ್ತು, ಸಹಕಾರ, ಸ್ವಾವಲಂಬನೆ, ಶೌರ್ಯ ಮುಂತಾದವುಗಳನ್ನು ಚಿತ್ರಿಸಿದ್ದಾರೆ.

ಕಂಚ್ಯಾಣಿಯವರ ಮೊದಲ್ ಕಥಾ ಸಂಕಲನ 'ಗಿಲ್ ಗಿಲ್ ಗಿಡ್ಡ' ೨೦೦೧ ರಲ್ಲಿ ಪ್ರಕಟಗೊಂಡ ಒಂಭತ್ತು ಕಥೆಗಳನ್ನು ಒಳಗೊಂಡಿದೆ ಇಲ್ಲಿಯ ಎಲ್ಲ ಕಥೆಗಳನ್ನು ಮಕ್ಕಳನ್ನು ಆಕರ್ಷಣೆಗೊಳ್ಳುವದರೊಂದಿಗೆ ಹಿರಿಯರನ್ನು ರಂಜಿಸುವ ಕಥೆಗಳಾಗಿವೆ ಕಥೆಯನ್ನು ಹೇಳುತ್ತು ನಡು-ನಡುವೆ ಪದ್ಯದ ಸಾಲುಗಳ ಶೈಲಿಯನ್ನು ಹೇಳುವ ಕಂಚ್ಯಾಣಿಯವರು ಕೊಟ್ಟ ಮಾದರಿ ವಿಶೇಷವದದ್ದು ಈ ಕಾರಣದಿಂದ 'ಗಿಲ್ ಗಿಲ್ ಗಿಡ್ಡ' ಸಂಕಲನ ೨೦೦೫ ರಲ್ಲಿ ದ್ವಿತೀಯ ಮುದ್ರಣಗೊಂಡಿದೆ.

'ಕೋಣನ ಮೇಲೆ ಕುಳಿತು ಹೊರಟ ಗಿಡ್ಡನ' ಮುಖಪುಟದೊಂದಿಗೆ ಸುಂದರವಾಗಿ ಮೂಡಿದ ಕಥಾಸಂಕಲನ ಗಿಲ್ ಗಿಲ್ ಗಿಡ್ಡ ಇಲ್ಲಿಯ ಕಥೆಗಳಲ್ಲಿ ಪ್ರಮುಖವಾಗಿ.

೧. ಕುಡಿಯದ ಮನೆಯ ಕುಡಿಕೆ ನೀರು.
೨. ಹಾಡುವ ಹಕ್ಕಿ
೩. ಚುಕ್ಕೆ ಚಂದಿರ
೪. ಕೊರಡು ಕೊನರಿತು
೫. ಕೊನೆಯ ಆಶೆ
೬. ಗಿಲ್ ಗಿಲ್ ಗಿಡ್ಡ
೭. ಜಾತಿಗಿಂತ ಪ್ರೀತಿ ಮೇಲು
೮. ಕೊಡಲಿಯ ಕಾವು
೯. ಫಕೀರನ ಕುದುರೆ

ಪ್ರತಿಯೊಂದು ಕಥೆಯು ನೈತಿಕ ಮೌಲ್ಯವನ್ನು, ಆದರ್ಶ ಗುಣವನ್ನು ಪರೋಪಕಾರವನ್ನು, ಬಿತ್ತರಿಸುತ್ತವೆ.

ಕುಡುಕನೂರಿನ ಕೂಡುಹಳ್ಳದ ಆಚೆ ದಡದಲ್ಲಿ ಒಂದು ಮಠ. ಅದಕ್ಕೆ ಸಾಧುಗಳ ಮಠವೆಂದು ಹೆಸರು. ಅಲ್ಲಿ ಒಬ್ಬ ಸಾಧು ಶಿಷ್ಯರೊಂದಿಗೆ ಇರುತ್ತಿದ್ದ, ಒಳ್ಳೆಯ ಸ್ವಭಾವ ಹಾಗೂ ಸಕಲರಿಗೂ ಒಳ್ಳೆಯದನ್ನು ಬಯಸುತ್ತಿದ್ದರು ನಿತ್ಯವು ಜಪ-ತಪ, ಭಜನೆ, ಕೀರ್ತನೆಗಳಲ್ಲಿ ಕಾಲಕಳೆಯುತ್ತಿದ್ದರು. ಸಂಕಟದಲ್ಲಿಯ ಜನರನ್ನು, ರೋಗ-ರುಜಿನಗಳನ್ನು ಗಿಡ ಮೂಲಿಕೆಗಳಿಂದ ಹೋಗಲಾಡಿಸುವ, ಮಂತ್ರ-ತಂತ್ರ ಬಲ್ಲವರಾಗಿದ್ದರು. ಇದರಿಂದ ಎಲ್ಲರೂ ಭಯ-ಭಕ್ತಿಯಿಂದ ಅವರಿಗೆ ನಡೆದುಕೊಳ್ಳುತ್ತಿದ್ದರು. ಈಗ ಕೆಲವು ದಿವಸಗಳಿಂದ ಅವರು ಎಲ್ಲಿ ಇರುವರೆಂಬುದು ಯಾರಿಗೂ ತಿಳಿಯದು. ಅವರ ಶಿಷ್ಯರಾದ ಸಂಚಾರಿ ಸಾಧುಗಳು ಬಂದು ಮಠದಲ್ಲಿದ್ದು, ಭಜನೆ, ಕೀರ್ತನೆ ಮಾಡಿ, ಪ್ರಸಾದ ಹಂಚಿ, ಸಂಚಾರ ಹೊರಡುತ್ತಾರೆ.

ಇದೇ ಸಂದರ್ಭದಲ್ಲಿ ಒಬ್ಬ ಮುದುಕಿ ಬಂದು ತನ್ನ ಮೊಮ್ಮಗನನ್ನು ಬದುಕಿಸಲು ಕೇಳಿಕೊಳ್ಳುವಳು. "ಸ್ವಾಮಿ ಇದು ನನ್ನ ಒಬ್ಬನೆ ಮೊಮ್ಮಗ ! ಎಲ್ಲಿ ಹೋದರೂ ಗುಣವಾಗದ ಜಡ್ಡು ಇದಕ್ಕೆ ಅಂಟಿಕೊಂಡಿದೆ ! ಇದರಪ್ಪ ಅಂದರೆ ನನ್ನ ಮಗ ದಿನದಿನವೂ ಕುಡಿದು ಕುಡಿದು ಸತ್ತು ಹೋದ. ಗಂಡನ ಚಿಂತೆಯಲ್ಲಿ ಸೊಸೆಯೂ ಕೊರಗಿ ಕೊರಗಿ ಜೀವ ಬಿಟ್ಟಳು. ಈ ತಬ್ಬಲಿ ಮಗುವೇ ನನ್ನ ವಂಶದ ಒಂದೇ ಒಂದು ಕುಡಿ. ಏನಾದರೂ ಮಾಡಿ ಜೀವ ಉಳಿಸಿ ಕಾಪಾಡಿ ! ಕಾಪಾಡಿ !! " ೧ ಎಂದು ಅಂಗಲಾಗಿ ಬೇಡಿಕೊಂಡಳು.

ಈ ಮಾತನ್ನು ಕೇಳಿದ ಸಾಧು ಸಮಾಧಾನ ಪಡಿಸಿ ಹೀಗೆ ಹೇಳುವರು.

"ಕುಡಿಯದವರ ಮನೆಯ ಕುಡಿಕೆ ನೀರು  
ಇದೇ ಅದಕ್ಕೆ ತಕ್ಕ ಮದ್ದು ।  
ಎಂದಾಗ; ಆ ತಾಯಿ / ಮುದುಕಿ;  
"ಕುಡಿಕೆ ನೀರು ಕೊಟ್ಟರೆ ನನಗೆ ।  
ಈಗಲೆ ಪುಣ್ಯ ಬರುವುದು ನಿಮಗೆ." । ೨

ಎಂದು ಊರೆಲ್ಲ ಬೇಡಿದರೂ ಎಲ್ಲಿಯೂ ನೀರು ಸಿಗಲಿಲ್ಲ. ಕೊನೆಗೆ ಸಾಧುಗಳೇ ತಮ್ಮ ಮಠದ ನೀರು ಮಗುವಿಗೆ ಸಿಂಪಡಿಸಿದಾಗ ಮಗು ಎಚ್ಚರವಾಗುವದು.

"ಅದ ಕಂಡ ಮುದುಕಿ;  
ಕೊಡ ಹಾಲು ಕುಡಿದಷ್ಟು  
ಹಿರಿಹಿರಿ ಹಿಗ್ಗಿದಳು ।  
ಎದ್ದು ನಿಂತ ಮಗುವನ್ನು  
ಎತ್ತಿಕೊಂಡು ಲಟ ಲಟಮೆ ಮುದ್ದಾಡಿದಳು. ।  
ಮಗುವಿನ ಪ್ರಾಣ ಉಳಿಸಿದ ಸಾಧುಗೆ  
ಪದೆ ಪದೆ ವಂದಿಸಿ ಕೊಂಡಾಡಿದಳು."॥ ೩

---

೧. ಕುಡಿಯದ ಮನೆಯ ಕುಡಿಕೆ ನೀರು : ಗಿಲ್ ಗಿಲ್ ಗಿಡ್ಡ ಪುಟ-೮ ಕಂಚ್ಯಾಣಿ ಶರಣಪ್ಪ.  
೨. ಕುಡಿಯದ ಮನೆಯ ಕುಡಿಕೆ ನೀರು : ಗಿಲ್ ಗಿಲ್ ಗಿಡ್ಡ ಪುಟ-೮ ಕಂಚ್ಯಾಣಿ ಶರಣಪ್ಪ.  
೩. ಕುಡಿಯದ ಮನೆಯ ಕುಡಿಕೆ ನೀರು : ಗಿಲ್ ಗಿಲ್ ಗಿಡ್ಡ ಪುಟ-೧೯ ಕಂಚ್ಯಾಣಿ ಶರಣಪ್ಪ.

ಇದು ಕಂಚ್ಯಾಣಿಯವರ ಸಮಾಜದ ಸ್ವಾಸ್ಥ್ಯ ಕಾಪಾಡುವ ಕಲ್ಪನೆಯನ್ನು ಮಕ್ಕಳಲ್ಲಿ ತುಂಬುವ ಹಂಬಲ.

ಕುಡಿಯದ ಮನೆಯ ಕುಡಿಕೆ ನೀರು ಸಿಗದ
ಈ ಊರಲ್ಲಿ ನಿಂತು ನೀರು ಕುಡಿಯಲಾರೆ ।
ಮುಂದಿಟ್ಟ ಹೆಜ್ಜೆ ಹಿಂದಿಡಲಾರೆ.॥ ೩

ಎನ್ನುವ ಕಂಚ್ಯಾಣಿಯವರು ಕುಡಿತದ ಚಟದಿಂದ ಮುಕ್ತರಾಗಲು ಕರೆ ನೀಡುತ್ತಾರೆ. ಸಾಧುಗಳ ಶಕ್ತಿಯನ್ನು ಅರಿತ ಜನರು ತಮ್ಮ ಕೆಟ್ಟ ಚಟವನ್ನು ಬಿಟ್ಟು ಆ ಸಾಧುಗಳಿಗಾಗಿ ಕಾಯುತ್ತಿರುವದು ಊರಿನ ಬದಲಾವಣೆ ಅವರಿಗೆ ಅರಿವು ಮೂಡಿದ ವಾಸ್ತವ ಸತ್ಯವನ್ನು ವ್ಯಕ್ತಪಡಿಸುವಲ್ಲಿ ಕಥೆ ಮೇಲುಗೈ ಸಾಧಿಸುತ್ತದೆ.

ಈ ಕಥೆಯ ಒಡಲಿನಲ್ಲಿ ಕಾವ್ಯದ ಧೋರಣೆ ಮೂಡಿ ಮಕ್ಕಳಿಗೆ ಮುದನೀಡಿದೆ. 'ಕೆಟ್ಟ ಮೇಲೆ ಬುದ್ದಿ ಬಂದ ಹಾಗೆ' ಊರ ಜನರಿಗೆ ತಮ್ಮ ತಪ್ಪಿನ ಅರಿವಗಿ ಸಭ್ಯರಾಗಿ ಬಾಳಲು ನಿರ್ಧರಿಸಿದ್ದು ಇಂದು ಕುಡಕನೂರಿನಲ್ಲಿ ಒಬ್ಬನೂ ಕುಡುಕ ಸಿಗುವದಿಲ್ಲ ತಮ್ಮ ಗುರುಗಳು ಬಂದೇ ಬರುವರೆಂಬ ನಂಬಿಗೆಯಿಂದ ಕಾಯುತ್ತಿಲಿದ್ದಾರೆ ವಿನಃ ವಿಸ್ವಾಸವನ್ನು ಕಳೆದುಕೊಂಡಿಲ್ಲ.

ನಿಸರ್ಗದ ಮಡಿಲಲ್ಲಿ ಬೆಳದ ಕವಿ ಕಂಚ್ಯಾಣಿಯವರಿಗೆ ಪಕ್ಷಿ-ಪ್ರಾಣಿಗಳ ಪ್ರಭಾವ ಅಪಾರ ಇಅವ್ರ ಹಾಡುವ ಹಕ್ಕಿ ಕಥೆಯಲ್ಲಿ ಕಾವ್ಯದ ಧ್ವನಿ ವೈವಿಧ್ಯಮಯವಾಗಿ ಮೂಡಿಬಂದಿದೆ. ಇವರ ಪರಿಸರದ ಹೆಸರುಗಳು ಕಥೆಗಳಲ್ಲಿ ವ್ಯಕ್ತಗೊಂಡಿದ್ದು ಸಹಜ.

ನಾಗರಬೆಟ್ಟದ ಪಕ್ಕದಲ್ಲಿ ಸುಂದರವಾದ ಕಾಡು, ಅಲ್ಲಿ ಸಿಹಿ ನೀರಿನ ಕೊಳ, ಇದು ಹಾಲು ಹೊಂಡವೆಂದು ಪ್ರತೀತಿ. ಎಳನೀರಿನಂತಹ ತಿಳಿನೀರ ಸರೋವರ ತುಂಬಿ, ಸುತ್ತಲು ಎತ್ತರ ಗಿಡಮರಗಳು, ಹಲವಾರು ಬಳ್ಳಿಗಳಲ್ಲಿ ಬಣ್ಣ-ಬಣ್ಣದ ಹೂವುಗಳು, ಟೊಂಗೆ-ಟೊಂಗೆಗೂ ಹಣ್ಣು-ಕಾಯಿಗಳು, ಇಂತಹ ಸುಂದರ ಪ್ರಶಾಂತ ಕಾಡಿನಲ್ಲಿ ಹಲವಾರು ಪಕ್ಷಿಗಳು-ಪ್ರಾಣಿಗಳು ನಿರಾಂತಂಕವಾಗಿ ಜೀವನ ಸಾಗಿಸುವವು.

ಕಬ್ಬಕ್ಕಿಗಳ ಹಿಂಡಿನಲ್ಲಿ ಒಂದು ಪುಟ್ಟ ಹಕ್ಕಿ ಬಲು ಸುಂದರ. ಅದರ ಧ್ವನಿ ಮಧುರ, ಬೆಳಗು-ಬೈಗು ಸಮಯದಲ್ಲಿ ಹಾಡಿ ಸಂತಸಗೊಳ್ಳುವದಲ್ಲದೆ ಉಳಿದ ಪಕ್ಷಿಗಳಿಗೂ ಆನಂದ ನೀಡುತ್ತಿತ್ತು. ಹೀಗಾಗಿ ಎಲ್ಲವೂ ಅದಕ್ಕೆ 'ಹಾಡಿನ ಹಕ್ಕಿ' ಎಂದೇ ಕರೆಯುತ್ತಿದ್ದವು.

ಇಂಥಹ ಸುಂದರ ಹಕ್ಕಿ ಒಂದು ದಿವಸ ಬೇಡನ ಬಲೆಯಲ್ಲಿ ಸಿಕ್ಕಿ ನರಳುವಂತಾಯಿತು. ಹೊತ್ತು ಮುಳುಗಿ ಕತ್ತಲು ಆವರಿಸಿತು ಹಕ್ಕಿ ಜೀವ ಭವದಿಂದ ಮಮ್ಮಲ ಮರುಗಿತು, ಇಡೀ ರಾತ್ರಿ ಸಾವಿನ ಚಿಂತೆಯಲ್ಲಿ ಮುಳಗಿತು. ಬೆಳಗಾಗುತ್ತಲೆ ಪುಟ್ಟ ಹಕ್ಕಿ ಕಣ್ಣು ಬಿಟ್ಟು ನೋಡಿತು. ಸೂರ್ಯನ ಕಿರಣಗಳು ಎಲ್ಲ ಕಡೆಗೂ ಹಬ್ಬಿ, ತರು-ಲತೆಗಳಲ್ಲಿ ಬಣ್ಣ-ಬಣ್ಣದ ಹೂವುಗಳು ಅರಳಿ, ಚಿನ್ನದ ಹರಿವಾಣದಂತೆ ಹೊಳೆಯುತ್ತಿತ್ತು. ಬೆಳಗಿನ ಸಮಯದ ಸೊಬಗು ಹಕ್ಕಿಯ ಮನವನ್ನು ಸೆಳೆಯಿತು ಹಕ್ಕಿಯು ತನ್ನ ಸಾವಿನ ಸಂಕಟವನ್ನು ಮರೆತು, ಬಲೆಯಲ್ಲಿ ಕುಳಿತು ಹಿಗ್ಗಿನಿಂದ ಹಾಡತೊಡಗಿತು.

ಹಾಡಿನ ಜಾಡನ್ನು ಹಿಡಿದು ಅನೇಕ ಪಕ್ಷಿಗಳು ಬಂದು ತಳಮಳಗೊಂಡವು. ಪಾಪ! ಹಕ್ಕಿ ಬೇಟೆಗಾರನ ಕೈಯಲ್ಲಿ ಸಿಕ್ಕು ಸಾಯುವದಲ್ಲಾ ಎಂದು ಮರುಗಿದವು ಮೃತ್ಯುವಿನ ದವಡೆಯಲ್ಲಿದ್ದರೂ ನಿಶ್ಚಿಂತೆಯಿಂದ ಹಾಡುವದನ್ನು ಕಂಡು ಆಶ್ಚರ್ಯಗೊಂಡ ಒಂದು ಕಬ್ಬಕ್ಕಿ ಮರದಲ್ಲಿ ಕುಳಿತು;

"ಹಕ್ಕಿ ! ಹಕ್ಕಿ ! ಮುದ್ದಿನ ಹಕ್ಕಿ !<br>
ಹಾಡುವ ಹಕ್ಕಿ ! ಬಲೆಯಲಿ ಸಿಕ್ಕಿ !!<br>
ಪಾಪದ ಹಕ್ಕಿ ! ಹಾಡುತ ಕುಂತಿ !<br>
ನಿನಗಿಲ್ಲೇನು ಸಾವಿನ ಚಿಂತಿ?" ೧

ಎಂದು ಪ್ರಶ್ನಿಸುವ ಹಕ್ಕಿಯನ್ನು, ಕಂಚ್ಯಾಣಿಯವರು ಮನಸಾರೆ ಅನುಭವಿಸಿ ಅಂತರಾಳದಿಂದ ಅಭಿವ್ಯಕ್ತ ಪಡಿಸಿದ್ದಾರೆ, ಹಕ್ಕಿಯ ಮನದಳಲು.

ಮರದ ಮೇಲೆ ಕುಳಿತು ಅಯ್ಯೋ ! ಎಂದು ಉದ್ಗಾರ ತೆಗೆದ ಹಕ್ಕಿಗೆ. ಬಲೆಯಲ್ಲಿ ಬಿದ್ದ ಹಕ್ಕಿಯ ಉತ್ತರ ಯಾರನ್ನಾದರೂ ಬೆರಗುಗೊಳಿಸುವದಲ್ಲದೆ ನಾಚಿಸುತ್ತದೆ.

"ಲೋಕದ ಚುಲುವು ಚಲ್ಲಿಹುದಿಲ್ಲ ।<br>
ಇಂತಹ ಸೊಗಸು ಸಿಕ್ಕುವುದೆಲ್ಲಿ ?<br>
ಹಿಗ್ಗುವ ಕಾಲಕೆ ಕುಗ್ಗುವುದೇಕೆ ?<br>
ಮರಣವು ಬರಲಿ ಅಂಜುವುದೇಕೆ?" ೨

ಎಂದು ಸುಂದರ ಕಂಠದಿಂದ ಸರಾಗವಾಗಿ ಸಾರಿ ಸಾರಿ ಹೇಳಿದ ಪರಿ ಕಂಚ್ಯಾಣಿಯವರ ಕಾವ್ಯದ ಚಲುವು ಹರಡಲು ಕಾರಣವಾಗಿದೆ.

ಪಕ್ಷಿ ಸಂಕುಲದ ಸಂವಾದವನ್ನು ಮರೆಯಲ್ಲಿ ನಿಂತು ನೋಡುವ ಬೇಡನು ಬೆರಗಾಗಿ, ಮನದಲ್ಲಿ ಹರ್ಷವ್ಯಕ್ತಪಡಿಸುತ್ತ

"ದೇವರು ಕೊಟ್ಟ ಸೊಗಸನ್ನು ಸವಿದು ಆನಂದಿಸುವ ಹಕ್ಕಿಯನ್ನು ಕೊಲ್ಲಲು ಮನಸ್ಸು ಒಪ್ಪಲಿಲ್ಲ । ಅವನಿಗೆ ಅರಿವಿಲ್ಲದಂತೆ ಅವನ ಕೈಗಳು ಬಲೆಯನ್ನು ಬಿಚ್ಚಿದವು". ಎನ್ನುವ ಕಂಚ್ಯಾಣಿಯವರು, ಜೀವನದಲಿ ಎಂತಹ ಕಷ್ಟು ಬಂದರೂ ಹೆದರಬಾರದು. ಯಾವಾಗೂ ನಗುನಗುತ್ತಾ ಸಂತಸದಲ್ಲಿರಬೇಕು. ಕಷ್ಟ-ಸುಖಗಳು ಶಾಶ್ವತವಲ್ಲ ಅದಂತೆ ಬದುಕು ಎಂದು 'ಹಾಡುವ ಹಕ್ಕಿಯನು ಚಿತ್ರಿಸುತ್ತಾ ಮಕ್ಕಳಲ್ಲಿ ಇಂತಹ ಗುಣಗಳನ್ನು ಅಳವಡಿಸಿಕೊಳ್ಳಲು ಸಲಹೆ ನೀಡುತ್ತಾರೆ.

ನೈತಿಕತೆಯ ಬದುಕನ್ನು ಕಟ್ಟುವ ಕಂಚ್ಯಾಣಿಯವರ ಪ್ರಯತ್ನ ಮನುಕುಲಕ್ಕೆ ಮಾರ್ಗದರ್ಶಕವಾದುದು. ಜನರ ಮನದ ಮಲೀನತೆಯನ್ನು ತೊಳೆಯಲು, ದುಶ್ಚಟಗಳಿಂದ ಮುಕ್ತರಾಗಲು ಬಯಸಿದವರು. ಶಾಂತಿ-ಸಮಾಧಾನಗಳ ಸಂಗಮ ಈ ಕಂಚ್ಯಾಣಿಯವರು.

---

೧. ಹಾಡುವ ಹಕ್ಕಿ : ಗಿಲ್ ಗಿಲ್ ಗಿಡ್ಡ ಪುಟ-೧೩ ಕಂಚ್ಯಾಣಿ ಶರಣಪ್ಪ.

೨. ಹಾಡುವ ಹಕ್ಕಿ : ಗಿಲ್ ಗಿಲ್ ಗಿಡ್ಡ ಪುಟ-೧೩ ಕಂಚ್ಯಾಣಿ ಶರಣಪ್ಪ.

"ಶ್ರದ್ಧೆಯಿಂದಲೆ ಸೂರ್ಯ ಗಗನದೇಶದಿ ನಿಂತು
ನೂರು ಲೋಕದ ಹಿಡಿದ ಶಕ್ತಿ ಪಡೆದಿಹನಯ್ಯ
ಶ್ರದ್ಧೆಯಿರುವದೆ ನಾಕ, ಅಶ್ರದ್ಧೆಯೇ ನರಕ
ಶ್ರದ್ಧೆಯಿದ್ದರೆ ಕೋಟಿ ದೇವರೆಮಗಾಳಯ್ಯ :" ೧

ಆತ್ಮಶ್ರದ್ಧೆ, ಗೌರವ ಹೆಚ್ಚಿಸುವ ಕುವೆಂಪುರವರ ಈ ಮಾತುಗಳು ಕಂಚ್ಯಾಣಿಯವರ ಬರವಣಿಗೆಯ ಗತಿಯನ್ನು । ಲಯವನ್ನು ಪ್ರತಿನಿಧಿಸುತ್ತವೆ. ಅವರದು ತುಂಬಾ ಶ್ರದ್ಧಾಪೂರ್ವಕ ರಚನೆಯ ಶೈಲಿ ಅಷ್ಟೇ ಆತ್ಮಿಯವಾದ ಬರಹ ಸಮುದಾಯದ ತೀವ್ರತೆಗಳಿಗೆ ಸ್ಪಂದಿಸುವ ಭಾಷೆ ಕಂಚ್ಯಾಣಿಯವರದು.

ಕಂಚ್ಯಾಣಿಯವರ ಕಥೆಗಳಲ್ಲಿ ಕಾವ್ಯ ಅಡಗಿರುವದು "ಮನದ ಮುದ್ರೆಯಂತೆ" ವಿಚಾರಗಳನ್ನು ತಿಳಿಸುವ, ಚಿಂತನೆಗೆ ತೊಡಗಿಸುವ, ವಿಶೇಷ ರೂಪವಾಗಿ ವಿಷಯಗಳನ್ನು ಕಟ್ಟುವ ವಿಶಿಷ್ಟ ಕಲೆ ಇವರದು ಯಾವಾಗಲೂ ಚೇತೋಹಾರಿಯಾದುದು.

ಪುಟ್ಟಿಯು ಕನಸನ್ನು ಕಂಡ ಬಗೆಯನ್ನು ಕಂಚ್ಯಾಣಿಯವರು ಮಕ್ಕಳಾಗಿ ಅನುಭವ ಪಡೆದವರು ಬೆಳದಿಂಗಳ ರಾತ್ರಿಯಲ್ಲಿ ಟಿಂವಕ್ಕಿಗಳ ಕೂಗು ಕೇಳಿದ ಪುಟ್ಟಿ ಕಿಟಕಿಯ ಬಳಿ ಬಂದು ಮೇಲೆ ಚಂದಿರನನ್ನು ನೋಡಿದಳು.

"ಬೆಳ್ಳಿಯ ಚಂದಿರ ಬೆಳಗುತ್ತಿದ್ದ
ಚುಕ್ಕೆಗಳೊಡನೆ ಆಟ ಆಡುತ್ತಿದ್ದ
ನೋಡದ ಹಿಂದೆ ಸರಿಯುತ್ತಿದ್ದ
ಕಾಂತಿಯಿಂದ ಕಿಲಿಕಿಲಿ ನಗುತ್ತಿದ್ದ." ॥
ಚುಕ್ಕೆ ಚಂದಿರ ಬಂದಾನs
ಚಂದದ ಆಟ ಆಡ್ಯಾನ." । ೨

ಎಂದು ಚಂದಿರನ ಕನಸನ್ನು ಕಂಡು ಹಿರಿಹಿರಿ ಹಿಗ್ಗಿದ ಪುಟ್ಟಿ ಕುಣಿದು ಕುಪ್ಪಳಿಸಿದಾಗ, "ಪುಟ್ಟೀ ಪುಟ್ಟಿ । ಚಲುವಿನ ಚಿಟ್ಟಿ"॥ ಎನ್ನುವ ಚಂದಿರ, ಪುಟ್ಟಿಯನ್ನು ಮೋಡದ ಮೇಲೆ ಕುಳಿಸಿಕೊಂಡು ಹೋಗುವ ಸಂಭ್ರಮ ನೋಡಿ ದಂಗಾದ ಪುಟ್ಟಿ ತಾಯಿಯನ್ನು ಕರೆಯುವ ವಿಧಾನ ವಿಸ್ಮಯ.

"ಅಮ್ಮ ! ಅಮ್ಮ ! ನಾನು ಇಲ್ಲಿರುವೆ
ಇಲ್ಲಿ ಬೆಳ್ಳಿ ಬೆಟ್ಟ ಹಾಲಿನಹೊಳೆ ।
ಎಂಥ ಚಂದ । ನೋಡು ಬಾ ಅಮ್ಮ."॥ ೩

ಎಂದು ಕೂಗುವ ಪುಟ್ಟಿಯನ್ನು, ಮೈ ತಟ್ಟಿ "ಏಕೆ ಪುಟ್ಟಿ ?, ಕನಸು ಕಂಡೆಯಾ ? ಎನ್ನುವ ತಾಯಿಯ ಮಾತಿಗೆ, 'ಅದೆಲ್ಲ ಎಲ್ಲಿ ಹೋಯಿತು' ? ಎಂಬ ಮಗುವಿನ ಮುಗ್ದತೆಯನ್ನು ಚಿತ್ರಿಸುವ ಕಂಚ್ಯಾಣಿಯವರು ನಿಜವಾಗಿಯೂ ಮಾತೃ ಹೃದಯದವರು.

---

೧. ಪಾಂಚಜನ್ಯ ಪುಟ-೩೬ ಕುವೆಂಪು.
೨. ಚುಕ್ಕೆ ಚಂದಿರ : ಗಿಲ್ ಗಿಲ್ ಗಿಡ್ಡ ಪುಟ-೧೪ ಕಂಚ್ಯಾಣಿ ಶರಣಪ್ಪ.
೩. ಚುಕ್ಕೆ ಚಂದಿರ : ಗಿಲ್ ಗಿಲ್ ಗಿಡ್ಡ ಪುಟ-೧೫ ಕಂಚ್ಯಾಣಿ ಶರಣಪ್ಪ.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

ಕಂಬ್ಳ್ಯಾಶಿಯವರ ಶಿಶು ಕವಿತೆಗಳು ಅನುಭವಗಳ ಸ್ಪಷ್ಟ ಅಭಿವ್ಯಕ್ತಿ, ಸರಳ ಸಹಜವಾದ ಭಷೆ. ತಮ್ಮ ಬದುಕನ್ನು ಸವೆಯಿಸಲು ನಂಬಿರುವ ಮನೋಧರ್ಮದ ಚಿತ್ರಣಗಳು ಅವರ ಕವಿತೆಗಳಲ್ಲಿ ಮೂಡಿ ನಿಂತಿವೆ. ಅವರ ವ್ಯಕ್ತಿತ್ವವನ್ನು, ಭಾಷಾ ಶೈಲಿಯನ್ನು ಶಿಶು ಕವಿತೆಗಳು ಪ್ರತಿಬಿಂಬಿಸುತ್ತವೆ. ಕಂಬ್ಳ್ಯಾಶಿಯವರ ಕಾವ್ಯ ಜೀವನ ವಿಕಾಸದಂತೆ ಬೆಳೆಯುತ್ತ, ಹರಳಗುಟ್ಟಿ ದುಡಿಯುತ್ತ, ಸ್ಪಷ್ಟ ಭಾವದಲ್ಲಿ ಸಾಗುತ್ತವೆ.

ಕಂಬ್ಳ್ಯಾಶಿಯವರ ಕಥೆಯ ಹಂದರ ಬಲು ಸುಂದರ. ಅತಿ ಮಧುರ ಅವರು ಆಯ್ದುಕೊಳ್ಳುವ ಪಾತ್ರಗಳು ಸಹ ಮಣ್ಣಿನ ಸೊಗಡನ್ನು ಹೊಂದಿವೆ ಎಂದರೂ ಸರಿ. ಅವರ 'ಮಲ್ಲಿಗೆ ಮಾವ' ಕಥೆ ನಿದರ್ಶನವಾಗಿ ಗುರುತಿಸಬಹುದು.

"ತಿರುಗಲ ತಿಪ್ಪ ಎತ್ತಿನ ಮೇಲೆ ಹತ್ತಿಕೊಂಡು ಅತ್ತೆಯ ಮನೆಗೆ ಹೋಗುವ, ನಾಗರ ಪಂಚಮಿ ನಾಡಿಗೆ ದೊಡ್ಡದೆಮ್ಮ ತಿಪ್ಪನ ಹೆಂಡತಿ ತೌರು ಮನೆಗೆ ಹೋಗುವ ತಿಂಗಳಾದರೂ ಬರದ ಹೆಂಡತಿಯನ್ನು ಕರೆತರಲು ಹೋಗುವ ತಿಪ್ಪಗೆ ವಾಹನಗಳಿಲ್ಲ. ಎತ್ತಿನ ಗಾಡಿ ಗೂಡ ಇಲ್ಲ ಒಂದೇ ಒಂದು ಮುದಿ ಕಂಟಲಿ ಎತ್ತು ಮಾತ್ರ ಇತ್ತು. ಹುರುಪಿನಿಂದ ಎತ್ತಿನ ಮೇಲೆ ಕುಳಿತು ಹೋಗುವ ದೃಶ್ಯ ಮಾರ್ಮಿಕವಾದುದು".

ಕಂಬ್ಳ್ಯಾಶಿಯವರು ಗ್ರಾಮೀಣ ಜನರ ಬದುಕನ್ನು ಚಿತ್ರಿಸುತ್ತ ಅಲ್ಲಿಯ ವೈವಿಧ್ಯತೆಯನ್ನು ಸೆರೆಹಿಡಿಯುತ್ತಾರೆ, ಮಕ್ಕಳ ಮನಕ್ಕೆ ಮುಟ್ಟುವ ಹಾಗೆ ಚಿತ್ರಿಸುತ್ತಾರೆ.

ಹಳೆ ಎತ್ತು, ದೂರದ ದಾರಿ, ತಿಪ್ಪಗೆ ಬಲು ಬೇಸರ ಹೊತ್ತು ನೆತ್ತಿಗೆ ಬಂದು ಊರು ಮುಟ್ಟದೆ ಹಸಿವೆಯಿಂದ ಬಳಲಿದ. ಹೊಟ್ಟೆಯಲ್ಲಿ ಡೊಂಬರಾಟ ನಡೆದರೂ ಸಂಜೆ ಹೊತ್ತು ತಿಪ್ಪ ಅತ್ತೆ ಮನೆ ಸೇರಿದ ಮನೆಯಲ್ಲಿ ಸಂತಸ. ತಿಪ್ಪನ ಮುಖ ಕಂಡ ಹೆಂಡತಿಗೆ ತಿಳಿಯಿತು ।ಮುಖ ತೊಳೆಯಿರಿ। ಕೈಕಾಲು–ಮುಖ ತೊಳೆಯಿರಿ ಬಿಸಿ ಬಿಸಿ ಪಾಯಸ ಉಣ್ಣುವಿರಂತೆ ಎಂದಳು.

'ಅಡುಗೆಯ ಮನೆಯಲಿ ಘಮ ಘಮ ಪಾಯಸ
ತುಪ್ಪ ಅನ್ನ ಸಾರು'. ।
'ಮಮತೆಯ ಮಡದಿಯ ತಮ್ಮನು ತುಂಟನು
ಬಂದನು ಕುಣಿಯುತ್ತ
ಮಲ್ಲಿಗೆ ಊಟಕೆ ಬಂದನು ಮಾಮನು
ಎಂದನು ನಸುನಗುತ". ॥ ೧

ಹಸಿದಿದ್ದ ತಿಪ್ಪ 'ಮಲ್ಲಿಗೆ' ಶಬ್ದ ಕೇಳುತ್ತಲೆ ಬಾಯಲ್ಲಿ ನೀರು ಸುರಿಸಿದ್ದ ಹೆಂಡತಿ ಬೇಡವೆಂದರೂ, ಉಂಡರೆ ಮಲ್ಲಿಗೆಯನ್ನೆ ಊಟ ಮಾಡುತ್ತೇನೆ ಎಂದು ಹಠ ಹಿಡಿದ, ತಟ್ಟೆ ತಂದು ಮುಂದೆ ಇಟ್ಟಳು ಮಡದಿ, ದಾರಿಕಾಣದೆ ಬೆಳ್ಳನೆಯ ಮಲ್ಲಿಗೆ ಕಂಡ ತಿಪ್ಪ ಗಬಗಬ ತಿಂದು ಕತ್ತಿನಲ್ಲಿ ಸಿಕ್ಕು ಬಿಕ್ಕ ತೊಡಗಿದ. ಉಸಿರುಗಟ್ಟಿ ಕಣ್ಣು ಬೆಳ್ಳಗೆ ಮಾಡಿದ. ಇದನ್ನು ಕಂಡ ಕಿಡಿಗೇಡಿ ಕಿಟ್ಟ ತಿಪ್ಪನ ಕುತ್ತಿಗೆಯ ಮೇಲೆ ಬಲವಾಗಿ ಗುದ್ದಿದ ಕುತ್ತಿನಿಂದ ತಿಪ್ಪ ಪಾರಾದ. ಕಿಟ್ಟ ಮಾತು ಕೇಳಿ ನಾನು ಬೇಸ್ತು ಬಿದ್ದೆ ಎಂದು ಸಿಡಿಮಿಡಿಗೊಂಡನು. ಮಲ್ಲಿಗೆಯ ನೋಡಿರಧ, ಎಲ್ಲಿಯೂ ಉಂಡಿರದ ತಿಪ್ಪ, ತುಪ್ಪ ಸಕ್ಕರೆಯ ಸಿಹಿ ತಿಂಡಿ ಎಂದು ಬೇಸ್ತು ಬಿದ್ದು ನಾಚಿಕೆಯಿಂದ ಬಿಸಿ ಬಿಸಿ ಪಾಯಸ ಮತ್ತೆ ಉಣ್ಣುವನು.

---

೧. ಮಲ್ಲಿಗೆ ಮಾವ : ಹಾಡುವ ಹಕ್ಕಿ ಪುಟ–೯ ಕಂಬ್ಳ್ಯಾಳಿ ಶರಣಪ್ಪ.

ಕಿಡಗೇಡಿ ಕಿಟ್ಟ ಸುಮ್ಮನಿರದೆ,
ತಂಗಳು ರೊಟ್ಟಿ ತಿಂಗಳು ಮಜ್ಜಿಗೆ
ಗಮಗಮ ಎಂದಿತ್ತು !
ಮಾವನ ಊಟಕೆ ಎಂದೂ ಮರೆಯದ
ಮಲ್ಲಿಗೆಯಾಗಿತು !! ೧

ಎಂದು ಚಪ್ಪಾಳೆ ತಟ್ಟುತ್ತ ತಿಪ್ಪನ ಮುಂದೆ ಹಾಡಿ-ಹಾಡಿ ಕುಣಿಯತೊಡಗಿದನು. ಇದು ತಿಪ್ಪನಿಗೂ ಸಂತಸ ಸಂಗತಿಯಾಗಿ, ಹೆಂಡತಿಯ ಊರಿನಿಂದ ಬರುವದು, ತಿಪ್ಪಣ್ಣ ಈಗ ಮಲ್ಲಿಗೆ ಮಾವನಾಗಿಬಿಟ್ಟಿದ್ದ.

ಇದು ಕಂಚ್ಯಾಣಿಯವರ ಕಲ್ಪತ ಕಥೆಯಾದರೂ ನೈಜತೆಯನ್ನು ಒಳಗೊಂಡು ಮಕ್ಕಳಿಗೆ ಮುದನೀಡವಲ್ಲಿ, ಹಿರಿಯರಿಗೆ ಹಾಸ್ಯದ ಹೊನಲಾಗಿಸಿ ಕಥೆ ಕಾವ್ಯ ನಿರೂಪಣೆಯೊಂದಿಗೆ ಸ್ವಾರಸ್ಯವಾಗಿ ಮೂಡಿಬಂದಿದೆ.

ಕಂಚ್ಯಾಣಿಯವರ 'ಹಕ್ಕಿಯ ಹಾಡು' ಸಂಕಲನದಲ್ಲಿಯ ಎಲ್ಲ ಕಥೆಗಳು ನೀತಿ ಪ್ರಧಾನ ಕಥೆಗಳಾದರೂ, ಉಪದೇಶದ ಭಾರ ಎಳ್ಳಷ್ಟು ಇಲ್ಲ ಎಂದು ಸ್ವತಃ ಕಂಚ್ಯಾಣಿಯವರೇ ಹೇಲುತ್ತಾರೆ. ಶಾಲೆಯಲ್ಲಿ ಮಕ್ಕಳಿಗೆ ನೀತಿ ಕಥೆಗಳನ್ನು ಕಲಿಸುವದರ ಮೂಲಕ ಭ್ರಷ್ಟಾಚಾರವನ್ನು ದೂರಿಕರಿಸಬಹುದೆಂದು, ಮಕ್ಕಳು ಉತ್ತಮ ನಾಗರಿಕರಾಗಿ ಬೆಳೆಯಲು ಮಕ್ಕಳ ಸಾಹಿತ್ಯ ತಕ್ಕ ಸಂಸ್ಕಾರ ನೀಡುಬಲ್ಲುದು ಎಂಬುದು ಕಂಚ್ಯಾಣಿಯವರ ಅಭಿಮತ.

ಮಕ್ಕಳ ಎಳೆಯ ಮನಸ್ಸಿನ ಮೇಲೆ ನೈತಿಕ ಮತ್ತು ಧಾರ್ಮಿಕ ವಿಚಾರಗಳ ಗಾಢವಾದ, ಸ್ಪಷ್ಟವಾದ ತಿಳಿವಳಿಕೆಯ ಬೆಳಕನ್ನು ಬೀರಬೇಕೆಂದು ಕಂಚ್ಯಾಣಿಯವರ ಹಂಬಲ. ಮಕ್ಕಳ ಮನಸ್ಸು ಖಾಲಿ ಹಾಳೆ ಇದ್ದ ಹಾಗೆ. ಅಲ್ಲಿ ಗುರುಗಳು, ಹಿರಿಯರು, ತಂದೆ-ತಾಯಿಗಳು ಎಂತಹ ವಿಚಾರಗಳನ್ನು ಬಿತ್ತುತ್ತಾರೋ ಹಾಗೇ ಮುಂದೆ ಫಲ ದೊರೆಯುತ್ತದೆ. ತಂದೆ-ತಾಯಿಗಳು ಮಕ್ಕಳನ್ನು ಹೆತ್ತ ಮಾತ್ರಕ್ಕೆ ಮುಗಿಯಲಿಲ್ಲ. ಆದರೆ ಅವರನ್ನು ಹೇಗೆ ಬೆಳೆಸಬೇಕೆಂಬುದು ಅವರ ಜವಾಬ್ದರಿಯಾಗಿದೆ. ಈ ಉದ್ದೇಶದಿಂದ ಕಂಚ್ಯಾಣಿಯವರು ಮಕ್ಕಳ ಮನೋವಿಕಾಸಕ್ಕೆ ಶಿಶು ಕವಿತೆಗಳನ್ನು-ಕಥೆಗಳನ್ನು ಸಂಕಲನಗಳಾಗಿ ಹೊರತಂದಿದ್ದಾರೆ.

ಕಂಚ್ಯಾಣಿಯವರ ಮಕ್ಕಳ ಸಾಹಿತ್ಯವನ್ನು ಅವಲೋಕಿಸಿದಾಗ ಹಲವಾರು ಗುಣ ವಿಶೇಷತೆಗಳು ಕಂಡುಬರುತ್ತವೆ. ಹಾಗೆಯೇ ಅನೇಕ ಮಿತಿಗಳೂ ಕಾಣಿತ್ತವೆ. ಮಕ್ಕಳ ಕುರಿತ ಅನನ್ಯ ಕಾಳಜಿವಹಿಸಿ, ಅವರೇ ನಮ್ಮ ನಾಡಿನ ನಾಳಿನ ನಾಗರಿಕರು. ಅವರನ್ನು ಸರಿಯಾಗಿ ಬೆಳೆಸಿದರೆ ಒಳ್ಳೆಯದಾಗುತ್ತದೆ ಎಂಬುದನ್ನರಿತು ಅವರ ದೈಹಿಕ ಹಾಗೂ ಮನಸಿಕ ಬೆಳವಣೆಗೆಗೆ ಪೂರಕವಾದ ಮತ್ತು ಉತ್ತೇಜನಕಾರಿ ಸಾಹಿತ್ಯ ಸೃಷ್ಟಿಸಿದರು ಎಂದರೆ ತಪ್ಪಾಗದು.

ಕಂಚ್ಯಾಣಿಯವರು ಕಥೆಯ ವಸ್ತು ಆಯ್ಕ ಮಾಡಿರುವದು ಗ್ರಾಮೀಣ ಪರಿಸರದ ಪಕ್ಷಿ-ಪ್ರಾಣಿಗಳ ವಿಷಯಗಳೇ ಹೆಚ್ಚು. ಅವರ ಇನ್ನೊಂದು ಕಥೆ "ಹಾಡುವ ಹಕ್ಕಿ" ಮನಮಿಡಿಯವಂತಹದ್ದು.

---

೧. ಮಲ್ಲಿಗೆ ಮಾವ : ಹಾಡುವ ಹಕ್ಕಿ ಪುಟ-೧೧ ಕಂಚ್ಯಾಣಿ ಶರಣಪ್ಪ.

"ತೊಟ್ಟಿಲು ಪದಿ ಹೊಲದ ನಟ್ಟ ನಡುವೆ ಒಂದು ತುಗ್ಗಲಿ ಮರವಿದೆ ಅಲ್ಲಿ ಒಂದು ಗುಬ್ಬಿ ಒಚಿಟಿಯಾಗಿತ್ತು. ಮಕ್ಕಳು–ಮರಿ ಯಾರೂ ಇಲ್ಲ ಹಸಿವಾದಾಗ ಬೆಳೆದು ನಿಂತ ಪೈರನ್ನು ಕುಕ್ಕಿ ತಿನ್ನುವದು. ಹರುಷದಿಂದ ಹಳ್ಳದ ನೀರು ಕುಡಿದು ಇಂಪಾಗಿ ಹಾಡುತ್ತಿತ್ತು. ಒಂದು ಮೌಝಾವು ಆ ಹಕ್ಕಿ ಗೂಡು ಬಿಟ್ಟು ಹೊರಗೆ ಬಂದು ಟೊಂಗೆಯ ಮೇಲೆ ಕಳಿತಾಗ, ಗಿಡದ ಬುಡದ ಮುಳ್ಳು ಪೊದೆಯಲ್ಲಿ ಗೋದಿಯ ಕಾಳು ಬಿದ್ದಿರುವದನ್ನು ಕಂಡು ತಿನ್ನದ ಆಶೆ ಹೆಚ್ಚಾಗಿ ಫಕ್ಕನೆ ಕಾಳು ಕಟ್ಟಿ ಹೊರಕ್ಕೆ ಬರುವಾಗ ಅದರ ಕಾಲಿಗೆ ಮುಳ್ಳು ಚುಚ್ಚಿ ರಕ್ತ ಚಿಲ್ಲನೆ ಚಿಮ್ಮಿತು.

ಕೆಂಪಾದ ರಕ್ತವನ್ನು ನೋಡಿ ತನಗಾದ ಗಾಯದ ನೋವನ್ನು ಮರೆತು,

ನನ್ನ ಕುಂಕುಮಾ ನೋಡು ।
ನನ್ನ ಕುಂಕುಮಾ ನೋಡು ।

ಎಂದು ದನಿ ತೆಗೆದು ಹಾಡತೊಡಗಿತು. ಕೆಲವು ದಿನಗಳ ನಂತರ ಮುಳ್ಳು ಚುಚ್ಚಿದ ಗಾಯದಲ್ಲಿ ಕೀವು ತುಂಬಿ ನೋವು ಹೆಚ್ಚಾಗಿ,

ನನ್ನ ಗಂಧಾ ನೋಡು ।
ನನ್ನ ಗಂಧಾ ನೋಡು ।

ಎಂದು ಹರುಷಗೊಂಡು ಪತಪತನೆ ಕೀವು ತುಂಬಿದ ಗಾಯದಲ್ಲಿ ಗುಬುಗುಬು ಹುಳುಗಳು ಕಾಣಣಸಿದವು. ಆ ಹುಳುಗಳು ಕಚಕಚನೆ ಕಚ್ಚ ತೊಡಗಿದರೂ ಗುಬ್ಬಿಗೆ ಹುಳಗಳನ್ನು ನೋಡಿ ಅಚ್ಚರಿಯಾಯಿತು ಹುಳ ಕಚ್ಚುವ ಬಾಧೆಯನ್ನು ಮರೆತು,

ನನ್ನ ಮಕ್ಕಳ ನೋಡು ।
ನನ್ನ ಮಕ್ಕಳ ನೋಡು । ಎಂದು

ಹಿಗ್ಗಿನಿಂದ ಹಾಡತೊಡಗಿತು. ಈಗ ನೋವು ಹೆಚ್ಚಾಯಿತು. ನೋವಿನ ಸಂಕಟ ತಾಳಲಾರದೆ ಹಾಂ ಹಾಂ ಎಂದು ಒಂದೇ ಸಮನೆ ನರಳತೊಡಗಿತು. ತನ್ನ ನರಳುವ ದನಿ ಕೇಳಿ ತಾನೇ ಹರುಷಗೊಂಡು,

ನನ್ನ ಗಾನಾ ನೋಡು ।
ನನ್ನ ಗಾನಾ ನೋಡು ।

ಎಂದು ಬಿದ್ದುಕೊಂಡಲ್ಲೇ ಹಾಡತೊಡಗಿತು ಬರಬರುತ್ತ ಗಾಯ ದೊಡ್ಡದಾಗಿ ಗುಬ್ಬಿ ಸತ್ತೇಬಿಟ್ಟಿತು. ತಾನು ಸತ್ತು ನೆಲಕ್ಕೆ ಬಿದ್ದರೂ ಗುಬ್ಬಚ್ಚಿ ಹಾಡುವದನ್ನು ಬಿಡಲಿಲ್ಲ.

ನನ್ನ ನಿದ್ದಿ ನೋಡು ।
ನನ್ನ ನಿದ್ದಿ ನೋಡು ।

ಎಂದು ಸಣ್ಣ ದನಿಯಿಂದ ಹಾಡು ಹೇಳೂತ್ತಿತ್ತು.

ಹಾಡಿನ ಜಾಡನ್ನು ಹಿಡಿದು ದನಕಾಯುವ ಮಕ್ಕಳು ಓಡಿ ಬಂದು ಗುಬ್ಬಿ ಸತ್ತದ್ದನ್ನು ಕಂಡು ಮರುಗಿದರು. ಅದರ ಹಾಡು ಕೇಳಿ ಖುಷಿಯಿಂದ ಚಪ್ಪಾಳೆ ತಟ್ಟಿ, ಕಾಲಿಗೆ ದಾರ ಕಟ್ಟಿ ರೆಂಬೆಗೆ ತೂಗು ಹಾಕಿದರು. ಗಾಳಿಗೆ ಅತ್ತಿತ್ತ ತೂಗಿ ಮೋಜೆನ್ನಿಸಿ ಮತ್ತೆ.

ನನ್ನ ಜೋಕಾಲಿ ನೋಡು ।
ನನ್ನ ಜೋಕಾಲಿ ನೋಡು ।

ಎಂದು ಹಿಗ್ಗಿನಿಂದ ಹಾಡುತಲಿತ್ತು ಹೊಲಕ್ಕೆ ಬಂದ ರೈತ ಅದರ ಹಾಡನ್ನು ಕೇಳಿದ, ಅದನ್ನು ಹಾಗೆ ಬಿಡದೆ ನೆಲದಲ್ಲಿ ತಗ್ಗು ತೆಗೆದು ಮಣ್ಣುಮಾಡಿದ. ಈಗ ಗುಬ್ಬಿಗೆ ಒಂದು ತರಹದ ಸಮಾಧಾನ ಮತ್ತು ಹರುಷದಿಂದ ಶಾಂತ ಸ್ವರದಲ್ಲಿ.

ನನ್ನ ಗಚ್ಚಿನ ಮನಿ ನೋಡು ।
ನನ್ನ ಗಚ್ಚಿನ ಮನಿ ನೋಡು ।

ಹೀಗೆಂದು ಆ ಗುಬ್ಬಿ ಕುಣಿಯಲ್ಲಿಯೇ ಮಲಗಿ ಹಾಡು ಹೇಳುತ್ತಲೆ ಇದೆ. ಸತ್ತು ಮಣ್ಣುಗೂಡಿದರೂ ಪುಟ್ಟ ಹಕ್ಕಿ ಹಾಡು-ಹೇಳುವದನ್ನು ಬಿಟ್ಟಿಲ್ಲ ಇಂದಿಗೂ ತೊಟ್ಟಿಲು ಪದಿ ಹೊಲಕ್ಕೆ ಹೋಗಿ ಹಾಡು ಕೇಳಿ ಎಲ್ಲರೂ ಖುಷಿ ಪಡುತ್ತಾರೆ. ಎನ್ನುವ ಕಂಚ್ಯಾಣಿಯವರು ಸ್ವತಃ ಕಂಡು-ಉಂಡ ಅನುಭವದ ದೃಶ್ಯ "ಹಕ್ಕಿಯ ಹಾಡು".

ಹಕ್ಕಿಯ ಬದುಕು ಮಾನವ ಕುಲಕ್ಕೆ ಮಾದರಿಯಾದುದು ತನ್ನ ನೋವನ್ನು ಮರೆತು, ನೋವನ್ನೇ ಹಾಡಾಗಿ ಸ್ವೀಕರಿಸುವ ಹಕ್ಕಿಯ ಬದುಕು ಆದರ್ಶನೀಯ. ಕಂಚ್ಯಾಣಿಯವರ ಪರಿಸರದಲ್ಲಿ ಇಂತಹ ಹಲವಾರು; ಜನಪದ ನಂಬಿಕೆಯ ಕಥನ ಕವಿತೆಗಳಿಗೆ ವಸ್ತುವಾಗಿ ಸಿಗುತ್ತವೆ.

ಉಪದೇಶ ಹಾಗೂ ಬೋಧನೆಗಳು ಬದುಕನ್ನು ರೂಪಿಸುತ್ತವೆ. ವ್ಯಕ್ತಿಯ ಕ್ರಿಯಾಶಕ್ತಿಗೆ, ಬುದ್ಧಿಗೆ ನೆರವು ನೀಡುತ್ತದೆ ಇದರಿಂದ ಮನಸ್ಸು ಬೆಳೆಯುತ್ತದೆ ಹೇಗೆ ಬದುಕಬೇಕೆಂದು ತರಬೇತಿ ನೀಡುತ್ತದೆ. ಮನುಷ್ಯನ ಬುದ್ಧಿಶಕ್ತಿಯ ಹೇಗೆ ಬದುಕಬೇಕೆಂದು ತರಬೇತಿ ನೀಡುತ್ತದೆ. ಮನುಷ್ಯನ ಬುದ್ಧಿಶಕ್ತಿಯ ಬೆಳವಣಿಗೆಗೆ ಉಪದೇಶ ಮತ್ತು ಬೋಧನೆಗಳು ಪ್ರಮುಖ ಶಿಖರಗಳು, ಮಕ್ಕಳಲ್ಲಿ ಮತ್ತು ಯುವಕರಲ್ಲಿ ಇವುಗಳನ್ನು ತುಂಬುವದು ಶ್ರೇಷ್ಠ ಕೆಲಸ.

"ಮಕ್ಕಳು ಎಲೆಯ ಗಿಡದಂತೆ, ಜೇನು ಮೇಣದಂತೆ, ಅವರನ್ನು ತಿದ್ದುವದು ಸುಲಭ. ಒಳ್ಳೆಯ ಮೇಲ್ಪಂಕ್ತಿ ಗುರುಮುಖೇನ ಬರಬಹುದಾದ ವಿದ್ಯಾಭ್ಯಾಸ, ಹಸನಾದ ಮನೆಯ ವಾತಾವರಣ, ಸ್ವಚ್ಛವಾದ ಸಮಾಜ ಜೀವನ್ನ ಇವು ದೊರೆತಲ್ಲಿ ಮಗುವಿನಲ್ಲಿ ಉದಯವಾಗುತ್ತಿರುವ ಶಕ್ತಿ-ಸಾಮಾರ್ಥ್ಯಗಳು ಸಜೀವವಾಗಿ ಪರಿಪುಷ್ಟವಾಗಿ ಸನ್ಮಾರ್ಗದಲ್ಲಿ ವಿಕಾಸಗೊಂಡು ಬಲಿಯುತ್ತವೆ." ೧

---

೧. ಎನ್. ಪ್ರಲ್ಹಾದರಾವ್ : ಲೇಖನ ಕಲೆ ಪುಟ-೮೨.

"ಅಚಾರಕ್ಕರಸನಾಗು ನೀತಿಗೆ ಪ್ರಭುವಾಗು
ಮಾತಿನೊಳು ಚೂಡಾಮಣಿಯಾಗು । ನನಕಂದ
ಜ್ಯೋತಿಯೇ ಆಗು ಜಗಕೆಲ್ಲ." ॥

ಎನ್ನುವ ಜನಪದರ ಸಾಲುಗಳಿಗೆ ಬದ್ಧರಾಗಿ ಕಂಚ್ಯಾಣಿಯವರು ಮಕ್ಕಳಿಗೆ ಸಾಹಿತ್ಯ ಕೃಷಿ ಮಾಡಿಕೊಟ್ಟಿದ್ದಾರೆ.

"ಗಿಲ್ ಗಿಲ್ ಗಿಡ್ಡ" ಕಂಚ್ಯಾಣಿಯವರ ಕಥೆಗಳಲ್ಲಿ ವಿಶೇಷನಾದುದು ಹಾಗೂ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವದರೊಂದಿಗೆ ಹಾಸ್ಯದ ಹೊನಲನ್ನು ಹರಿಸುತ್ತದೆ. ಇದೊಂದು ಗಂಡ-ಹೆಂಡತಿಯರ ಮಧ್ಯ ಹೆಣೆದ ಕಥೆ ಕಾವ್ಯಮಯ ಸಿಟ್ಟಿನಿಂದ ಹೆಂಡತಿಯನ್ನು ಕೊಲ್ಲುತ್ತಾನೆ. ಆದರೂ ಅವಳು ಇವನ ಬೆಂಬಿಡದವಳು ಕೊನೆಗೆ ತಾನೇ ನಾಶವಾಗುವ ಗಿಡ್ಡನ ಕಥೆ ಸ್ವಾರಸ್ಯಕರವಾದುದು-ಕಂಚ್ಯಾಣಿಯವರ ಕೈ ಚಳಕದಿಂದ.

"ಹಿಂದೆ ನಮ್ಮೂರಲ್ಲಿ ಒಬ್ಬ ಗಿಡ್ಡನಿದ್ದ. ಗಿಡ್ಡ ಎಂದರೆ ಕುಳ್ಳ. ಆತ ಅತೀ ಕುಳ್ಳನಾಗಿದ್ದ ಎಲ್ಲರೂ ಅವನನ್ನು ಗಿಡ್ಡಾನೆಂದೇ ಕರೆಯುತ್ತಿದ್ದರು. ಇನ್ನೊಂದು ಸಂಗತಿ, ಅವನ ಹೆಂಡತಿಗೆ ಗಂಡನ ಹೆಸರು ಕೇಳಿದಾಗ ಗಿಡ್ಡ ! ಎಂದು ಕಿಲಕಿಲ ನಗುತ್ತಿದ್ದಳು. ಗಿಡ್ಡ ಕೋಪಗೊಂಡು ಅವಳ ಕೆನ್ನೆಗೆ ಜಗಿದು ಜಗಿದು ಬಾರಿಸುತ್ತಿದ್ದ ಅವಳಿಗೆ ಅದು ಮೋಜು.

ಒಂದು ದಿನ ಮುಂಜಾನೆ ಗಿಡ್ಡ ಕೋಣದ ಮೇಲೆ ಕುಳಿತು ತೋಟದ ತುಂಬಾ ಓಡಾಡಿ ಬಿತ್ತತೊಡಗಿದ ಹೊತ್ತು ನೆತ್ತಿಗೇರಿ ಬಾಯಾರಿ ಹಾಸಿವೆಯಿಂದ ಕಂಗಾತಾದನು. ಹೆಂಡತಿ ಬುತ್ತಿ ನೀರು ತಾರದ್ದಕ್ಕೆ ಕೋಪಗೊಂಡನು. ಆಗ ಹೆಂಡತಿ ಗಿಡ್ಡಾಅ ! ಗಿಡ್ಡಾ ! ಎಂದು ಅರಚುತ್ತ ಬಂದಳು. ಕೈಯಲ್ಲಿ ಕೊಡಲಿ ಹಿಡಿದು ಶಕ್ತಿಯಿಂದ ಅವಳ ಶಿರ ಕತ್ತರಿಸಿದನು. ಕುತ್ತಿಗೆ ದೂರ ಬಿದ್ದುಕೊಂಡು,

ಕಿಲ್ ಕಿಲ್ ಗಿಡ್ಡ ।
ಕಿಲ್ ಕಿಲ್ ಗಿಡ್ಡ ।

ಎಂದು ನುಡಿಯುತ್ತ ಕಿಲಕಿಲನೆ ನಗತೊಡಗಿತು ಇದರಿಂದ ಕೋಪಗೊಂಡ ಗಿಡ್ಡಾ ಅವಳನ್ನು ಕಡುದು ಚೂರು ಮಾಡಿ ಹೊಲದ ತುಂಬಾ ಬಿತ್ತಿದನು. ಕೆಲವು ದಿನಗಳಲ್ಲಿ ತೊಗರಿಯ ಗಿಡಗಳು ಹೊಲದ ತುಂಬ ಅಬ್ಬರವಾಗಿ ಬೆಳೆದು, ಕಾಯಿಗಳಾಗಿ ಗಾಳಿ ಬಿಟ್ಟಾಗ,

ಗಿಲ್ ಗಿಲ್ ಗಿಡ್ಡಾ ।
ಗಿಲ್ ಗಿಲ್ ಗಿಡ್ಡಾ ।

ಎಂದು ಕಾಯಿಗಳಿಂದ ಸದ್ದು ಬರತೊಡಗಿತು.

ಹಠಮಾರಿ ಹೆಂಡತಿ ತೊಗರಿಯ ಗಿಡವಾಗಿ ಬೆಳೆದದ್ದು ತಿಳಿತು, ಹಂಚಿಕೆಯಿಂದ ಕೂಡಲೆ ಕಟ್ಟದ್ದ ಕೊಣ ಬಿಚ್ಚಿ ತೊಗರಿಯ ಕಾಯಿಗಳನ್ನು ತಿನ್ನಲು ಬಿಟ್ಟ. ಎಲ್ಲ ತಿಂದ ನಂತರ ಸದ್ದು ನಿಂತಿತು ಗಿಡ್ಡನಿಗೆ ಸಮಾಧಾನವಾಯಿತು.

ಹುರುಪಿನಿಂದ ಕೋಣನ ಮೇಲೆ ಕುಳಿತು ರಭಸದಿಂದ ಮನೆಗೆ ಸಾಗಿದ ಆದರೆ,

ಹಂಯಿಕ್ ಹುಂಯಿಕ್ ಗಿಡ್ಡಾ ।
ಹಂಯಿಕ್ ಹುಂಯಿಕ್ ಗಿಡ್ಡಾ ॥

ಎಂದು ಕೋಣ ಒದರತೊಡಗಿತು. ಗಿಡ್ಡನಿಗೆ ಕೇಳುವದಾಗಲಿಲ್ಲ ಮನೆಗೆ ಬಂದವನೇ ತಡ ಕೋಣವನ್ನು ಮಾದಿಗನಿಗೆ ಕೊಟ್ಟು, ಅದನ್ನು ಕಡಿದು ಕೆರವು ಮಾಡಲು ತಿಳಿಸಿದ್ದನು. ತಣ್ಣಗೆ ಕುಳಿತನು.

ಕೆಲವು ದಿನಗಳ ನಂತರ ಸುಂದರ ಕೆರವನ್ನು ಮಾಡಿ ತಂದು ಕೊಟ್ಟ ಮಾದಿಗ, ನೋಡಿ ಹಿಗ್ಗಿನಿಂದ ಹಾಕಿಕೊಂಡು ಹೊಲಕ್ಕೆ ಹೊರಟನು.

ಚರ್ರ್ ಪರ್ರ್ ಗಿಡ್ಡಾ ।
ಚರ್ರ್ ಪರ್ರ್ ಗಿಡ್ಡಾ ॥

ಎಂಬ ಸದ್ದು ಹೆಜ್ಜೆ ಹೆಜ್ಜೆಗೂ ಕಾಡಿತು, ಕೆರವಾಗಿ ಕಾಡುವ ಹೆಂಡತಿ ಮೇಲೆ ಕೋಪಗೊಂಡು ಹಾದಿಯ ಬದಿಯಲ್ಲಿ ಬೀಸಾಕಿದನು ಹಿಂದೆ ಬರುವ ಅವನ ನಾಯಿ ಅವನ್ನು ಕಚ್ಚಿ ತಿಂದು,

ಕಂಯಿ ಕುಂಯಿ ಗಿಡ್ಡಾ ।
ಕಂಯಿ ಕುಂಯಿ ಗಿಡ್ಡಾ ॥

ಎಂದು ಒಂದೇ ಸಮನೆ ಕಿರುಚತೊಡಗಿತು. ನಾಯಿಯ ಹೊಟ್ಟೆ ಹೊಕ್ಕ ಹೆಂಡತಿಯ ಸಿಟ್ಟಿನಿಂದ ಗಪ್ಪನೆ ನಾಯಿಯನ್ನು ಹಿಡಿದು ಕಾಲುಗಳನ್ನು ಕಟ್ಟಿ ಬಾವಿಯಲ್ಲಿ ಎಸೆದನು, ನೀರು ಕುಡಿದು ನಾಯಿ ಸತ್ತು, ಮರುಗಳಿಗೆ,

ಟಮ್ ಟಮ್ ಗಿಡ್ಡ ।
ಟಮ ಟಮ್ ಗಿಡ್ಡ ॥

ಎಂಬ ಸದ್ದು ಬಾವಿಯಿಂದ ಕೇಳತೊಡಗಿತು. ಆ ಸದ್ದು ಗಿಡ್ಡನನ್ನು ಅಣಕಿಸುವಂತಾಯಿತು. ಬಾವಿ ಸೇರಿದ ಹೆಂಡತಿಯನ್ನು ಅಲ್ಲಿಯೇ ಹಿಚಕಬೇಕೆಂದು ದಢಂನೆ ಬಾವಿಗೆ ಹಾರಿದ, ಈಸಲು ಬಾರದ ಗಿಡ್ಡ ಬಾವಿಯ ತಳ ಸೇರಿದ ಅವನೊಂದಿಗೆ ಆ ಸದ್ದು ಮುಳುಗಿ ಹೋಯಿತು.

ಕಂಚ್ಯಾಣಿಯವರ ಕಥೆಯಲ್ಲಿ ಕಾವ್ಯ ನಿರೂಪಣಾ ಶೈಲಿ ಮೆಚ್ಚುವಂತಹದ್ದು. ಕೋಪದಿಂದ ವ್ಯಕ್ತಿ ತನ್ನನ್ನು ತಾನೇ ನಾಶಮಾಡಿಕೊಳ್ಳುತ್ತಾನೆ, ಕೋಪದಿಂದ ಎಂತಹ ಅನಾಹುತ ಆಗುತ್ತವೆಂಬುದನ್ನು ಮಕ್ಕಳ ಮನಸೂರೆಗೊಳ್ಳುವಂತೆ ಚಿತ್ರಿಸಿದ್ದಾರೆ. ಕಂಚ್ಯಾಣಿಯವರ ಈ ಪ್ರಯೋಗ ಕನ್ನಡ ಕಥಾಲೋಕಕ್ಕೆ ಒಂದು ಮಾದರಿಯಾಗಿ ನಿಂತಿದೆಯಲ್ಲದೆ ಇದೊಂದು ವಿಶಿಷ್ಟ ಪ್ರಯೋಗವೆಂದೇ ಹೇಳಬೇಕು.

# ಅಧ್ಯಾಯ ಆರು

# “ಕಂಚ್ಯಾಣಿಯವರ ಶಿಶು ಕಾವ್ಯ”

## ಅಧ್ಯಾಯ : ಆರು : ಶಿಶು ಪ್ರಾಸಗಳು :

ಮಾನವ ಜೀವನದಲ್ಲಿ ಭಾಷೆ ಪ್ರಮುಖ ಪಾತ್ರವಹಿಸುತ್ತದೆ. ಭಾಷೆ ಅಭಿವ್ಯಕ್ತಿಯ ಅತ್ಯಂತ ಮುಖ್ಯ ಸಾಧನ. ಜ್ಞಾನ ಸಂಪಾದನೆ, ಜ್ಞಾನ ಸಂರಕ್ಷಣೆ, ಜ್ಞಾನ ಪ್ರಸಾರಗಳು ಭಾಷೆ ರಹಿತ ಸ್ಥಿತಿಯಲ್ಲಿ ದೊರೆಯಲು ಸಾಧ್ಯವಿಲ್ಲ. ಅದಕ್ಕಾಗಿ ದಂಡಿಯು ಭಾಷೆಯ ಮಹತ್ವವನ್ನು ಈ ರೀತಿ ಹೇಳಿದ್ದಾನೆ.

“ಇದಮಂಧಂ ತಮಃಕೃತ್ಸಂ ಚಾಯೇತ ಭುವನ ತ್ರಯಂ
ಯದಿಶಬ್ದಾಹ್ವಯಂ ಜ್ಯೋತಿರಾ ಸಂಸಾರಾನ್ನದೀಪ್ಯತೇ ॥”

(ಈ ಪ್ರಪಂಚದಲ್ಲಿ ಭಾಷಾ ಪ್ರಕಾಶವಿಲ್ಲದಿದ್ದರೆ ಮೂರು ಲೋಕಗಳೂ ಕಗ್ಗತ್ತಲೆಯಿಂದ ತುಂಬಿರುತ್ತಿದ್ದವು) ಎನ್ನುವ ಮಾತಿಗೆ ಪೂರಕವಾಗಿ “ಕಂಚ್ಯಾಣಿಯವರ ಸಾಹಿತ್ಯ ರಚನೆಯಾಗದೆ ಇದ್ದರೆ ಮಕ್ಕಳ ಸಾಹಿತ್ಯ ಬಡವಾಗುತ್ತಿತ್ತು” ಅನ್ನುವದು ಸತ್ಯವೆಂದು ನನ್ನ ಅಭಿಮತ.

ಭಾಷೆ ಕೇವಲ ಸಂಪರ್ಕ ಸಾಧನವಲ್ಲ. ಅದು ಮೂಲತಃ ಜನರ ಭಾವೈಕ್ಯದ ಸಾಧನ. ಒಬ್ಬ ಮನುಷ್ಯನ ಅಭಿವ್ಯಕ್ತಿ ಸಾಧನೆಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಿಕೊಡುವದು ಭಾಷೆಯ ಇನ್ನೊಂದು ಕಾರ್ಯ ಪರಿಸರ ಬೀರುವ ಪ್ರಚೋದನೆಗೆ ವ್ಯಕ್ತಿಯ ಪ್ರತಿಕ್ರಿಯೆಯ ಬೇರೆ ಬೇರೆ ವಿಧಾನಗಳಲ್ಲಿ ಭಾಷೆಯೂ ಒಂದು ಎಂದಾದರೂ ಸಾಹಿತ್ಯ, ನೃತ್ಯ, ಸಂಗೀತ, ಚಿತ್ರಕಲೆ ಮೊದಲಾದವು ಅವಶ್ಯವಾಗಿ ಬೇಕು.

ಇಂಥ ಸರಳ ಭಾಷೆಯ ಪ್ರಯೋಗದಿಂದ ಮಕ್ಕಳ ಸಾಹಿತ್ಯದಲ್ಲಿ ಮೇರು ಸಾಧನೆ ಮಾಡಿರುವ ಕಂಚ್ಯಾಣಿಯವರ ‘ಶಿಶು ಪ್ರಾಸಗಳು’ ಈ ನಿಟ್ಟಿನಲ್ಲಿ ಗಟ್ಟಿ ನೆಲೆಯಾಗಿ ನಿಂತಿವೆ.

ಮಕ್ಕಳಿಗಾಗಿ ಬರೆಯುವದು ನಾವಂದುಕೊಂಡಂತೆ ಸುಲಭದ ಮಾತಲ್ಲ. ಅವರ ಆಶೆ-ಆಕಾಂಶೆ, ಬೇಕು-ಬೇಡ, ಕನಸು-ನನಸು ಮುಂತಾದ ಮಕ್ಕಳ ಮನೋಧರ್ಮದ ಪರಿಯನ್ನು ಅರಿತವರೇ ಮಕ್ಕಳ ಸಾಹಿತ್ಯ ರಚಿಸಬಹುದು.

“ಆಡುವ ಬನ್ನಿರಿ ಅಂದದ ಆಟ
ಅಂಗಳದಲ್ಲಿ ಆಡುವ ಆಟ
ಎಲ್ಲರು ಸೇರಿ ಆಡುವ ಆಟ
ಸಕ್ಕಾಸರಗಿ ಸುತ್ತುವ ಆಟ
ಕಳ್ಳೇ ಮುಳ್ಳೆ ತಿರುಗುವ ಆಟ।
ಗೆಳತಿಯರೆಲ್ಲರು ಕುಣಿಯುವ ಆಟ.॥ ೧

ಎನ್ನುವಲ್ಲಿ ಪ್ರಾಸಬದ್ದವಾದ ಲಯಗಾರಿಕೆ ಎದ್ದು ತೋರುತ್ತದೆ.

---

೧. ಗುಡು ಗುಡು ಗುಂಡ : ಅಂದದ ಆಟ ಪುಟ-೧೧ ಕಂಚ್ಯಾಣಿ ಶರಣಪ್ಪ.

ಆಡುವ ಮಕ್ಕಳಿಂದ, ಹಾಡುವ ಹಿರಿಯರಿಂದ ಶಿಶು ಪ್ರಾಸಗಳು ಒಂದು ರೂಪು ಪಡೆದುಕೊಂಡಿರಬೇಕು. ಬೆಳೆಯುವ ಮಕ್ಕಳಂತೂ ಶಿಶು ಪ್ರಾಸಗಳಿಗೆ ಮಾರು ಹೋಗುತ್ತವೆ.

ಮಕ್ಕಳ ಕಾವ್ಯವನ್ನು ಮುಖ್ಯವಾಗಿ ಎರಡು ವಿಧಗಳಲ್ಲಿ ಗುರುತಿಸಬಹುದು. ಒಂದು ರಂಜನಾತ್ಮಕ ಕವಿತೆಗಳು ಇನ್ನೊಂದು ಬೋಧನಾತ್ಮಕ ಕವಿತೆಗಳು. ಲಾಲಿಯ ಪದಗಳು, ಶಿಶು ಪ್ರಾಸಗಳು, ಅಭಿನಯ ಗೀತೆಗಳು ರಂಜನಾತ್ಮಕವಾಗಿ ಕಂಡುಬಂದರ, ಕಥನ ಕವಿತೆಗಳು, ಸಮುದಾಯ ಗೀತೆಗಳು, ಬೋಧನಾತ್ಮಕ ಕವಿತೆಗಳಲ್ಲಿ ಸೇರುತ್ತವೆ, ಹಾಗೆಯೇ ಶಿಶು ಪ್ರಾಸಗಳಲ್ಲಿ ಮತ್ತೆ ನಾವು ಸುಲಭವಗಿಸಿ ನೋಡಲು ನಾಲ್ಕು ಬಗೆಯಲ್ಲಿ ವಿಂಗಡಿಸುತ್ತೇವೆ.

- ಅರ್ಥವಿಲ್ಲದ ಪ್ರಾಸಗಳು
- ನಾಲಗೆ ತಿದ್ದಲು ಬಳಸುವ ನಾಲಗೆ ಹೊರಳಿಸುವ ಪದ್ಯಗಳು.
- ಚುಟುಕುಗಳು
- ಒಗಟುಗಳು.

ಕಂಚ್ಯಾಣಿಯವರು ಹೆಚ್ಚಿನ ಕವಿತೆಗಳನ್ನು ಪ್ರಾಸಬದ್ಧವಾಗಿ ರಚಿಸಿದರೂ ಅದು ಸಹಜವಾಗಿ ಮೂಡಿಬಂದಿದೆ. ಕೆಲವು ಪದ್ಯಗಳು ಅರ್ಥ ಒಳಗೊಂಡರೆ ಕೆಲವು ಅರ್ಥಗೌಣವಗಿವೆ. ಕಂಚ್ಯಾಣಿಯವರ "ಗುಡು ಗುಡು ಗುಂಡ" ಸಂಕಲನ ಮುಖ್ಯವಾಗಿ ಶಿಶು ಪ್ರಾಸಗಳನ್ನು ಹೊಂದಿದೆ ೧೯೯೮ ರಲ್ಲಿ ಮೊದಲ ಮುದ್ರಣ ಕಂಡ ಈ ಕೃತಿ ೨೦೦೮ ರಲ್ಲಿ ದ್ವಿತೀಯ ಮುದ್ರಣಗೊಂಡಿದೆ. ಇಲ್ಲಿಯ ಪ್ರತಿಯೊಂದು ಪ್ರಾಸ ಗೀತೆಗಳು ಸಚಿತ್ರಗೊಂಡು ಆಕರ್ಷಣೀಯವಾಗಿ ಮೂಡಿ ಬಂದಿದೆ.

"ಹಬ್ಬ ಬಂತು ಹಬ್ಬ ।
ಕಾಮನ ಸುಡುವ ಹಬ್ಬ।
ಲಬ್ಬೆ ಕುಟ್ಟೋ ಹಬ್ಬ ।
ಬಣ್ಣ ಉಗ್ಗೋ ಹಬ್ಬ ।
ಹೋಳಿ ಹುಣ್ಣಿಮೆ ಹಬ್ಬ ।
ಹಬ್ಬ ಬಂತು ಹಬ್ಬ।" ೧

ಎನ್ನುವ ಗೀತೆಯಲ್ಲಿ ಯಾವ ಅರ್ಥವನ್ನು ನೀಡದ ಕಂಚ್ಯಾಣಿಯವರು ಹೋಳಿಯ ಹಬ್ಬದ ಕಲ್ಪನೆಯನ್ನು ವ್ಯಕ್ತ ಪಡಿಸಿದ್ದಾರೆ. ಮಕ್ಕಳಲ್ಲಿ ಪರಂಪರೆಯನ್ನು ಮರುಕಳಿಸುವ, ಮುಂದುವರೇಸಿಕೊಂಡು ಹೋಗುವ ಧೋರಣೆಗಳಿರುವದನ್ನು ಕಾಣುತ್ತೇವೆ.

ಮಕ್ಕಳಲ್ಲಿ ರಾಷ್ಟ್ರಾಭಿಮಾನ, ದೇಶಪ್ರೇಮ, ಭಾವೈಕ್ಯತೆ, ಪರಧರ್ಮ ಸಹಿಷ್ಣುತೆ ಸಹೋದರತೆಯಂತಹ ಉದಾತ್ತ ಗುಣಗಳನ್ನು ಬಿತ್ತಿ ಆದರ್ಶ ಬದುಕನ್ನು ಬಾಳಲು ಸಹಾಯವಾಗುತ್ತದೆ. ಇಂಥ ಉದಾತ್ತ ಗುಣಗಳನ್ನು ಬಿತ್ತುವ ಕಾಯಕ ಕಂಚ್ಯಾಣಿಯವರದು.

---

೧. ಹೋಳಿ ಹಬ್ಬ : ಗುಡು ಗುಡು ಗುಂಡ ಪುಟ–೨೬ ಕಂಚ್ಯಾಣಿ ಶರಣಪ್ಪ.

"ಮನು ಮನುಜರಲ್ಲಿ ಮೇಲ್ಕೀಳು ಎಲ್ಲಿ !
ನೀನಿತ್ತ ಧರ್ಮಸಾರ !
ಕೊಲಲಾಗದೆಂದು ನಿಲುಗಡೆಗೆ ನಿಂದ ।
ದಯವಂತ ಶಾಂತಿಪೂರ." ॥ ೧

ಮೃದು ಸ್ವಭಾವದ, ಬಿಳಿಯ ಬಟ್ಟೆಯಂತೆ, ನಿರ್ಮಲ ಮನಸಿನ ಮೇಲೆ ಏನು ಅಚ್ಚು ಬಿತ್ತಿದರೂ ಅಳಿಯದೆ ಉಳಿಯುತ್ತದೆ. ಇದು ಕಂಚ್ಯಾಣಿಯವರು ಅರಿತಂಥ ಸಂಗತಿ. ಮಹಾವೀರನ ತ್ಯಾಗದ ಗುಣ, ಆಶೆಯನ್ನು ದೂರಿಕರಿಸಿದ ಬಾವ, ಘೋರ ತಪದ ಪರಿಣಾಮ, ರೋಷ ಕಿತ್ತೆಸೆದ, ಭ್ರಾಂತಿಯ ತೊರೆದು ನಿರ್ವಾಣ ಹೊಂದಿದ ಅವನ ಜೀವನ ಮೌಲ್ಯಗಳನ್ನು ವಿಶ್ಲೇಷಿಸುದ ಕಂಚ್ಯಾಣಿಯವರು ಮಕ್ಕಳಲ್ಲಿ ಆದರ್ಶವನ್ನು ಮೂಡಿಸಿದ್ದಾರೆ.

ಮಕ್ಕಳ ಮನೋಲೋಕದ ಭಾವಲಹರಿಗಳನ್ನು ಗುರುತಿಸಿ ಅವರ ಅಭಿರುಚಿಗಳನ್ನು ಸಂಸ್ಕಾರಗೊಳಿಸುವಂತಹ ಸಾಹಿತ್ಯ ರಚಿಸುವದಕ್ಕೆ ವಿಶೇಷವಾದ ಪ್ರತಿಭೆ ಬೇಕು ಬಾಲ್ಯದ ಮುಗ್ಧತೆ, ಬೆರಗುಗಳನ್ನು ಉಳಿಸಿಕೊಂಡಿರಬೇಕು ಅಂದಾಗ ಮಕ್ಕಳ ಮನಸ್ಸಿಗೆ ಮುಟ್ಟುತ್ತವೆ-ತಟ್ಟುತ್ತವೆ. ಇಂಥ ಗುನಧರ್ಮ ಕಂಚ್ಯಾಣಿಯವರಲ್ಲಿ ಹುಲುಸಾಗಿ ಬೆಳೆದು ನಿಂತಿದೆ.

"ಅರುಣ ಕಿರಣ ಜೋಡಿ
ಶಾಲೆಗೆ ಹೋದರು ಕೂಡಿ ।
ದೇವರ ಹಾಡನು ಹಾಡಿ
ಓದು ಬರಹ ಮಾಡಿ ।
ಬಗೆ ಬಗೆ ಆಟ ಆಡಿ
ಮನೆಗೆ ಬಂದರು ಓಡಿ।"೨

ಕಂಚ್ಯಾಣಿಯವರು ಶಿಶು ಗೀತೆಗಳನ್ನು ಪ್ರಾಸಬದ್ಧವಾಗಿ ಬರೆದಿರುವದನ್ನು ಗಮನಿಸಿದರೆ, ಅದು ಅವರ ಸಹಜತೆ ಪ್ರತೀಕ ಮತ್ತು ಯಾವ ಮಕ್ಕಳ ಕವಿಗಳು ಇವರಷ್ಟು ಸರಳ ಮತ್ತು ಸಹಜವಾದ ಶೈಲಿಯಲ್ಲಿ ರಚಿಸಿರುವದು ಕಂಡುಬರುವದಿಲ್ಲವೆಂದೇ ಹೇಳಬೇಕು. ಈ ಶಿಶು ಪ್ರಾಸಗಳು ಎರಡು ಸಾಲುಗಳಿಂದ, ಎಂಟು ಸಾಲುಗಳವರೆಗೆ ಇರುವದನ್ನು ನೋಡುತ್ತೇವೆ. ಈ ಪ್ರಾಸಗಳು ವಿಷಯವನ್ನು ಗುಟ್ಟಾಗಿ ಹೇಳದೆ ಎಲ್ಲವೂ ತೆರೆದ ಮನದಿಂದ ಬಿಚ್ಚುತ್ತ ಹೋಗುತ್ತವೆ ಕಂಚ್ಯಾಣಿಯವರು ಈ ಕ್ರಿಯೆಯಲ್ಲಿ ಮೇಲುಗೈ ಪಡೆದರು.

ಅರುಣ-ಕಿರಣ ಶಾಲೆಗೆ ಹೋಗುವ ಪರಿಯನ್ನು, ಪ್ರಾರ್ಥನೆಯನ್ನು ಮಾಡಿ ಓದಿನಲ್ಲಿ ತೊಡಗುವದು, ಆಟವಾಡಿ ಮನೆಗೆ ಬರುವದು. ಈ ಸಂಗತಿ ಮಕ್ಕಳಿಗೆ ಮಾರ್ಗದರ್ಶಿಯಾಗಿ ಮನದಲ್ಲಿ ನಿಲ್ಲುತ್ತದೆ. ಇದು ಕಂಚ್ಯಾಣಿಯವರ ಕಾವ್ಯ ಹೆಣೆಯುವಿಕೆಯ ಶೈಲಿ.

---

೧. ಮಹಾವೀರ : ನೂರೊಂದು ಕವಿತೆಗಳು ಪುಟ-೬೧ ಕಂಚ್ಯಾಣಿ ಶರಣಪ್ಪ.
೨. ಅರುಣ ಕಿರಣ : ಗುಡು ಗುಡು ಗುಂಡ ಪುಟ-೨೮ ಕಂಚ್ಯಾಣಿ ಶರಣಪ್ಪ.

"ಹಿಂಗs ಒಂದು ಊರಿತ್ತು ।
ಊರ ಮುಂದ ದಾರಿತ್ತು ॥
ದಾರಿ ಬದಿಗೆ ಬಾವಿತ್ತು ।
ಬಾವಿದಂಡಿಗೆ ಮರವಿತ್ತು ॥
ಮರದಲಿ ಕೋಳಿ ಕುಂತಿತ್ತು ।
ಕೊಕ್ಕೋ ಎಂದು ಕೂಗಿತ್ತು ॥
ಬೆಳ್ಳಂ ಬೆಳಗು ಆಗಿತ್ತು ।
ಹಿಂಗs ಒಂದು ಊರಿತ್ತು."॥೧

ಬೆಳಗನ್ನು ತಿಳಿಸುವ ಕೋಳಿಯನ್ನು ವರ್ಣಿಸುವ ಕಂಚ್ಯಾಣಿಯವರು ಪ್ರಾಸಕ್ಕೆ ಒತ್ತು ನೀಡಿದ್ದಾರೆ. ಮಕ್ಕಳಗೆ ಪರಿಸರವನ್ನು ಪರಿಚಯಿಸುವ ಈ ಶಿಶು ಗೀತೆ, ಒಂದು ಊರು, ಊರ ದಾರಿ, ದಾರಿ ಬದಿ ಬಾವಿ, ಬಾವಿ ಮ್ಯಾಲ ಮರ, ಮರದಲಿ ಕೋಳಿ ಕುಳಿತು ಕೂಗುವ ದೃಶ್ಯ ಸೂರ್ಯೋದಯನ್ನು ಚಿತ್ರಿಸಿ, ಜನಜೀವನ ಕಾಯಕದಲ್ಲಿ ತೊಡಗಲು ಹಚ್ಚುತ್ತದೆ. ಕಂಚ್ಯಾಣಿಯವರಲ್ಲಿ ಇಂಥಹ ಕಲ್ಪನೆಯ ಜಾಡು ಹಲವು.

"ಇರುವೆ ಇರುವೆ ನಾನು ಇರುವೆ ।
ಇರುವೆ ನನ್ನ ಹೆಸರು ಇರುವೆ ।
ಮನೆಯ ಮಾಡಿನಲ್ಲಿ ಇರುವೆ ।
ಗಿಡದ ರೆಂಬೆಯಲ್ಲಿ ಇರುವೆ ।
ಅಲ್ಲಿ ಇರುವೆ ಇಲ್ಲಿ ಇರುವೆ ।
ಎಲ್ಲ ಕಡೆಗೂ ಇದ್ದೆ ಇರುವೆ.।"೨

ಪ್ರಕೃತಿಯ ಆಗು-ಹೋಗುಗಳನ್ನು ತುಂಬಾ ಆಳವಾಗಿ ನೋಡಿರುವ ಕವಿ ಕಂಚ್ಯಾಣಿಯವರು ಸರ್ವಜ್ಞನಂತೆ; " ಆಡು ಮುಟ್ಟದ ಗಿಡಲಿಲ್ಲ ಸರ್ವಜ್ಞ ನುಡಿಯದ ವಿಷಯವಿಲ್ಲ" ಎನ್ನುವ ಹಾಗೆ ಪ್ರತಿಯೊಂದು ಸಂಗತಿಯನ್ನು ವಸ್ತು-ವಿಷಯವನ್ನು ಮಕ್ಕಳಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಇಲ್ಲಿಯ 'ಇರುವೆ' ಯು ತನ್ನ ಇರುವಿಕೆಯನ್ನು ವ್ಯಕ್ತಪಡಿಸುತ್ತದೆ" (ಅಸ್ಥಿತ್ವವನ್ನು) ಕಾಣದ ಅದೃಶ್ಯ ಶಕ್ತಿಯನ್ನು ಚಿತ್ರಿಸುತ್ತದೆ.

"ಮಕ್ಕಳ ಆಶಯ, ಅಭಿರುಚಿಗಳು ಮಾತೃ ಹೃದಯಕ್ಕೆ ಮಾತ್ರ ಗೊತ್ತಾಗುತ್ತದೆ. ತಾಯಿಯ ಅಂತಃ ಕರುಣ, ವಾತ್ಸಲ್ಯ ಪೂರಕ ಒಡನಾಟ ಮಗುವಿನಲ್ಲಿ ಉತ್ಸಾಹದ ಝುರಿಯನ್ನು ಚಿಮ್ಮಿಸುತ್ತದೆ. ಮತ್ತು ಹೊಸ ಪ್ರಪಂಚವನ್ನು ನಿರ್ಮಿಸುತ್ತದೆ. ತಾಯಿಯು ಮಗುವಿನ ಪಾಲಿಗೆ ಕಾಮಧೇನುವಾಗಿ ಕಂಡುಬರುತ್ತಾಳೆ. ಅವಳೇ ಮೊದಲ ಗುರು, ಮಗು ಮೊದಲು ಮನೆಯ ವಾತಾವರಣದಿಂದ ಶಾಲೆಗೆ ಬರುತ್ತದೆ. ಇಲ್ಲಿಯ ಶಿಕ್ಷಕರು ತಾಯಿಯ ವಾತ್ಸಲ್ಯದಲ್ಲಿ । ಮಮತೆಯಲ್ಲಿ ಮಿಂದು ಬಂದ ಮಕ್ಕಳಿಗೆ ಮಮತೆಯನ್ನು ನೀಡಬೇಕಾರುತ್ತದೆ. ಅಂದಾಗ ಮಾತ್ರ ಮಕ್ಕಳ ಶಾಲೆಯ ಪರಿಸರಕ್ಕೆ ಹೊಂದಿಕೊಳ್ಳುತ್ತಾರೆ" ಎನ್ನುವದು ಕಂಚ್ಯಾಣಿಯವರ ನುಡಿ.

---

೧. ಬೆಳ್ಳಂ ಬೆಳಗು : ಗುಡು ಗುಡು ಗುಂಡ ಪುಟ-೧೨ ಕಂಚ್ಯಾಣಿ ಶರಣಪ್ಪ.
೨. ಇರುವೆ : ಗುಡು ಗುಡು ಗುಂಡ ಪುಟ-೧೫ ಕಂಚ್ಯಾಣಿ ಶರಣಪ್ಪ.

"ಶಾಲೆಯಲ್ಲಿ ನನ್ನ ಗುರುಗಳೆಂಥ ಜಾಣರು ।
ಬಾಯತುಂಬ ನನ್ನ ಹೆಸರು ಕೂಗಿ ಕರೆವರು."। ೧

ಮನೆಯಿಂದ ಬಂದ ಮಗು ಶಾಲೆಯ ವಾತಾವರಣಕ್ಕೆ ಹೊಂದಿಕೊಂಡು ಗುರುಗಳಲ್ಲಿ ಪ್ರೀತಿಯನ್ನು ಕಾಣುತ್ತದೆ. ತನ್ನನ್ನು ಮುದ್ದಿನಿಂದ ಕರೆಯುವ ಮನೆಯವರಿಗಿಂತ ಶಾಲೆಯ ಶಿಕ್ಷಕರು ತನ್ನ ಹೆಸರನ್ನು ಕೂಗಿ ಕರೆಯುವದು ಮಗುವಿಗೆ ಸಂತಸ ನೀಡುತ್ತದೆ ಇದು ಕಂಚ್ಯಾಣಿಯವರಲ್ಲಿ ಕಾಣುವ ಮುಗ್ದ ಮಗುವಿನ ಭಾವ".

"ಅಪ್ಪ ಅಜ್ಜ ಕಲಿತ ಶಾಲೆ । ಅಣ್ಣ ಕಲಿತು ಮರೆತ ಶಾಲೆ ॥
ಅಕ್ಕ ಕಲಿತ ಹೋದ ಶಾಲೆ । ನಾನು ಕಲೆಯುತಿರುವ ಶಾಲೆ ॥
ಊರು ನಡುವೆ ಇರುವ ಶಾಲೆ । ಅದರ ಹೆಸರು ಧರ್ಮಶಾಲೆ ॥
ಬಣ್ಣ ಬಳಿಯದಂತ ಶಾಲೆ । ಸುಣ್ಣ ಕಾಣದಂತ ಶಾಲೆ ॥
ಸೋರುತಿಹುದು ತಲೆಯಮೇಲೆ । ಕೊಚ್ಚೆ ಕೊಳಚೆ ನೆಲದ ಮೇಲೆ ॥
ಹೇಗೆ ಇದ್ದರೇನು ಶಾಲೆ । ಇದೇ ನಮ್ಮ ಪಾಠ ಶಾಲೆ."॥ ೨

ಎನ್ನುವ ಕಂಚ್ಯಾಣಿಯವರು ಪರಂಪರೆಯನ್ನು ಚಿತ್ರಿಸುತ್ತಾರೆ. ತಮ್ಮ ಹಿರಿಯರೂ ಸಹ ಶಾಲೆಯನ್ನು ಕಲಿತು ಆನಂದಿಸಿದವರು ಎನ್ನುವದರೊಂದಿಗೆ ಅಂದಿನ ಹಾಗೂ ಇಂದಿನ ಶಾಲೆಗಳ ಸ್ಥಿತಿ-ಗತಿಗಳನ್ನು ವ್ಯಕ್ತಪಡಿಸಿ ವ್ಯಂಗ್ಯಮಾಡಿದರೂ ಆ ಶಾಲೆಯ ಮೇಲೆ ಪ್ರೀತಿ ಕಳೆದುಕೊಂಡಿಲ್ಲ, ಎಂದಿದ್ದಾರೆ. ಹಾಗೂ ಶಾಲೆಯ ಹಗ್ಗೆ ಕಾಳಜಿಯನ್ನು ವಹಿಸಲು ಹೇಳುವ ಮಾತುಗಳು ಸೂಚ್ಯವಾಗಿ ವ್ಯಕ್ತಗೊಂಡಿವೆ.

ಕಂಚ್ಯಾಣಿಯವರ "ಗುಡು ಗುಡು ಗುಂಡ" ಶಿಶು ಪ್ರಾಸಗಳ ಸಂಕಲನ (೪೩) ನಲವತ್ತು ಮೂರು ಶಿಶು ಗೀತೆಗಳನ್ನು ಒಳಗೊಂಡ ಸಚಿತ್ರ ಕೃತಿ ಅಂದವಾಗಿ ಮೂಡಿದ ಹಂದರ ಕಂಚ್ಯಾಣಿಯವರ ವಿವಿಧ. ಪ್ರಕಾರದ ಹರವುಗಳನ್ನು ಬಿತ್ತರಿಸುತ್ತದೆ

"ಸೊಂಡಿ ಗಣಪ ಬಂದಿದ್ದ ।
ಗಂಧದ ಬಟ್ಟು ಇಟ್ಟದ್ದ ॥
ಮಂಟಪದಾಗ ಕುಂತಿದ್ದ ।
ಉಚಿಡಿ ಕಡಬು ತಿಂದಿದ್ದ ॥
ಇಲಿಯ ಮೇಲೆ ಹತ್ತಿದ್ದ ।
ಸೊಂಡಿ ತಿರುವಿ ಹೊರಟಿದ್ದ." ॥ ೩

ಕಂಚ್ಯಾಣಿಯವರು ಮಕ್ಕಳಲ್ಲಿ ಗಣಪತಿಯ ಕಲ್ಪನೆಯನ್ನು ಈ ರೀತಿ ಮಾಡಿಕೊಡುವರು.

---

೧. ಗುರುಗಳೆಂಥ ಜಾಣರು : ನೂರೊಂದು ಕವಿತೆಗಳು ಪುಟ-೧೦೭ ಕಂಚ್ಯಾಣಿ ಶರಣಪ್ಪ.
೨. ನಮ್ಮ ಶಾಲೆ : ತೊಟ್ಟಿಲು ಗುಬ್ಬಿ ಪುಟ-೧೨ ಕಂಚ್ಯಾಣಿ ಶರಣಪ್ಪ.
೩. ಸೊಂಡಿ ಗಣಪ : ಗುಡು ಗುಡು ಗುಂಡ ಪುಟ-೭ ಕಂಚ್ಯಾಣಿ ಶರಣಪ್ಪ.

ಎಲ್ಲದಕ್ಕೂ ಮೊದಲು ವಿಘ್ನನಿವಾರಕನನ್ನು ನೆನೆಯುವಂತೆ ತಮ್ಮ ಸಂಕಲನದ ಮೊದಲನೆಯ ಶಿಶು ಪ್ರಾಸವಾಗಿ ವ್ಯಾಕ್ತಪಡಿಸಿದ್ದಾರೆ. ಗಣಪನ ಚಿತ್ರಣ ಮಗುವಿಗೆ ಮನದಟ್ಟು ಮಾಡುವ, ಸೊಂಡಿ ಗಣಪ, ಉಚಿಡಿ ಕಡಬು ತಿಂದಿದ್ದ, ಇಲಿಯ ಮೇಲೆ ಕುಂತಿದ್ದ ಎನ್ನುವಲ್ಲಿ ಸಾರ್ಥಕಗೊಂಡಿದೆ.

"ಅಜ್ಜನು ಬಂದನು ಮನೆಯೊಳಗೆ
ಗುಮಗುನು ಗುಟ್ಟುತ ಬಾಯೊಳಗೆ ।
ಪೆನ್ನನು ಹಿಡಿದನು ಕೈಯೊಳಗೆ
ಹಾಡನು ಬರೆದನು ಮಕ್ಕಳಿಗೆ."॥ ೧

ಕಂಚ್ಯಾಣಿಯವರು ಅನುಭವಿ ಶಿಕ್ಷಕರು, ಮಕ್ಕಳ ಒಡನಾಡಿಗಳು. ಅವರ ಕನಸುಗಳ ಆಳ-ಅಗಲಗಳನ್ನು ಅರಿತು ಬೆರೆತವರು. ಮಕ್ಕಳ ಬುದ್ಧಿ ಭಾವಗಳಿಗೆ ಸ್ಪಂದಿಸುವವರು. ಅದೇ ನಿಲುವಿನಲ್ಲಿ ನಡೆದವರು ಮಕ್ಕಳ ಸರ್ವ ಮುಖಗಳ ಬೆಳವಣಿಗೆಗಾಗಿ ಕಾವ್ಯ ರಚಿಸಿದರು ಸ್ವತಃ ಅಜ್ಜನಾದ ಕಂಚ್ಯಾಣಿಯವರು ಮಗುವಿಗೆ ತಾವು ಕಂಡ ಬಗೆಯನ್ನು ಹಾಗೂ ತಮ್ಮ ಕಾರ್ಯವೈಖರಿಯನ್ನು ಮೂಡಿಸಿದ್ದಾರೆ.

ಶಿಕ್ಷಕ-ಸಾಹಿತಿಗಳ ಜೊತೆಗೂಡಿ ವಿದ್ಯಾಭ್ಯಾಸ ಮಾಡುವ ಮಕ್ಕಳು ಸತ್ ಪ್ರಜೆಯಾಗುವದಲ್ಲಿ ಸಂಧೇಹವೇ ಇಲ್ಲ. ಇದರಿಂದ ಅವರಲ್ಲಿ ಪ್ರಾಮಾಣಿಕ ಹಾಗೂ ಸಂಸ್ಕಾರದ ಗುಣಗಳು ತುಂಬಿಕೊಳ್ಳಲು ಸಾಧ್ಯ. ಸಾಹಿತ್ಯ ಸಂಜೀವಿನಿ ಇದ್ದ ಹಾಗೆ. ಅದು ಉತ್ತಮವಾದುದನ್ನಲ್ಲದೆ ಕೆಟ್ಟದನ್ನು ಕೊಡುವದಿಲ್ಲ. ಸಾಹಿತ್ಯ ಸಂಸ್ಕಾರದಿಂದ ಒಬ್ಬ ವ್ಯಕ್ತಿಯು ಮಾನವೀಯ ಮೌಲ್ಯಗಳುಳ್ಳ ಮನವನಾಗಿ ರೂಪಗೊಳ್ಳುವಲ್ಲಿ ಫಲಕಾರಿಯಾಗಿದೆ ಮಕ್ಕಳು ಮೌಲ್ಯದಾಯಕ ಸಾಹಿತ್ಯವನ್ನು ಓದುವದರಿಂದ ಅವರಲ್ಲಿ ನೈತಿಕ, ಪ್ರಾಮಾಣಿಕ, ವಿನಯವಂತೆ,ವಿಧೇಯತೆಗಳು ತುಂಬಿ ಮಕ್ಕಳು,-ಯುವಜನತೆ ಗುಣವಂತರಗುತ್ತಾರೆಂದು ಕಂಚ್ಯಾಣಿಯವರ ಅಭಿಮತದ ಆಶಯವಾಗಿದೆ.

"ಚಿಂವ್ ಚಿಂವ್ ಗುಬ್ಬಿ ಗೂಡಕಟ್ಟಿ ।
ಗೂಡಿನಲ್ಲಿ ಮೊಟ್ಟೆ ಇಟ್ಟಿ ।
ಮೊಟ್ಟೇ ಒಡೆದು ಮರಿಗಳು ಹುಟ್ಟಿ ।
ಮರಿಗಳ ಬಾಯಿಗೆ ಗುಟುಕು ಕೊಟ್ಟಿ ।
ಮುದ್ದಿನ ಮರಿಗಳ ಮೈಕೈ ತಟ್ಟಿ ।
ಆಡಲು ಹಾಡಲು ಕಲಿಸಿಬಿಟ್ಟಿ ।
ಪಕ್ಕ ಬಲಿಯಲು ಹಾರಲು ಬಿಟ್ಟಿ." ॥೨

ಕಂಚ್ಯಾಣಿಯವರ ಕಾವ್ಯ ವಸ್ತು ನಮ್ಮ ಸುತ್ತಲು ಪರಿಸರ. ಆ ಪರಿಸರದಲ್ಲಿ ತುಂಬಿರುವ ಪಕ್ಷಿ, ಪ್ರಾಣಿ, ಪುಟ, ಪುಟ್ಟಿ, ಅಜ್ಜ, ಅಜ್ಜಿ, ಇಲ್ಲಿಯೂ ಸಹ ಗುಬ್ಬಿಯನ್ನು ಕುರಿತು ಹೇಳುವ ಶಿಶು ಕವಿ ಕಂಚ್ಯಾಣಿಯವರು, ಗೂಡಿನಲ್ಲಿ ಮೊಟ್ಟೆ ಇಟ್ಟು ಮರಿ ಮಾಡುವ, ಅವುಗಳಿಗೆ ಗುಟುಕು ಕೊಟ್ಟು, ಹಾಡು ಕಲಿಸಿ ಹಾರಲು ಬಿಡುವ ಗುಬ್ಬಿಯ ಪ್ರಯತ್ನಶೀಲ ಗುಣ ಮಕ್ಕಳಿಗೆ ಮಾದರಿಯಾಗಿದೆ.

---

೧. ಅಜ್ಜನ ಹಾಡು : ಗುಡು ಗುಡು ಗುಂಡ ಪುಟ-೧೯ ಕಂಚ್ಯಾಣಿ ಶರಣಪ್ಪ.
೨. ಚಿಂವ್ ಚಿಂವ್ ಗುಬ್ಬಿ : ಗುಡು ಗುಡು ಗುಂಡ ಪುಟ-೨೨ ಕಂಚ್ಯಾಣಿ ಶರಣಪ್ಪ.

"ಗುಡು ಗುಡು ಗುಡು ಗುಡು ಗುಡು ಗುಡು
ಗಗನ ನುಡಿಯತೊಡಗಿತು ।
ಫಳ ಫಳ ಫಳ ಫಳ ಫಳ ಫಳ
ಕೋಲ ಮಿಂಚು ಕುಣಿಯಿತು" ॥
"ತಟ ತಟ ತಟ ರಪ ರಪ ರಪ
ಮುಗಿಲು ಮಳೆಯ ಸುರಿಸಿತು ।
ಜುಳು ಜುಳು ಜುಳು ಜುಳು ಜುಳು ಜುಳು." ॥೧

ಕಂಚ್ಯಾಣಿಯವರು ಕ್ರಿಯಾಶೀಲ ಹಾಗೂ ಪ್ರಯತ್ನ ಶೀಲ ಬರಹಗಾರರು ಎನ್ನುವದಕ್ಕೆ ಮೇಲಿನ ಸಾಲುಗಳೆ ನಿದರ್ಶನ.

ಈ ಕವಿತೆಯ ಕುರಿತು ಹೇಳುವದಾದರೆ, ಮಹಾರಾಷ್ಟ್ರ ರಾಜ್ಯದ ಎರಡನೆಯ ತರಗತಿಯ ಪಠ್ಯದಲ್ಲಿ ಒಳಗೊಂಡ ಪದ್ಯ ಇಲ್ಲಿಯ ಪ್ರತಿಯೊಂದು ಪದಗಳು ಸರಳತೆಯ ಪ್ರಾಸನೊಂದಿಗೆ ಅನುಕರಣಿಯ ಪದಗಳ ವಿಶೇಷತೆಯನ್ನು ಹೊಂದಿದೆ.

ಕಂಚ್ಯಾಣಿಯರವ ಪದ ಪ್ರಯೋಗ ಮಕ್ಕಳು ಸರಾಗವಾಗಿ ಓದಿಸಿಕೊಂಡು ಹೋಗುವಲ್ಲಿ, ಅವರ ಮನಸ್ಸಿನಲ್ಲಿ ಉಳಿಯುವಲ್ಲಿ ಸಫಲಗೊಂಡಿವೆ. ಆಕಾಶದ ವೈಭವ ಮಳೆಗಾಲದಲ್ಲಿ ಹೇಗೆ ವೈಚಿತ್ರವಾಗಿ ಕಂಡು ಬಂದಿದೆ ಎನ್ನುವದಾಗಲಿ, ಗುಡು ಗುಡು, ಫಳ ಫಳ, ತಟ ತಟ, ರಪ ರಪ ಮಳೆಯ ಹನಿಗಳು ಕಂಚ್ಯಾಣಿಯವರನ್ನು ಹುರಿದುಂಬಿಸಿ ಆಟವಾಡಲು ತೊಡಗಿಸಿವೆ.

"ಬಿಳಿ ಬಿಳಿ ಬಟ್ಟೆ ನರಸಮ್ಮ
ಗರಿ ಗರಿ ಬಟ್ಟೆ ನರಸಮ್ಮ
ಚರಚರ ನಡೆಯುವ ನರಸಮ್ಮ ।
ಸವಿಸವಿ ಮಾತಿನ ನರಸಮ್ಮ
ಕುಲಕುಲು ನಗುವ ನರಸಮ್ಮ
ಮುದ್ದನು ಕೊಡುವ ನರಸಮ್ಮ." ॥ ೨

ಕಂಚ್ಯಾಣಿಯವರು ಸಾಮಾಜಿಕ ಜೀವನದ ಆಗು-ಹೋಗುಗಳನ್ನು ತಮ್ಮ ಶಿಶು ಗೀತೆಗಳಲ್ಲಿ ಹಿಡಿದಡುವ ಕಾರ್ಯ ವಿಶೇಷವಾದುದು, ಹಾಗೂ ಅದು ಮಕ್ಕಳ ಮನಸ್ಸಿಗೆ ಮುದ ನೀಡುವಂಥದ್ದು, ಅವರ 'ನರ್ಸಮ್ಮ' ಕವಿತೆ ಪ್ರಾಸ ಬದ್ಧವಾದರೂ ಒತ್ತಾಯಕ್ಕೆ ಮಣಿದದ್ದಲ್ಲ. ಸಹಜತೆಯಿಂದ ಕೂಡಿದೆ. ಆಸ್ಪತ್ರೆಯ ನರ್ಸು ತನ್ನ ವೇಷಭೂಷಣದ ಹಾಗೂ ನಡೆ-ನುಡಿಯಿಂದ ಎಲ್ಲರನ್ನು ಆಕರ್ಷಿಸುವ ವ್ಯಕ್ತಿತ್ವ ಆಕೆಯನ್ನು ಕಂಡ ಬಗೆಯನ್ನು ಕಂಚ್ಯಾಣಿಯವರು ಗುರುಗಿಸುವದರೊಂದಿಗೆ ಅವಳ ಸಾಮಾಜಿಕ ಜವಾಬ್ದಾರಿಯ ಅರಿವನ್ನು ಮೂಡಿಸಿದ್ದಾರೆ.

---

೧. ಜಗದ ಜಳಕ : ನೂರೊಂದು ಕವಿತೆಗಳು ಪುಟ-೧೨೪ ಕಂಚ್ಯಾಣಿ ಶರಣಪ್ಪ.
೨. ನರ್ಸಮ್ಮ : ಗುಡು ಗುಡು ಗುಂಡ ಪುಟ-೨೪ ಕಂಚ್ಯಾಣಿ ಶರಣಪ್ಪ.

"ಅಜ್ಜಿಗೆ ಬೇಕು ಅಳ್ಳಿಟ್ಟು
ಅಜ್ಜಗೆ ಬೇಕು ತಂಬಿಟ್ಟು
ಅಪ್ಪಗೆ ದೋಸೆ ರುಚಿಕಟ್ಟು
ನನಗೆ ಬಿಸಿಬಿಸಿ ಉಪ್ಪಿಟ್ಟು
ತಮ್ಮಗೆ ಚೀಪಲು ಚಾಕಲೆಟ್ಟು
ತಂಗಿಗೆ ಬೆಣ್ಣೆ ಬಿಸ್ಕಿಟ್ಟು." ೧

ಕಂಚ್ಯಾಣಿಯವರು ಮಕ್ಕಳಿಗೆ ಆಕರ್ಷಕವಾಗುವ ನಿಟ್ಟಿನಲ್ಲಿ ಶಿಶು ಪ್ರಾಸಗಳನ್ನು ರಚಿಸುವದರೊಂದಿಗೆ ಪರಂಪರಾಗತವಾಗಿ ಬಂದ ಸಂಪ್ರದಾಯಗಳನ್ನು ಬಿತ್ತರಿಸುತ್ತ ಹೋಗುತ್ತಾರೆ.

ಮಗುವಿನ ಅಳ್ಳಿಟ್ಟು, ತಂಬಿಟ್ಟು ರುಚಿಕಟ್ಟು ಎನ್ನುವದು ತಿಳಿಯದಿದ್ದರೂ, ಸಂದರ್ಭಕ್ಕೆ ತಕ್ಕಂತೆ ಹಬ್ಬ-ಹರಿದಿನಗಳಲ್ಲಿ ಆ ವಸ್ತುಗಳು ಬೇಕೇ ಬೇಕು ಎನ್ನುವ ಕಂಚ್ಯಾಣಿಯವರು ತಮಗೆ ತಿನ್ನಲು ಉಪ್ಪಿಟ್ಟು ಬೇಕೆಂದರೂ; ತಮ್ಮ, ತಂಗಿಗೆ ಚಾಕಲೆಟ್ಟು, ಬಿಸ್ಕಿಟು ಬೇಕೆನ್ನುವರು. ಇದು ಕಂಚ್ಯಾಣಿಯವರ ಮುಗ್ಧತೆಯ ಸಂಕೇತ.

ಕಂಚ್ಯಾಣಿಯವರು ಎಲ್ಲ ಪೀಳಿಗೆಗಳ ಜೊತೆಯಾಗಿ ಸಹಜೀವನ ಸಾಗಿಸಿದವರು. ಅಂಕುಡೊಂಕು ಕಾಣಿಸಿದಾಗ ತಿದ್ದಿ-ತೀಡಿ ಸರಳಗೊಳಿಸುತ್ತಾರೆ. ಹಳೆಯ ತಲೆಮಾರಿನ, ಹೊಸ ತಲೆಮಾರಿನ ಸಾಹಿತಿಗಳ ಜೊತೆಗೆ ಇವರ ಒಡನಾಟ ಇವರ ಶಿಶು ಸಾಹಿತ್ಯದಲ್ಲಿ ಸಂಪ್ರದಾಯದ ಸತ್ವವಿದೆ. ನೈತಿಕ, ಆಧ್ಯತ್ಮಕ, ಮಾನವೀಯ ಮೌಲ್ಯವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಶಬ್ದಗಳ ಸರಪಳಿಯಿದೆ, ಒಂದು ಶಬ್ದವನ್ನು ತೆಗೆಯಲೂ ಬರದು, ಸೇರಿಸಲು ಬರದು ಅಂಥ ಕಾವ್ಯ ರಚನಾ ಕೌಶಲ್ಯ ಕಂಚ್ಯಾಣಿಯವರದು.

"ಜೋಳ ಕುಟ್ಟೇನವ್ವ ಜೋಳ ಕುಟ್ಟೇನವ್ವ
ಜೋಳ ಕುಟ್ಟಿ ಕುಟ್ಟಿ ಕುಟ್ಟಿ
ಬಾನಾ ಮಾಡೇನವ್ವ ॥
ಗೋಧಿ ಕುಟ್ಟೇನವ್ವ ಗೋಧಿ ಕುಟ್ಟೇನವ್ವ
ಗೋಧಿ ಕುಟ್ಟಿ ಕುಟ್ಟಿ ಕುಟ್ಟಿ
ಹುಗ್ಗಿ ಮಾಡೇನವ್ವ ॥
ಭತ್ತ ಕುಟ್ಟೇನವ್ವ ಭತ್ತ ಕುಟ್ಟೇನವ್ವ
ಭತ್ತ ಕುಟ್ಟಿ ಕುಟ್ಟಿ ಕುಟ್ಟಿ
ಅನ್ನ ಮಾಡೇನವ್ವ." ॥ ೨

ಕಂಚ್ಯಾಣಿಯವರ ಕಾವ್ಯ ಜನಪದ ಸಿರಿ ಸತ್ವದಿಂದ ತುಂಬಿಕೊಂಡಿದೆ. ಬಯಲು ಸೀಮೆಯ ರೈತ ಕುಟುಂಬದ ಇವರು ಪಡೆದ ಪ್ರಭಾವವೇ ಅಂಥಹದ್ದು. ಜನಪದ ಸಾಹಿತ್ಯ ಬೆಳೆಯಬೇಕು ಬೆಳೆದದ್ದು ಬದುಕಿ ಉಳಿಯಬೇಕೆಂಬ ಕಾಳಜಿ ಕಂಚ್ಯಾಣಿಯವರದು.

---

೧. ಬೇಕು : ಗುಡು ಗುಡು ಗುಂಡ ಪುಟ-೩೨ ಕಂಚ್ಯಾಣಿ ಶರಣಪ್ಪ.
೨. ಕುಟ್ಟುವ ಹಾಡು : ಗುಡು ಗುಡು ಗುಂಡ ಪುಟ-೨೩ ಕಂಚ್ಯಾಣಿ ಶರಣಪ್ಪ.

ಇದಕ್ಕೆ ಪೂರಕವಾಗಿ ಬಿ.ಎಂ.ಶ್ರೀಯವರ ನುಡಿಯನ್ನು ಉದಾಹರಣೆಯಾಗಿ ಕೊಡಬಹುದು. "ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢ ಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವದೇ ಕಷ್ಟವಾಗಿದೆ. ನಾಶವಾಗುವದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವದು ಕನ್ನಡಿಗರ ಕರ್ತವ್ಯ, ಸಾಹಿತ್ಯ ಅಭಿಮಾನಿಗಳೂ, ನಾಡ ಪ್ರೇಮಿಗಳು ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಗಳಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದೂ ಗೂಡಿ ಒಂದು ದೊಡ್ಡ ಜಾನಪದ ಸಾಹಿತ್ಯ ಕೋಶವಾಗುವದು......." ಹೀಗೆ ಕಂಚ್ಯಾಣಿಯವರು ದೊಡ್ಡಾವರ ಮಾತಿನಿಂದ ಜನಪದ ಸಾಹಿತ್ಯದ ಆಶಯವನ್ನು ವ್ಯಕ್ತಪಡಿಸುತ್ತ ತಮ್ಮ ವಿನಯಪೂರ್ವಕವಾದ ಸೌಜನ್ಯತೆಯನ್ನು ತೋರಿಸುತ್ತಾರೆ. ಬಾಳಿನಲ್ಲಿ ಬರುವ ಆಸರೆಕೆ-ಬೇಸರಿಕೆ, ತವರುಮನೆ, ತಂದೆ-ತಾಯಿಯರ ಮಾಸದ ನೆನಪು, ಗರತಿಯ ಗುಣ-ಸ್ವಭಾವ.

ರೂಪ ವರ್ಣನೆಗಳು ಹಿತವಾಗಿ, ಮಿತವಾಗಿ, ಸರಸವಾಗಿ ಬೀಸುವಾಗ, ಕುಟ್ಟುವಾಗ ಹಾಡಿನ ಮೂಲಕ ಮೂಡುವದನ್ನು ವಿವರಿಸುವ ಧಾಟಿ, ಲಯ ಕಂಚ್ಯಾಣಿಯವರ ಕಾವ್ಯದ ಜೀವಾಳ.

"ಅಜ್ಜಿಯು ಸರಭರ
ಮೊಸರನು ಕಡೆದು
ಮಜ್ಜಿಗೆ ಮಾಡುವಳು ।
ಉಪ್ಪು ಜೀರಿಗೆ
ಸಾಂಬರ ಸೊಪ್ಪು
ಅಮ್ಮನು ಬೆರೆಸುವಳು." ॥ ೧

ಗ್ರಾಮೀಣ ಪ್ರದೇಶದ ಸೊಗಡನ್ನು ಬಿಂಬಿಸುವ ಕಂಚ್ಯಾಣಿಯವರು ಮುಂಜಾವಿನಲಿ ಎತ್ತು-ಎಮ್ಮೆಗಳನ್ನು ಹೊರಗೆ ಬಿಡುವದು, ಕಸ ಹೊಡೆಯುವದು ಹಾಲು ಹಿಂಡುವದು, ಮಜ್ಜಿಗೆ ಮಾಡುವದು ಮುಂತಾದ ಕಾರ್ಯಗಳಲ್ಲಿ ತೊಡಗುವ ದೃಶ್ಯ ಮನಮೋಹಕ.

"ಅಜ್ಜನು ರುಚಿರುಚಿ
ಮಜ್ಜಿಗೆಯನ್ನು
ಸುರುಸುರು ಸುರಿಯುವನು ।
ಅಮ್ಮನ ಜತೆಯಲಿ
ನುಚ್ಚು-ಮಜ್ಜಿಗೆ
ನಾನೂ ಉಣ್ಣುವೆನು." । ೨

ಭೂದೇವಿಯ ಒಡಲಲಿ ದುಡಿಯುವ ಒಕ್ಕಲು ಮಕ್ಕಳ ಆಹಾರದ ಕ್ರಮವನ್ನು ಚಿತ್ರಿಸುತ್ತ ಕಂಚ್ಯಾಣಿಯವರು, "ನುಚ್ಚು-ಮಜ್ಜಿಗೆ" ದೇಹದ ಆರೋಗ್ಯಕ್ಕೆ ಉತ್ತಮವಾದುದೆಂದು ತಿಳಿಯಪಡಿಸುತ್ತಾರೆ ಅಜ್ಜನು ಮಜ್ಜಿಗೆ ಸುರಿಯುವ ವಿಧಾನ ಇವರಿಗೆ ಬೆರಗುಮೂಡಿಸಿದೆ.

---

೧. ಮಜ್ಜಿಗೆ : ಗುಡು ಗುಡು ಗುಂಡ ಪುಟ-೨೩ ಕಂಚ್ಯಾಣಿಯವರು.
೨. ಮಜ್ಜಿಗೆ : ಗುಡು ಗುಡು ಗುಂಡ ಪುಟ-೨೩ ಕಂಚ್ಯಾಣಿಯವರು.

ಕಂಚ್ಯಾಣಿಯವರ ಕಾವ್ಯದಲ್ಲಿ ಜನಪದ ಸಂಸ್ಕೃತಿಯು, ಆಕಳ ಹಿಂದೆ ಕರು ಹೇಗೆ ಬಳುವಳಿಯಾಗಿ ಬರುತ್ತದೆಯೋ ಹಾಗೆಯೇ ಮೂಡಿಬಂದಿದೆ. ಗ್ರಾಮೀಣರ ಧೈವ ಭಕ್ತಿ, ತವರುಮನೆ, ಸರಸ–ವಿರಸ, ಆಸರಿಕೆ–ಬೇಸರಿಕೆ, ಹೀಗೆ ಬದುಕಿನ ಸಮಗ್ರ ಭಾವಗಳ ಅಭಿವ್ಯಕ್ತಿಯನ್ನು ಕಾಣಿತ್ತೇವೆ. ಕಂಚ್ಯಾಣಿಯವರ ಮುಖ್ಯ ಉದ್ದೇಶ, ಮುಂದಿನ ಪೀಳಿಗೆಯು ಜನಪದ ಸಾಹಿತ್ಯದ ಪ್ರಾಮುಖ್ಯತೆಯನ್ನು ತಿಳಿಸುಕೊಂಡು, ಜೀವನ ಮೌಲ್ಯಗಳನ್ನು ಅನುಸರಿಸಲಿ ಎನ್ನುವದರೊಂದಿಗೆ ಅವರಲ್ಲಿರುವ ಜನಪದ ಸಂಸ್ಕೃತಿಯ ಕುರಿತ ಕಾಳಜಿಗೆ ತಲೆಬಾಗಬೇಕಾಗುತ್ತದೆ.

ಕಂಚ್ಯಾಣಿಯವರ ಶಿಶು ಪ್ರಾಸಗಳು ಮಕ್ಕಳ ಬದುಕಿಗೆ ಮಾರ್ಗದರ್ಶಿಯಾಗಿವೆ. ಶಿಕ್ಷಕ ವೃತ್ತಿಯ ಕಂಚ್ಯಾಣಿಯವರು ಮಗುವಿನ ಭಾವನೆಗೆ ಅನುಗುಣವಾಗಿ, ಅವರ ಕಲಿಕೆಗೆ ಪೂರಕವಾಗಿ ಶಿಶು ಗೀತೆಗಳನ್ನು ರಚಿಸಿರುವ ಕಾವ್ಯ ಶೈಲಿ ಅದ್ಭುತವಾದುದು.

"ನಿನ್ನೆಯೇ ಬುಧವಾರ
ಮೊನ್ನೆ ಮಂಗಳವಾರ
ಸುರುವಿನ ಇರುವದು ಸೋಮವಾರ ।
ಈ ದಿನವೆ ಗುರುವಾರ
ನಾಳೆ ಶುಕ್ರವಾರ
ನಾಡಿದ್ದು ಶನಿವಾರ ಸಂತೆವಾರ ।
ಕೊನೆಯಲ್ಲಿ ರವಿವಾರ ರಜೆಯವಾರ." । ೧

ಮನೆಯಿಂದ ಶಾಲೆಗೆ ಬರುವ ಮಕ್ಕಳು ಹಲವು ಹುಮ್ಮಸ್ಸಿನ ಭಾವನೆ ಹೊಂದಿದವರಾಗಿರುತ್ತಾರೆ. ಅಂಥ ಮಕ್ಕಳಿಗೆ ಪಾಠ ಮಾಡುವ ವೈಖರಿ ಎಲ್ಲರಿಗೂ ಸುಲಭವಾದುವಲ್ಲ. ಅದನ್ನು ಕಂಗತ ಮಾಡಿಕೊಂಡವರು ಮಾತ್ರ ಮಗುವಾಗಿ ಪಾಠ ಮಾಡಾಲು ಸಾಧ್ಯ. ಇಲ್ಲಿಯ ವಾರಗಳನ್ನು ಗುರುತಿಸುವ, ಕಲಿಸುವ ವಿಧಾನ ಕಂಚ್ಯಾಣಿಯವರ ಕಾವ್ಯ ಶಕ್ತಿಯನ್ನು ವ್ಯಕ್ತಪಡಿಸುತ್ತದೆ.

"ಆರು ಮೂರು ಅಣ್ಣಾ–ತಮ್ಮ ।
ಏತಕೆ ಜಗಳ ಮಾಡುವರಮ್ಮ ॥
ಆರರ ಮುಖವು ಆಚೆ ಕಡೆಗೆ ।
ಮೂರರ ಮುಖವು ಈಚೆ ಕಡೆಗೆ ॥
ಬೆನ್ನಿಗೆ ಬೆನ್ನು ತಾಕಿಸಿ ಹೀಗೆ ।
ಒಬ್ಬರಿಗೊಬ್ಬರು ನೋಡದ ಹಾಗೆ ॥
ಈಗವರಾದರು ಮೂವತ್ತಾರು ।
ಅವರಿಗೆ ಬುದ್ಧಿ ಹೇಳುವರಾರು. ?"೨

೧. ವಾರಗಳ : ಗುಡು ಗುಡು ಗುಂಡ ಪುಟ–೨೯ ಕಂಚ್ಯಾಣಿ ಶರಣಪ್ಪ.
೨. ಮೂವತ್ತಾರು : ಗುಡು ಗುಡು ಗುಂಡ ಪುಟ–೩೪ ಕಂಚ್ಯಾಣಿ ಶರಣಪ್ಪ.

ಕಂಚ್ಯಾಣಿಯವರ ಶಿಶು ಪ್ರಾಸಗಳ ವಿಷಯವೇ ಸೊಗಸು. ಅದರಲ್ಲಿ ಸಾಮಾಜಿಕ ಪ್ರಜ್ಞೆಯಿದೆ, ಕಾಳಜಿಯಿದೆ ಸಹೋದರರಲ್ಲಿಯ ಒಡಕನ್ನು ಚಿತ್ರಿಸುತ್ತಾ, ಮೂವತ್ತಾರನ್ನು ಗುರುತಿಸಿ ಹೇಳುವ ಸಂಗತಿ ಮಕ್ಕಳಿಗೆ ಮನಸೂರೆಗೊಳ್ಳುತ್ತದೆ (೩೬) ಮೂವತ್ತಾರು ತದ್ವಿರುದ್ಧವದ ಬಗೆ. ಅದರಂತೆ ಬದುಕಿನಲ್ಲಿ ವಿರಸವಾಗದೆ ಸರಸದಿಂದ ಇರುವಂತೆ ಕರೆನೀಡಿದ್ದಾರೆ ಕಂಚ್ಯಾಣಿಯವರ ಹೆಚ್ಚಿನ, ಪ್ರಾಸಬದ್ಧ ಶಿಶು ಗೀತೆಗಳು ಮಗು ಥಟ್ಟನೆ ಅರಿತುಕೊಳ್ಳುವಲ್ಲಿ ಫಲಕಾರಿಯಾಗಿವೆ.

ಮಕ್ಕಳ ಆಟ–ಪಾಠಗಳಲ್ಲಿ ಪ್ರೀತಿಯನ್ನು ತೋರುತ್ತಾರೆ. ಹಾಗೆಯೇ ಮನೆಯವರು ಪ್ರೀತಿ ಬೇರೆ ಬೇರೆ ವಸ್ತು–ವಿಷಯಗಳ ಮೇಲೆ ಹೇಗೆ ವ್ಯಕ್ತಪಡಿಸುತ್ತಾರೆಂಬುದನ್ನು ಕಂಚ್ಯಾಣಿಯವರ ಮಾತುಗಳಲ್ಲೆ ನೋಡಿ ನಲಿಯಬೇಕು, ಕೇಳಿ ಕಲಿಯಬೇಕು.

"ಅಪ್ಪನ ಪ್ರೀತಿ ಎತ್ತಿನ ಮೇಲೆ
ಅಮ್ಮನ ಪ್ರೀತಿ ಎಮ್ಮೆಯ ಮೇಲೆ
ಅಜ್ಜನ ಪ್ರೀತಿ ಕುದುರೆ ಮೇಲೆ
ಅಜ್ಜಿಯ ಪ್ರೀತಿ ಆಕಳ ಮೇಲೆ
ಅಣ್ಣನ ಪ್ರೀತಿ ನಾಯಿ ಮೇಲೆ
ನನ್ನ ಪ್ರೀತಿ ಬೆಕ್ಕಿನ ಮೇಲೆ." । ೧

ಮಕ್ಕಳ ಮುದ್ದಿನ ಪ್ರಾಣಿ ಬೆಕ್ಕು ಅದನ್ನು ಪುಟ್ಟಿ ಪ್ರಿಯವಾಗಿ ಕಂಡರೆ ಅಣ್ಣ ನಾಯಿಯನ್ನು ಆದರಿಸುವ ಬಗೆ ಕುತೂಹಲಕಾರಿ. ಕಂಚ್ಯಾಣಿಯವರು ಸ್ವತಃ ಮಗುವಾಗಿ ನಿಂತುನೋಡುವ ಹಲವು ದೃಷ್ಟಿಕೋನಗಳು ಪರಿಣಾಮಕಾರಿಯಾಗಿ ಮೂದಿವೆ.

"ಗುಡು ಗುಡು ಗುಂಡ ದಡ ದಡ ಬಂದ ।
ಅಪ್ಪನ ಕಂಡ ಪಪ್ಪಪ್ಪ ಅಂದ ।
ಅಮ್ಮನ ಕಂಡ ಮಮ್ಮಮ್ಮ ಅಂಡ ।
ಅಜ್ಜನ ಕಂಡ ದದ್ದದ್ದ್ ಅಂದ ।
ಅಜ್ಜಿನ ಕಂಡ ಜಜ್ಜಜ್ಜ ಅಂದ ।
ಬಿಸ್ಕಿಟು ಕಂಡ ತಾತಾ ಅಂದ ।
ಕರ ಕರ ತಿಂದ ಹೈ ! ಹೈ ! ಅಂದ."॥ ೨

ಮಗು ತೊದಲು ನುಡಿಗಳಿಂದ ಮನೆಯವರನ್ನು ಗುರುತಿಸಿ ಕರೆಯುವ ರೀತಿ ಕಂಚ್ಯಾಣಿಯವರ ಈ ಗೀತೆಯಲ್ಲಿ ಸೊಗಸಾಗಿ ಮೂಡಿದೆ. ಸಂತಸ ತುಂಬಿದ ಮಗುವಿನ ಮನ, ಮರಿ ಕುಂಬಿಯಾಗಿ ವಿಹರಿಸುವ ಹಾಗೆ ಆನಂದದಿಂದ ಸಂಭ್ರಮಿಸುತ್ತ ಮನೆಯಲ್ಲ ಓಡಾಡುವದು, ಆಡುವದು, ನುಡಿಯುವದು ಎಲ್ಲರಿಗೂ ಹರುಷದಾಯಕ ಇಂಥ ಶಿಕ್ಷಕ ಸಾಹಿತಿ ಕಂಚ್ಯಾಣಿಯವರ ಶಿಶು ಕಾವ್ಯ ಚಿಗುರುವ ಹುಣಸೆ ಮರವಿದ್ದಂತೆ ಅವರೇ ಹೇಳುವಂತೆ "ಸಾಹಿತಿಯೂ ಶಿಕ್ಷಕನೂ–ಯಮಳರು" ಎಂದರೆ ತಪ್ಪಾಗಲಾರದು ಸಾಹಿತಿ–ಶಿಕ್ಷಕರಿಬ್ಬರ ಕಾರ್ಯವಿಧಾನ ಒಂದೇ ರೀತಿಯದು. ಶಬ್ದ ಸಂಪತ್ತನ್ನು ಇಬ್ಬರೂ ಲೋಕಾನುಭವದ ಜೊತೆಗೆ ತಮ್ಮದಾಗಿಸಿಕೊಳ್ಳಬೇಕಾಗುತ್ತದೆ ಎನ್ನುತ್ತಾರೆ.

---

೧. ಪ್ರೀತಿ : ಗುಡು ಗುಡು ಗುಂಡ ಪುಟ–೪೦ ಕಂಚ್ಯಾಣಿ ಶರಣಪ್ಪ.
೨. ಗುಡು ಗುಡು ಗುಂಡ : ಪುಟ–೪೩ ಕಂಚ್ಯಾಣಿ ಶರಣಪ್ಪ.

ಕಂಚ್ಯಾಣಿಯವರ ಶಿಶು ಪ್ರಾಸಗಳು ತಮ್ಮದೇ ಆದ ಲಯ, ಹಾಗೂ ಪ್ರಾಸವನ್ನು ಹೊಂದಿ ಮಕ್ಕಳ ಲೋಕಕ್ಕೆ ವಿಶೇಷ ಕೊಡುಗೆಯಾಗಿವೆ. ಬಸವಣ್ಣನವರನ್ನು ಐತಿಹಾಸಿಕ ಪುರುಷನೆಂದು ಪರಿಗಣಿ, ಹನ್ನೆರಡನೆಯ ಶತಮಾನದ ಸಮಕಾಲೀನ ಸಮಾಜದ ವಾಸ್ತವ ಚಿತ್ರದ ಜೊತೆಗೆ ಅವರ ವ್ಯಯಕ್ತಿಕ ಬದುಕನ್ನು ಕುರಿತು ಕಂಚ್ಯಾಣಿಯವರು ತಮ್ಮ ಖಂಡ ಕಾವ್ಯ ಬಸವ ಪ್ರದೀಪದಲ್ಲಿ ಇಪ್ಪತ್ತೊಂದು ಚೇಪದಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ಕರ್ನಾಟಕ ರಾಜ್ಯವಾಗಿ ನಾಮಕರಣಗೊಂಡ ವರ್ಷ ೧೯೭೩ ನವ್ವಂಬರ್ ೧ ರಂದು ಕೃತಿ ಪ್ರಕಟವಾಗಿ ಇಲ್ಲಿಯವರೆಗೆ ಐದು ಮುದ್ರಣ ಕಂಡಿದೆ ಬಸವಣ್ಣನವರ ಜನನವನ್ನು ಕುರಿತು ಪ್ರಾರಂಭಗೊಂಡ ಈ ಚೌಪದಿ ಅವರ ಇಡೀ ಬದುಕನ್ನು ಚಿತ್ರಿಸುತ್ತದೆ.

"ಕಲ್ಯಾಣ ಬೆಳಗಿದ ಕ್ರಾಂತಿಯ ದೀಪ ।
ಬಾಗೇವಾಡಿಯ ಬಸವ ಪ್ರದೀಪ ।
ಜಗವನು ಬೆಳಗುವ ನಂದಾದೀಪ ।
ಕನ್ನಡ ಕಣ್ಮಣಿ ರತ್ನ ಪ್ರದೀಪ." ॥ ೧

ಮಕ್ಕಳ ಮನಸ್ಸನ್ನು ಸೂರೆಗೊಂಡು ತಿಳುವಳಿಕೆ ನೀಡುವ ಒಂದು ಚಿಕ್ಕ ಕೃತಿ. ಇಲ್ಲಿ ಬಸವಣ್ಣನವರ ಸಂಕ್ಷಿಪ್ತ ಪರಿಚಯದೊಂದಿಗೆ ಸಾಧನೆಯ ವೃತ್ತಾಂತವಿದೆ. ಹಿಂದೆ ಬಾಗೇವಾಡಿ ಪಟ್ಟಣವಾಗಿತ್ತು. ಅಲ್ಲಿ ಮಾದರಸ-ಮಾದಲಾಂಬಿಕೆ ದಂಪತಿಗಳಿದ್ದರು. ಮಕ್ಕಳಲ್ಲದ ಮಾದಲಾಂಬಿಕೆ ಶಿವನನ್ನು ಪೂಜಿಸಿ ನಂದಿ ವ್ರತವನ್ನು ಮಾಡುತ್ತಿದ್ದಳು, ಇದರ ಫಲದಿಂದ ಬಸವಣ್ಣನವರ ಜನನವಾಯಿತು. ಜಾತವೇದ ಮುನಿಗಳಿಂದ ಲಿಂಗದೀಕ್ಷೆ ನಡೆಯುವದು. ಎಂಟು ವರ್ಷ ತುಂಬಿದಾಗ ಮುಂಜಿವೆ ಪ್ರಸಂಗ. ಜನಿವಾರ ಹಾಕಿಕೊಳ್ಳುವದಿಲ್ಲವೆಂಬ ಬಸವಣ್ಣನ ಹಟ. ಬಿಜ್ಜಳನಾಳುತ್ತಿದ್ದ ಕಲ್ಯಾಣ ಪಟ್ಟಣದಲ್ಲಿ ಈತನ ಸೋದರಮಾವ ಬಲದೇವ ಮಂತ್ರಿಯಾಗಿದ್ದನು. ಇವನ ಮಗಳಾದ ಗಂಗಾಂಬಿಕೆಯನ್ನು ವಿವಾಹವಾಗಿ ಅಲ್ಲಿಗೆ ಹೋದನು. ಬಲದೇವನ ಅಕಾಲಿಕ ಮರಣದ ತರುವಾಯ ಬಿಜ್ಜಳನ ಭಂಡಾರದ ಮಂತ್ರಿಯಾದನು. ಜೊತೆಗೆ ಕಾಯಕದಾಸೋಹ ಮೊದಲಾದ ಜನಪರ ಕಾರ್ಯಗಳನ್ನು ಕೈಗೊಂಡನು ಜಾತಿ-ಮತ, ಲಿಂಗಬೇದ ಮರೆತು ಮನುಷ್ಯರೆಲ್ಲ ಒಂದು ಎಂದು ಶರಣ ಸಿದ್ಧಾಂತ ಪ್ರಸಾರಕನಾದನು. ಕೊನೆಗೆ ಕೂಡಲಸಂಗಮಕ್ಕೆ ಬಂದು ಅಲ್ಲೇ ಶಿವನಲ್ಲಿ ಒಂದಾದನು ಎಂದು ಕಂಚ್ಯಾಣಿಯವರು ಪದ್ಯಶೈಲಿಯಲ್ಲಿ ಮಕ್ಕಳ-ಹಿರಿಯರ ಮನಸ್ಸಿಗೆ ನಾಟುವಹಾಗೆ ಚಿತ್ರಿಸಿದ್ದಾರೆ. ಕಂಚ್ಯಾಣಿಯವರ ಶಿಶು ಪ್ರಾಸಗಳು ಹವಳದಲ್ಲಿ ಮುತ್ತುಪೋಣಿಸಿದಂತಿವೆ.

---

೧. ಬಸವಪ್ರದೀಪ ಪುಟ-೪ ಕಂಚ್ಯಾಣಿ ಶರಣಪ್ಪ.

# ಅಧ್ಯಾಯ ಏಳು

# 'ಕಂಚ್ಯಾಣಿಯವರ ಶಿಶು ಕಾವ್ಯ'

## ಅಧ್ಯಾಯ : ಏಳು ಸಮಾರೋಪ :

"ಸಾಹಿತ್ಯವು ಜ್ಞಾನಧೇನುವಿನ ಕೆಚ್ಚಲು. ಸಾಹಿತ್ಯದ ಮೇಲ್ಮೆಯಿಂದ ಜನಜೀವನದ ಮೇಲ್ಮೆಯುಂಟಾಗುವದು. ನಮ್ಮ ಸಾಹಿತ್ಯದಲ್ಲಿಯೂ, ನವಚೈತನ್ಯದ ಚಿಲುಮೆಯು ಚಿಮ್ಮತೊಡಗಿದೆ. ಕನ್ನಡ ನಾಡು ಕಣ್ತೆರೆಯುತ್ತಿದೆ. ಸಾಹಿತ್ಯ ಪ್ರಪಂಚದ ಸಾನತನ ಪುಣ್ಯಕಾಶದಲ್ಲಿ ತುಂಬಿದ್ದ ಕತ್ತಲೂ ಮೌನವೂ ಮೆಲ್ಲ ಮೆಲ್ಲನೆ ಸರಿಯತೊಡಗಿದೆ. ಪೂರ್ವದಿಗಂತದಲ್ಲಿ ನೂತನ ಚೇತನದ ಪಾವನನಾದ ಬಾಲಾರುಣ ಜ್ಯೋತಿಯು ಮೊಳೆದೋರಿದೆ. ಈ ನವೋದಯದಲ್ಲಿ ಕನ್ನಡ ಜನರ ಎದೆದಾದರೆಗಳು ಹಿಗ್ಗಿ ಅರಳುತ್ತಿವೆ." ಎಂಬ ಕುವೆಂಪುರವರ ನುಡಿಯಂತೆ ಕನ್ನಡ ಸಾಹಿತ್ಯ ಗಂಗೆ ತನ್ನ ಆಳ-ಅಗಲಗಳನ್ನು ಗುರುತಿಸಿಕೊಂಡು ಹರಿದು ಬರಲು ಪ್ರಾರಂಭವಾಗಿ ಅನೇಕ ಶತಮಾನಗಳು ಉರುಳಿ ಚರಿತ್ರೆಯಲ್ಲಿ ಸೇರಿಕೊಂಡಿದೆ. ಇಂತಹ ದೀರ್ಘಕಾಲಿನ ಸಾಹಿತ್ಯ ಪರಂಪರೆ, ಚಾರಿತ್ರಿಕ ದಾಖಲೆಯ ದೃಷ್ಟಿಕೋನದಿಂದ ಬಹು ಪ್ರಾಮುಖ್ಯತೆಯನ್ನು ಪಡೆಯುತ್ತದೆ.

ಯಾವುದೇ ಒಂದು ಸಾಹಿತ್ಯ ಕೃತಿ ರೂಪಗೊಂಡಾಗ ಆಕಾಲದ ಸಾಮಾಜಿಕ ಸ್ಥಿತ್ಯಂತರಗಳನ್ನು ಪ್ರತಿಧ್ವನಿಸುತ್ತದೆ. ಈ ಐತಿಹಾಸಿಕ ಗುಣಗಳು ಸಮಕಾಲೀನ ಮೌಲ್ಯಗಳು ಕೃತಿಯಲ್ಲಿ ಸ್ಥಾನ ಪಡೆಯುತ್ತವೆ. ಆಯಾ ಕಾಲದ ಸಾರ್ವಕಾಲಿಕ ಎನ್ನುವ ಉತ್ತಮ ಗುಣಗಳು ಮೌಲ್ಯಗಳು ಸಮಕಾಲೀನ ಜನತೆಯ ಬದುಕಿನ ಎಲ್ಲಾ ಮೌಲ್ಯಗಳು ಕೃತಿಗಳಲ್ಲಿ ಪ್ರತಿಫಲಿಸಿದರೂ ಕೃತಿಗಳು ಕವಿ ಬದುಕಿನ ಪರಿಸರದ ಚೌಕಟ್ಟಿನಲ್ಲಿ ಸೀಮಿತವಾಗಿ ವ್ಯಕ್ತವಾದಂತವುಗಳು ಇಂತಹ ಪಳುವಳಿಕೆಯ ಹಾದಿಯಲ್ಲಿ ಸಾಗಿಬಂದವರು ಕಂಚ್ಯಾಣಿ ಶರಣಪ್ಪನವರು.

ನಮ್ಮ ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿಯನ್ನು ಅವಲೋಕಿಸಿದಾಗ ತಿಳಿದುಬರುವದೇನೆಂದರೆ, ಪ್ರತಿಯೊಂದು ಸಾಹಿತ್ಯ ಪ್ರಕಾರಗಳು ಒಂದಲ್ಲ ಒಂದು ರೀತಿಯಲ್ಲಿ ಅನ್ಯ ಭಾಷೆಯ ಸಾಹಿತ್ಯದಿಂದ ಪ್ರಭಾವಗೊಂಡವು. "ಅನುಭವದ ಸುಂದರವಾದ ಅಭಿವ್ಯಕ್ತಿಯೇ ಸಾಹಿತ್ಯ" ಎಂಬ ಮಾತೊಂದಿದೆ. ಇಂತಹ ಅನುಭವ ದೊರೆಯುವದು ಸಮಾಜದಲ್ಲಿ ಸಮಾಜ ವಿಕಾಸಗೊಂಡಂತೆ ವ್ಯಕ್ತಿಯ ಅನುಭವವು ವಿಕಾಸವಾಗುತ್ತ ಹೋಗುತ್ತದೆ. ಹಾಗೆ ಭಾಷೆಯ ಜೊತೆಗೆ ಸಾಹಿತ್ಯವೂ ಸಹ ವಿಕಾಸಹೊಂದುತ್ತದೆ ಸಮಾಜದ ಸ್ಥಿತಿಗತಿಗೆ ಅನುಗುಣವಾಗಿ ಸಾಹಿತ್ಯ ಸೃಷ್ಟಿಯಾಗುತ್ತದೆ. ಇದೇ ಸಾಹಿತ್ಯದ ನಿಯಮ. ಈ ರೀತಿಯಲ್ಲಿ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ಮಕ್ಕಳ ಸಾಹಿತ್ಯ ಅಥವಾ ಶಿಶು ಸಾಹಿತ್ಯ ಬೆಳೆದು ಬಂದಿದೆ.

'ಅಜ್ಜನ ಹಾಡಿನ' ಅಜ್ಜನೆಂದೇ ಪ್ರಸಿದ್ಧರಾದ ಕಂಚ್ಯಾಣಿಯವರು ಮಕ್ಕಳ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅಪಾರವಾದುದು.

"ಅಜ್ಜನು ಅಂದದ ಹಾಡನು ಬರೆದು
ಅಜ್ಜಿಯ ಮುಂದೆ ಓದುವನು
ಹಾಡನು ಹಾಡಿ ಮೋಜನು ಮಾಡಿ
ತಿಂಡಿಯ ಬೇಡಿ ಕಾಡುವನು". ॥ ೧

ಎನ್ನುವಲ್ಲಿ ರಸಿಕತೆಯ ಕವಿ ಮಗುವಾಗಿ ಕಾಡುವ ನಿಲುವುಗಳು ವಿಸ್ಮಯ.

---

೧. ಅಜ್ಜನ ಹಾಡು : ನೂರೊಂದು ಕವಿತೆಗಳು ಪುಟ-೪೯ ಕಂಚ್ಯಾಣಿ ಶರಣಪ್ಪ.

ಕಂಚ್ಯಾಣಿಯವರು ಗ್ರಾಮೀಣ ಪ್ರದೇಶದ ರೈತ ಕುಟುಂಬದಲ್ಲಿ ಜನಿಸಿದವರು. ಈ ಕಾರಣದಿಂದಲೇ ಅವರಲ್ಲಿ ಜಾನಪದ ಪ್ರಭಾವ ಇರುವದನ್ನು ಕಾಣಿತ್ತೇವೆ. ತಮ್ಮ ಮನೆಯಲ್ಲಿ ತಾಯಿಯು ಹಾಡುವ ಬೀಸುವ ಹಾಡುಗಳು ಕುಟ್ಟುವ ಹಾಡುಗಳು ಅವರ ಮನಸ್ಸಿನ ಮೇಲೆ ಅಗಾಧ ಪರಿಣಾಮ ಮೂಡಿಸಿದಂತವುಗಳು ಹೀಗಾಗಿ ಅವರಲ್ಲಿ ಸಹಜವಾಗಿ ಮಗುವಿನ ಮುಗ್ಧತೆಯ ಕವಿತೆಗಳು ಹುಟ್ಟಲು, ರಚಿಸಲು ಸಾಧ್ಯವಾಗಿದೆ.

ವಿಜಾಪುರ ಜಿಲ್ಲೆಯ ಅನೇಕ ಮಕ್ಕಳು ಕವಿಗಳು ಮೂಲತಃ ಪ್ರಾಥಮಿಕ ಶಾಲಾ ಶಿಕ್ಷಕ ವೃತ್ತಿಯನ್ನು ಆದರಿಸಿದವರೆ. ಹೀಗಾಗಿ ಅವರಲ್ಲಿ ಮಕ್ಕಳ ಬಗ್ಗೆ ಕಳಕಳ ಹೆಚ್ಚು ಅಂಥವರ ಸಾಲಿನಲ್ಲಿ ಸಿಂಪಿ ಲಿಂಗಣ್ಣ, ಸಿಸು ಸಂಗಮೇಶ, ಶಂ.ಗು. ಬಿರಾದಾರ, ಈಶ್ವರಚಂದ್ರ ಚಿಂತಾಮಣಿ, ಫ.ಗು. ಸಿದ್ದಾಪೂರ, ಬಾ. ಕುಮಠೆ, ಮೊದಲಾದವರು ಸಾಲಿನಲ್ಲಿ ಶ್ರೀ ಕಂಚ್ಯಾಣಿ ಶರಣಪ್ಪನವರೂ ಪ್ರಮುಖರು ಅವರ ಸಾಲಿನಲ್ಲಿ ಎದ್ದು ನಿಲ್ಲುವ ವ್ಯಕ್ತಿತ್ವ ಇವರದು.

ಕಂಚ್ಯಾಣಿಯವರು ಬಡತನದ ಬೇಗೆಯಲ್ಲಿ, ಹಳ್ಳಿಯ ಪರಿಸರದಲ್ಲಿ ಶಿಕ್ಷಣ ಪಡೆದು ಅವರತ ಪ್ರಯತ್ನದಿಂದ ಜೀವನದಲ್ಲಿ ಏನನ್ನಾದರೂ ಸಾಧಿಸಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಕಂಚ್ಯಾಣಿಯವರದು ಸರಳ-ಸಾದಾ ಜೀವನ ಆಡಂಬರವಿಲ್ಲದ ಬದುಕು. ಎಂಬತ್ತರ ಇಳಿ ವಯಸ್ಸಿನಲ್ಲೂ ಎಳೆಯ ಹುಮ್ಮಸ್ಸು ಮಕ್ಕಳ ಸಾಹಿತ್ಯಕ್ಕೆ ಮುಡುಪಿಟ್ಟ ಕಾಯಕ ನಿರತ ಜೀವನ. ಮಗುವಿನೊಂದಿಗೆ ಮಗುವಾಗಿ ಹಾಡುತ್ತ, ಕುಣಿಯುತ್ತಾ, ನಗುತ್ತ ಕಾಲಕಳೆಯುವ ಮನಸ್ಸು. ೩೯ ವರ್ಷಗಳ ದೀರ್ಘ ಅವಧಿಯ ಶಿಕ್ಷಕ ವೃತ್ತಿಯುದ್ದಕ್ಕೂ ಮಕ್ಕಳ ಮನಸ್ಸನ್ನು ಅರಿತು-ಬೆರೆತು ಶಿಶು ಕಾವ್ಯ ರಚಿಸುವಲ್ಲಿ ಯಶಸ್ವಿಯಾದವರು. ಹಳ್ಳಿಯ ಜನರೊಂದಿಗೆ ಬೆರೆತು ಬದುಕು ನಡೆಸಿದ ಕಂಚ್ಯಾಣಿಯವರು ಜಾನಪದ ಜೀವನದ ಸೊಗಡು, ಭಾವ-ಭಾಷೆಗಳನ್ನು ತಮ್ಮ ಕವಿತೆಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಮಕ್ಕಳ ಸಾಹಿತ್ಯ ರಚನೆ ಅಷ್ಟೊಂದು ಸುಲಭದ ಕೆಲಸವಲ್ಲ. ಮಕ್ಕಳ ಮನಸ್ಸು, ಅಭಿರುಚಿ, ಆಸಕ್ತಿ ಇವುಗಳನ್ನು ಅನುಸರಿಸಿ ಬರೆಯುವದು ತೀರ ಕಠಿಣ ಮಕ್ಕಳ ಸಾಹಿತ್ಯ ದೂರದೃಷ್ಠಿಯನ್ನು ಹೊಂದಿರಬೇಕು. 'ಇಂದಿನ ಮಕ್ಕಳು ನಾಳಿನ ನಾಡಿನ ಪ್ರಜೆಗಳು' ಎನ್ನುವ ಮಾರ್ಗದರ್ಶಿಯಾಗಿರಬೇಕು ಎಂಬುವ ಹಲವು ಧೋರಣೆವುಳ್ಳುವರು ಕಂಚ್ಯಾಣಿಯವರು.

ಪಂಜೆ ಮಂಗೇಶರ 'ತೆಂಕಣಗಾಳಿ', ಬೇಂದ್ರೆಯವರ 'ಪಾತರಗಿತ್ತಿ ಪಕ್ಕ' 'ಕರಡಿ ಕುಣಿತ', ಸಿಸು ಸಂಗಮೇಶರ 'ಪುಟಚೆಂಡು' ಕುವೆಂಪುರವರ 'ಬೊಮ್ಮನ ಹಳ್ಳಿಯ ಕಿಂದರ ಜೋಗಿ' ಮೊದಲಾದ ಕವಿಗಳ ಶಿಶು ಸಾಹಿತ್ಯದ ನೆಲೆಯಲ್ಲಿ ಕಂಚ್ಯಾಣಿಯವರ ಕವಿತೆಗಳು ನಿಲ್ಲುತ್ತವೆ.

ಮಕ್ಕಳ ಮನಸ್ಸಿನ ಮೃದು ಭಾವದ ಕಂಚ್ಯಾಣಿಯವರು ತಾವು ಕಂಡು, ಅನುಭವಿಸಿದ ಸಂಗತಿಗಳನ್ನು, ತಾವು ಆಡಿ-ನಲಿದ ಪರಿಸರದಲ್ಲಿಯ ಪಶು-ಪಕ್ಷಿ, ಆಟ-ಪಾಠ, ನೋವು-ನಲಿವುಗಳನ್ನು, ಅಜ್ಜ-ಅಜ್ಜಿಯರ ಒಡನಾಟದ, ಪುಟ್ಟ-ಪುಟ್ಟಿಯ ವ್ಯಾತ್ಸಲ್ಯವನ್ನು ಕವಿತೆಗಳಾಗಿ ಹೊರಹೊಮ್ಮಿ ಅರಳಿ ಪರಿಮಳ ಬೀರಲು ಸಹಕಾರಿಯಾಗಿವೆ.

ಮಕ್ಕಳ ಸಾಹಿತ್ಯದ ಬೆಳೆಯನ್ನು ಹುಲುಸಾಗಿ ಬೆಳೆಯಲು ಕಂಚ್ಯಾಣಿಯವರು ಅನೇಕ ಬಗೆಯ ಮಕ್ಕಳ ಪದ ಪ್ರಯೋಗಗಳನ್ನು ಬಳಸಿ ಮಕ್ಕಳ ಮನೋವಿಕಾಸಕ್ಕೆ ಅನುವಾಗುವ ಸಾಹಿತ್ಯ ರಚಿಸಿರುವದು ಗಮನಾರ್ಹ.

ಕಂಚ್ಯಾಣಿಯವರು ಇಪ್ಪತ್ತು ಕೃತಿಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ಹನ್ನೆರಡು ಕವನ ಸಂಕಲನಗಳು, ಆರು ಕಥಾ ಸಂಕಲನಗಳು ಹಾಗೂ ಒಂದು ಖಂಡ ಕಾವ್ಯ ಇನ್ನೊಂದು ಗದ್ಯ ಚರಿತ್ರೆ. ಕಂಚ್ಯಾಣಿಯವರ ಕೆಲವು ಸಂಕಲನಗಳಿಂದ ಆಯ್ದು ನೂರೊಂದು ಕವಿತೆಗಳು ಮತ್ತೊಂದು ಕೃತಿ ಹೀಗೆ ಅವರ ಸಾಹಿತ್ಯವನ್ನು ಸಮಗ್ರವಾಗಿ ನೋಡಿದರೆ, ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಕಂಚ್ಯಾಣಿಯವರ ಕಾವ್ಯವನ್ನು ಮಾತ್ರ ಸ್ವೀಕರಿಸಲಾಗಿದೆ.

ಜಾನಪದ ಭಾವಸಿರಿಯ ತರಂಗಗಳು ಕಂಚ್ಯಾಣಿಯವರ ಶಿಶು ಕಾವ್ಯದ ಜೀವಾಳ. ಹಳ್ಳಿಯ ಮಕ್ಕಳೊಡನೆ ಅವರ ಒಡನಾಟ ಎಷ್ಟು ನಿಕಟವಾಗಿತ್ತು ಎನ್ನುವದಕ್ಕೆ 'ಅಜ್ಜನ ಹಾಡು' ಸಂಕಲನವೇ ನಿದರ್ಶನ.

"ಹರಿದಂಥ ಸಾಣಿಗೆ ಮುರಿದಂಥ ಛತ್ತರಿ<br>
ಜೋಗೇರು ಸರಿಪಡಿಸಿ ಕೊಟ್ಟಾರ ।<br>
ಹಳೆಯ ಡಬ್ಬಿಯ ಮುರಿದು ಹೊಸದಾಗಿ ಮಾಡ್ಯಾರ<br>
ಕಸದಲ್ಲಿ ರಸವನ್ನು ತೆಗೆದಾರ". ॥ ೧

ಎನ್ನುವ ಕಂಚ್ಯಾಣಿಯವರು, ಹೆಂಡಿಯ ಪಾಂಡವರು, ಕೌದಿ ಮೊದಲಾದದ ಕವಿತೆಗಳಲ್ಲಿ ಇದೇ ಜಾಡನ್ನು ಅನುಸರಿಸಿದ್ದಾರೆ. 'ಜಾಗ್ರತ ಭಾರತ' ನಾಡ-ನುಡಿಯ ಪ್ರೇಮವನ್ನು ಏಕತೆಯ ಭಾವನೆಯನ್ನು ಮೂಡಿಸುವಲ್ಲಿ ಯಶಸ್ವಿಯಾದ ಸಂಕಲನವಾದರೂ ಪ್ರಕೃತಿವರ್ಣನೆಯಿಂದ ತುಂಬಿದೆ. ನವೋದಯದ ಭಾವ ಮೂಡಿದರೂ ಕಂಚ್ಯಾಣಿಯವರಲ್ಲಿ ಹೊಸತನವಿದೆ.

'ತಾಯಿಗಿಂತ ಬಂಧುವಿಲ್ಲ ತಾಯಿಯ ಪ್ರೀತಿ ಅಪಾರ, ತಾಯಿಯೇ ದೇವರು' ಎಂಬ ಮೊದಲಾದ ನುಡಿಗಳು ಮಮತೆಯ ಮಾಧುರ್ಯತೆಯನ್ನು, ವಾತ್ಸಲ್ಯದ ಝರಿಯನ್ನು ಹರಿಸುತ್ತವೆ. ಕಂಚ್ಯಾಣಿಯವರ ಶಿಶು ಕಾವ್ಯ ಈ ಮಮತೆಯ ಸುಳಿಯಲ್ಲಿ ಸಿಕ್ಕು ರಸಾನುಭವದ ರಸಪಾಕವಾಗಿದೆ. ಇವರ ಶಿಶು ಕವಿತೆಗಳನ್ನು ಸಮಕಾಲೀನ ಮಕ್ಕಳ ಸಾಹಿತಿಗಳೊಂದಿಗೆ ಹೋಲಿಸಿನೋಡಬೇಕು.

ಕಂಚ್ಯಾಣಿಯವರ ಶಿಶು ಕವಿತೆಗಳು ಮಕ್ಕಳ ಮನಸ್ಸಿನಲ್ಲಿರುವ ಕಾಲ್ಪನಿಕ ಪ್ರಪಂಚವನ್ನು ಕ್ರಿಯಾಶೀಲಗೊಳಿಸುವ, ಸೃಜನಶೀಲತೆಯನ್ನು ಬೆಳೆಸುವ, ಸಾಹಸ ಪ್ರವೃತ್ತಿ, ಚಿಂತನೆಯ ಕುತೂಹಲ ಕೆರಳಿಸುವ ವಿಷಯಗಳನ್ನು ಸುಂದರವಾಗಿ ಹೆಣೆದುಕೊಂಡಿವೆ. ಶಿಶು ಸಾಹಿತ್ಯವು ಕಿರಿಯ-ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳನ್ನು ಒಳಗೊಂಡು, ಅವರಿಗಾಗಿ ರಚನೆಗೊಂಡ ಸಾಹಿತ್ಯವನ್ನು ಪಾಶ್ಚಿಮಾತ್ಯರು 'ಶಿಶುಗೀತೆಗಳು' ಅಥವಾ "NURSERY RHYMES" ಎಂದು ಕರೆದರು. ಇದು ಲಯ ಪ್ರಧಾನವಾದುದು ಹಾಗೂ ಗೇಯತೆಯ ಗುಣವನ್ನು ಹೊಂದಿದೆ.

---

೧. ಊರೆಗೆ ಜೋಗೇರು ಬಂದಾರ : ನೂರೊಂದು ಕವಿತೆಗಳು ಪುಟ-೨೯ ಕಂಚ್ಯಾಣಿ ಶರಣಪ್ಪ.

ಕಂಚ್ಯಾಣಿಯವರ ಶಿಶು ಕವಿತೆಗಳಲ್ಲಿ ಪುಟ್ಟ ಪುಟ್ಟ ಸಾಲುಗಳ ಶಬ್ದ ಸಮೂಹ ಮನಸ್ಸಿಗೆ ನಾಟುತ್ತವೆ. ಹಾಸ್ಯದ ಲಾಸ್ಯ ಮಿಶ್ರನಗೊಂಡಿದೆ. ಇವುಗಳಲ್ಲಿ ನಿಸರ್ಗ ಕವಿತೆಗಳು, ಕೌಟುಂಬಿಕ ಕವಿತೆಗಳು, ಅನುಭಾವ ಗೀತೆಗಳು, ರಾಷ್ಟ್ರಭಕ್ತಿಯ ಕವಿತೆಗಳು, ಸಾಮಾಜಿಕ ಕವಿತೆಗಳೆಂದು ವಿಂಗಡಿಸಿ ಅಧ್ಯಯನ ಕೈಗೊಂಡಿದೆ ಕಂಚ್ಯಾಣಿಯವರ ಕೆಲವು ಕಥೆಗಳಲ್ಲಿ ಕಾವ್ಯದ ಶಿಲ್ಪ ಮೂಡಿರುವದನ್ನು ಹೊಸ ದೃಷ್ಟಿಯಿಂದ ನೋಡಬಹುದಾಗಿದೆ. ಕಂಚ್ಯಾಣಿಯವರ ಶಿಶು ಪ್ರಾಸಗಳಲ್ಲಿ, ಕವಿತೆಗಳಲ್ಲಿ ಛಂದಸ್ಸಿನ ಹರವು ಮೂಡಿಸಿ.

"ಇರುವೆ ! ಇರುವೆ ! ಕಟ್ಟಿರುವೆ ।  
ಎಲ್ಲಿಗೆ ನೀನು ಹೊರಟಿರುವೆ ?  
ಕಲ್ಲು ಸಕ್ಕರೆ ತಂದಿರುವೆ ।  
ನಿನ್ನ ಜತೆಯಲಿ ನಾ ಬರುವೆ ॥  
ಸರತಿ ಸಾಲಲಿ ಸಾಗೋಣ ।  
ಹೂವಿನ ತೋಟ ಸೇರೋಣ ।  
ಜೇನಿನ ರುಚಿಯನು ನೋಡೋಣ ।  
ಚಂದದಿ ಆಟ ಆಡೋಣ.॥" ೧

ಇಂಥ ಹಲವಾರು ಶಿಶು ಪ್ರಾಸಗಳು ಕಂಚ್ಯಾಣಿಯವರ ಕೃತಿಗಳನ್ನು ತುಂಬಿಕೊಂಡಿವೆ.

ಹಲವು ಆಶಯಗಳ ಶಕ್ತಿರೂಪದ ಸಾಕಾರಮೂರ್ತಿಯಾದ ಶರಣಪ್ಪ ಕಂಚ್ಯಾಣಿಯವರದು ಬಹುಮುಖ ವ್ಯಕ್ತಿತ್ವ ಜನಸಾಮಾನ್ಯರೊಂದಿಗೆ ಬೆರೆತು, ಅವರಲ್ಲಿರುವ ಕುಂದು-ಕೊರತೆಗಳಿಗೆ ಸ್ಪಂದಿಸುವ, ಅದನ್ನು ಪೂರೈಸಲು ದುಡಿಯುವ ಗುಣ ಇವರದು. ಕಂಚ್ಯಾಣಿಯವರು ಮನಸ್ಸಿನ ಸೊಗಸಾದ ಸಾಹಿತಿಯಾಗಿ, ಮನಮುಟ್ಟುವ ಭಾಷಣಕಾರರಾಗಿ, ಸರಳ, ಶಾಂತಿಯ, ಸ್ವಚ್ಛತೆಯ ಬದುಕಿಗೆ ಬೆಲೆ ಕೊಟ್ಟು ಮುಂದೆ ಸಾಗಿದವರು. ಹಿತ-ಮಿತವ್ಯಯಿಗಳಾದ ಇವರು ಸುಮ್ಮನೇ ಎಂದೂ ಕಾಲಹರಣಮಾಡಿದವರಲ್ಲ. ಆಶೆ ಆಮಿಷಗಳಿಗೆ ಬಲಿಯಾದವರಲ್ಲ. ಇದ್ದುದರಲ್ಲಿಯೇ ಸಂತೃಪ್ತ ಬದುಕನ್ನು ಸವೆಸುತ್ತ ಬರುತ್ತಿದ್ದಾರೆ.

ಆತ್ಮಶ್ರದ್ಧೆ, ಗೌರವ ಹೆಚ್ಚಿಸುವ ಕುವೆಂಪು ಅವರ ಮಾತುಗಳು ಕಂಚ್ಯಾಣಿಯವರ ಬರಹದ ಗತಿಯನ್ನು ಪ್ರತಿನಿಧಿಸುತ್ತವೆ. ಹಾಗೆಯೇ ಆತ್ಮೀಯವಾದ ಶೈಲಿ ಸಮುದಾಯದ ತೀವ್ರತೆಗಳಿಗೆ ಸ್ಪಂದಿಸುವ ಭಾಷಾಶೈಲಿ ಕಂಚ್ಯಾಣಿಯವರದು. ಮನದ ಭಾವನೆಗಳನ್ನು ತಿಳಿಸುವ, ಚಿಂತನೆಗೆ ತೊಡಗಿಸುವ, ಹೆಣಿಕೆಯ ರೂಪದ ವಿಶಿಷ್ಟ ಕಲೆ ಅವರ ಭಾಷೆ, ಹುರಿಗೊಂಡು ಬಿಗಿಯಾದ ಶಬ್ದಗಳ ಬಂಧ ಚೇತೋಹಾರಿಯಾದುದು.

ಕಂಚ್ಯಾಣಿಯವರು ರಂಜಕತೆಯೊಂದಿಗೆ ನೈತಿಕತೆಯನ್ನು ತಮ್ಮ ಶಿಶು ಕವಿತೆಗಳಲ್ಲಿ ವ್ಯಕ್ತಪಡಿಸಿದ್ದು ಮಹತ್ವದ ಸಂಗತಿ. ಬದುಕಿಗೆ ಅವಶ್ಯಕವಾಗಿ ಬೇಕಾದುದು ಬುದ್ಧಿಯ ಹಿತನುಡಿಗಳು. ಆರೋಗ್ಯವನ್ನು ಕಾಪಾಡಿಕೊಳ್ಳುವ ಸಲಹೆ, ಮಹಾತ್ಮರ ಉಪದೇಶ, ಕಾಯಕವೇ ಕೈಲಾಸವೆಂಬ ಬೋಧನೆಗಳು ಹೀಗೆ ಹಲವಾರು ಮಕ್ಕಳ ಸಾಹಿತ್ಯದ ಗುಣ ವಿಶೇಷತೆಗಳು ಕಂಚ್ಯಾಣಿಯವರ ಕಾವ್ಯದಲ್ಲಿ ತುಂಬಿಕೊಂಡಿವೆ. ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಬೇಕಾಗುವ ಪೂರಕ ವಿಚಾರಗಳನ್ನು ನಿದರ್ಶನಗಳ ಮೂಲಕ ತಿಳಿಸಿದ್ದಾರೆ.

---

೧. ಕಟ್ಟಿರುವ : ಗುಡು ಗುಡು ಗುಂಡ ಪುಟ-೩೮ ಕಂಚ್ಯಾಣಿ ಶರಣಪ್ಪ.

“ಹೊನ್ನ ಹಣತೆ ಮಣ್ಣು ಹಣತೆ
ಮೇಲು-ಕೀಳು ಎನ್ನದೆ ।
ಬಯಿಸಿ ಬಂದ ಹಣತೆಗಳಿಗೆ
ದೀಪದಾನ ಮಾಡಿದೆ.” ॥ ೧

ಮಕ್ಕಳು ಮೌಲ್ಯ ಪ್ರತಿಪಾದಕರಾಗಿ ಬೆಳೆಯಬೇಕೆಂಬ ಹಂಬಲದಿಂದ ಗುರು-ಹಿರಿಯರ ಉತ್ತಮ ವಿಚಾರಗಳನ್ನು, ಉಪದೇಶಗಳನ್ನು ತಮ್ಮ ಕೃತಿಗಳ ಮೂಲಕವಾಗಿ ಬಿತ್ತರಿಸಿದವರು ಕಂಚ್ಯಾಣಿ ಶರಣಪ್ಪನವರು.

“ಅತ್ತೆಯ ಸಿಟ್ಟನು ಗಂಡನ ಹುಚ್ಚನು
ನುಂಗಿದಳೆಲ್ಲವ ಮಲ್ಲಮ್ಮ ।
ಅತ್ತಿಗೆ ನಾದಿನಿ ಹೊಟ್ಟೆ ಕಿಚ್ಚಿಗೆ
ತಣ್ಣೀರಾದಳು ಮಲ್ಲಮ್ಮ ।
ಸಿಡಿಮಿಡಿಗೊಳ್ಳದೆ ಸಹಿಸಿದಳೆಲ್ಲವ
ಸಹನೆಯ ಮೂರುತಿ ಮಲ್ಲಮ್ಮ ।
ಕುಟ್ಟುವ ಬೀಸುವ ಕಷ್ಟದ ಕೆಲಸವ
ಮಾಡುತಲಿದ್ದಳು ಮಲ್ಲಮ.” ॥ ೨

ಕಂಚ್ಯಾಣಿಯವರು ಸಾಮಾಜಿಕ ಪ್ರಜ್ಞೆಯೊಂದಿಗೆ ಪರಿಸರ ಪ್ರಜ್ಞೆಯನ್ನು, ಸತ್ ಚಾರಿತ್ರ್ಯ ಬೆಳೆಸಿಕೊಂಡು, ಸತ್ಯವನ್ನು-ಶ್ರಮವನ್ನು ಜೀವನದಲ್ಲಿ ಅಳವಡಿಸಿಕೊಂಡು ಮಾನವ ಪ್ರೇಮಿಗಳಾಗಿ ಬೆಳೆಯಬೇಕೆಂಬ ಅಭಿಲಾಷಯನ್ನು ಹೊಂದಿದವರು. ಇಂಥ ಸಾಮಾಜಿಕ, ವೈಚಾರಿಕ, ನೈತಿಕ ವಿಚಾರಗಳ ಮಕ್ಕಳ ಕಾವ್ಯ ರಚಿಸಿದರು. ಕಂಚ್ಯಾಣಿಯವರು ಸಮಾನತೆಯ ಸಮಾಜನಿರ್ಮಾಣಕ್ಕೆ, ಕಾಯಕ ನಿಷ್ಠೆಗೆ, ದಯ-ಧರ್ಮಕ್ಕೆ ಬದುಕನ್ನು ಮುಡಿಪಾಗಿಟ್ಟ ಬಸವಣ್ಣನವರ ನಡೆ-ನುಡಿಯ, ತತ್ವ-ಆದರ್ಶಗಳಿಗೆ ಸ್ಪಂದಿಸಿ ಜೀವನವನ್ನು ಸವೆಸುತ್ತಿದ್ದವರು ಹಾಗೆಯೇ ಬಸವಣ್ಣನವರ ಬದುಕಿನ ಹಲವು ಮಜಲುಗಳನ್ನು ತಮ್ಮ ‘ಬಸವ ಪ್ರದೀಪ’ ಎಂಬ ಚೌಪದಿಯ ಕೃತಿಯಲ್ಲಿ ಸರಳ ಶೈಲಿಯ, ತಿಳಿಯಾದ ಭಾಷೆಯಲ್ಲಿ ವಿಶೇಷವಾದ ವಿಚಾರಗಳನ್ನು ಬಸವಣ್ಣನವರನ್ನು ಸುತ್ತಿಸಿ ಆನಂದಿಸಿದ್ದಾರೆ.

ಈ ಸಂಪ್ರಬಂಧದಲ್ಲಿ ಕಂಚ್ಯಾಣಿಯವರ ಶಿಶು ಕಾವ್ಯ ಕೃತಿಗಳನ್ನು ಸಮೀಕ್ಷಿಸಲಾಗಿದೆ. ಅವುಗಳ ಗುಣ-ವಿಶೇಷತೆಗಳನ್ನು ವಿಶ್ಲೇಷಣೆಮಾಡುವದರೊಂದಿಗೆ ಅವುಗಳ ಮೌಲ್ಯವನ್ನು ತಿಳಿಸಲಾಗಿದೆ. ಕಂಚ್ಯಾಣಿಯವರು ಸರಳವಾದ ಹಾಗೂ ಮಗು ಮನದ ಅಜ್ಜನ ಆತ್ಮಿಯವಾದ ಶೈಲಿಯನ್ನು ಅಳವಡಿಸಿಕೊಂಡು ಕೆಲವು ಗಹನವಾದ ವಿಚಾರಗಳನ್ನು ತಿಳಿಸಿದವರು. ತಾವು ನಂಬಿರುವ, ಅನುಸರಿಸಿಕೊಂಡು ಬರುವ ಜೀವನ ಮೌಲ್ಯಗಳಿಗೆ ಅನುಗುಣವಾಗಿ ವಿಷಯ ವಸ್ತುಗಳನ್ನು ಆಯ್ದು ಕವಿತೆ ರಚಿಸಿದವರು.

---

೧. ದೀಪದಾನ : ಬೆದರು ಬೆಚ್ಚ ಪುಟ್ಟ-೧೯ ಕಂಚ್ಯಾಣಿ ಶರಣಪ್ಪ.
೨. ಮಲ್ಲಮ್ಮ : ತಮ್ಮನ ಶಾಲೆ ಪುಟ್- ೬-೭ ಕಂಚ್ಯಾಣಿ ಶರಣಪ್ಪ.

ಕಂಚ್ಯಾಣಿಯವರು ಹಲವಾರು ರಾಜ್ಯ ಹಾಗೂ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಪಡೆದವರು. 'ಮಕ್ಕಳ ಸಾಹಿತ್ಯ ವೇದಿಕೆ' ಎಂಬ ಸಂಘಟನೆ ಮಾಡಿ ಚರ್ಚಾಗೋಷ್ಠಿ, ಸಮ್ಮೇಳನಗಳನ್ನು ನಡೆಸಿದ್ದಾರೆ. ಮಕ್ಕಳ ಸಾಹಿತ್ಯ ಬೆಳವಣಿಗೆಗಾಗಿ ಶ್ರಮಿಸುತ್ತಲೇ ಇದ್ದಾರೆ. ಅನೇಕ ಯುವ ಸಾಹಿತಿಗಳಿಗೆ ಪ್ರೋತ್ಸಾಹವನ್ನು ನೀಡಿ ಅವರ ಕೃತಿಗಳಿಗೆ ಮುನ್ನುಡಿಯನ್ನು ಬರೆದಿದ್ದಾರೆ.

ಇಷ್ಟೇ ಅಲ್ಲದೆ ಕಂಚ್ಯಾಣಿಯವರು ಅನೇಕ ಚರ್ಚಾಗೋಷ್ಠಿ, ಕವಿಗೋಷ್ಠಿ, ಸಾಹಿತ್ಯ ಸಮ್ಮೇಳನಗಳಲ್ಲಿ ಭಾಗವಹಿಸುವದಲ್ಲದೆ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದಾರೆ. 'ಮಕ್ಕಳ ಸಾಹಿತ್ಯ ಅಕಾಡಮಿ' ಸ್ಥಾಪಿಸಲು ಹೋರಾಟ ನಡೆಸಿದ್ದಾರೆ. ಇವರ ಹಲವಾರು ಕವಿತೆಗಳು ಕರ್ನಾಟಕ ಹಾಗೂ ಮಹಾರಾಷ್ಟ್ರ ರಾಜ್ಯದ ಒಂದನೆಯ, ತರಗತಿಯಿಂದ ನಾಲ್ಕನೆಯ ತರಗತಿಯ ಪಠ್ಯಗಳಲ್ಲಿ ಆಯ್ಕೆಯಾಗಿವೆ.

ಕಂಚ್ಯಾಣಿಯವರು ತಮ್ಮ ಜೀವನದುದ್ದಕ್ಕೂ ಸಾಹಿತ್ಯ ಸೇವೆ, ಸಮಾಜ ಸೇವೆ ಮಾಡುತ್ತ ನಡೆದಿದ್ದಾರೆ. ಇವರ ವಿಶೇಷವಾಗಿ ಮಕ್ಕಳ ಸಾಹಿತ್ಯಕ್ಕೆ ಗಮನಕೊಟ್ಟು, ಅದರ ಬೆಳವಣಿಗೆಗೆ ಶ್ರಮಿಸುತ್ತಿದ್ದಾರೆ. ಸಮಾಜದ ಮಕ್ಕಳು, ಮಕ್ಕಳ ಸಾಹಿತ್ಯದ ಕೃತಿಗಳನ್ನು ಅಧ್ಯಯನ ಮಾಡಿ ಉನ್ನತವಾದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕೆಂಬುದು ಇವರ ಆಶಯ. ಕಂಚ್ಯಾಣಿಯವರು ಪ್ರಕಾಶಕರಾಗಿ, ಮುದ್ರಣ, ಲಿಪಿಗಳ ಗಾತ್ರ, ಸಚಿತ್ರಗಲ ಸ್ವರೂಪ, ಮುಖಪುಟ ವಿನ್ಯಾಸಗಳಿಗೆ ತುಂಬ ಮಹತ್ವಕೊಟ್ಟವರು. ಹೀಗೆ ಕಂಚ್ಯಾಣಿಯವರ 'ಶಿಶು ಕಾವ್ಯ'ವನ್ನು ಏಳು ಅಧ್ಯಾಯಗಳಾಗಿ ವಿಂಗಡಿಸಿ ಅಧ್ಯಯನವನ್ನು ಪೂರ್ಣಗೊಳಿಸಲಾಗಿದೆಯಲ್ಲದೆ ಇನ್ನೂ ಹೆಚ್ಚಿನ ಅಧ್ಯಯನಕ್ಕೆ ಪೂರಕವಾಗಿನಿಂತಿದೆ.

# ಅನುಬಂಧಗಳು

Antibodies

ಅನುಬಂಧ-೧

# ಕಂಚ್ಯಾಣಿಯವರಿಗೆ ದೊರೆತ ಮಾನ-ಸಮ್ಮಾನಗಳು.

೧. ೧೯೮೮ ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮನ.(ಜಾಗ್ರತ ಭಾರತ)

೨. ಕನ್ನಡ ಸಾಹಿತ್ಯ ಪರಿಷತ್ತಿನ ವಸುದೇವ ಭೂಪಾಳಂ ದತ್ತಿನಿಧಿಯ ಮಕ್ಕಳ ಪುರಸ್ಕಾರ (ಅಜ್ಜನ ಹಾಡು-೧೯೮೮)

೩. ಧಾರವಾಡ ಮಕ್ಕಳ ಮನೆಯ ಮಕ್ಕಳ ಸಾಹಿತ್ಯ ಪ್ರಶಸ್ತಿ(೧೯೮೯) (ಅಜ್ಜನ ಹಾಡು)

೪. ರಾಷ್ಟ್ರೀಯ ಬಾಲ ಸಾಹಿತ್ಯ ಪುರಸ್ಕಾರ ೧೯೯೦-೯೧ ರಾಷ್ಟ್ರೀಯ ಶಕ್ಷಣಿಕ ಅನುಸಂಧಾನ ಮತ್ತು ಪರಿಷ್ಕರಣ ಪರಿಷತ್ತು, ನವದೇಹಲಿ.(ಅಜ್ಜನ ಹಾಡು)

೫. ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ ಮೂರು ಸಾವಿರ ಮಠ ಹುಬ್ಬಳ್ಳಿ ಇವರ ಸಾಹಿತ್ಯ ಪುರಸ್ಕಾರ ೧೯೯೬.

೬. ಬಾಗಲಕೋಟೆಯಲ್ಲಿ ಜರುಗಿದ ವಿಜಾಪುರ ಜಿಲ್ಲಾ ೫ ನೇ ಮಕ್ಕಳ ಸಾಹಿತ್ಯ ಸಮ್ಮೇಳನದ. ಅಧ್ಯಕ್ಷತೆ-೧೯೯೬.

೭. ಭಾಲ್ಕಿ ಸಂಸ್ಥಾನ ಮಠದ ಮಕ್ಕಳ ಸಾಹಿತ್ಯ ಪುರಸ್ಕಾರ-೨೦೦೧.

೮. ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಧಾರವಾಡ-೨೦೦೧.

೯. ೨೦೦೧ ರ ಅತ್ತಿಮಬ್ಬೆ ಪ್ರತಿಷ್ಠಾನದ ರನ್ನ ಸಾಹಿತ್ಯ ಪ್ರಶಸ್ತಿ (ಗಿಲ್ ಗಿಲ್ ಗಿಡ್ಡ)


೧೦. ರೋಟರಿ ಕ್ಲಬ್ ವಿಜಾಪುರ ಉತ್ತರ ಇವರಿಂದ ಉತ್ತಮ ನಾಗರಿಕ ಪ್ರಶಸ್ತಿ.೨೦೦೧-೦೩.


೧೧. ವಿಜಾಪುರ ತಾಲೂಕಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನಾಧಯಕ್ಷತೆ. ಫೆಬ್ರುವರಿ-೨೦೦೩.

೧೨. ಕರ್ನಾಟಕ ಸಂಘ, ಶಿವಮೊಗ್ಗ ಇವರ ಮಕ್ಕಳ ಸಾಹಿತ್ಯ ಪ್ರಶಸ್ತಿ-೨೦೦೩.


೧೩. ಬೆಳಗಾವಿಯ ನಾಗನೂರ ರುದ್ರಾಕ್ಷಿ ಮಠದ ಶರಣೆ ಸಾವಿತ್ರಮ್ಮ ಬೆಳವಡಿ ಸ್ಮಾರಕ ಹರ್ಡೇಕರ ಮಂಜಪ್ಪ ಮಕ್ಕಳ ಸಾಹಿತ್ಯ ಪ್ರಶಸ್ತಿ-೨೦೦೪.

೧೪. ಶ್ರೀ ಬಸವಜ್ಯೋತಿ ರಾಜ್ಯ ಪ್ರಶಸ್ತಿ-೨೦೦೮





೧೯೯೧ ರಲ್ಲಿ ಆಗಿನ ಉಪರಾಷ್ಟ್ರಪತಿ ಡಾ॥ ಶಂಕರದಯಾಳ ಶರ್ಮಾ ಅವರಿಂದ ಅಜ್ಜನ ಹಾಡು ಕೃತಿಗೆ ಎನ್.ಸಿ.ಇ.ಆರ್.ಟಿ. ಅವರ ರಾಷ್ಟ್ರೀಯ ಬಾಲ ಸಾಹಿತ್ಯ ಪುರಸ್ಕಾರ ಪಡೆಯುತ್ತಿರುವ ಕಂಚ್ಯಾಣಿ ಶರಣಪ್ಪ



ಪ್ರೊ॥ ಎ. ಎನ್. ಮೂರ್ತಿರಾವ್ ಅವರಿಂದ ಜಾಗೃತ ಭಾರತ ಮಕ್ಕಳ ಪುಸ್ತಕಕ್ಕೆ ೧೯೮೮ ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುಸ್ತಕ ಬಹುಮಾನ ಸ್ವಕರಿಸುತ್ತಿರುವದು.




ಕರ್ನಾಟಕ ಸಂಘ, ಶಿವಮೊಗ್ಗ ಇವರ ಮಕ್ಕಳ ಸಾಹಿತ್ಯ ಪ್ರಶಸ್ತಿ (೨೦೦೩)



ಬೆಳಗಾವಿಯ ನಾಗನೂರು ರುದ್ರಾಕ್ಷಿಮಠದ ಹರಡೇಕರ ಮಂಜಪ್ಪ ಮಕ್ಕಳ ಸಾಹಿತ್ಯ ಪ್ರಶಸ್ತಿ - ೨೦೦೪ ಸ್ವಿಕರಿಸುತ್ತಿರುವದು.








ಬಾಲ್ಕಿ ಸಂಸ್ಥಾನಮಠದ ೨೦೦೧ ರ ಮಕ್ಕಳ ಸಾಹಿತ್ಯ ಪುರಸ್ಕಾರ ಸ್ವಿಕರಿಸುತ್ತಿರುವದು.




ರೋಟರಿ ಕ್ಲಬ್ ವಿಜಾಪುರ ಉತ್ತರ ಇವರಿಂದ ೨೦೦೩ ನೇ ಸಾಲಿನ ಉತ್ತಮ ನಾಗರಿಕ ಪ್ರಶಸ್ತಿ







ಆಯ್ದ ನೂರೊಂದು ಕವಿತೆಗಳು ಕೃತಿಗೆ ಮೂಜಗಂ ಅವರಿಂದ ಜಗದ್ಗುರು ಗಂಗಾಧರ ದರ್ಮ ಪ್ರಚಾರಕ ಮಂಡಳ, ಮೂರು ಸಾವಿರ ಮಠ ಹುಬ್ಬಳ್ಳಿ ಇವರ ಪುರಸ್ಕಾರ. (೧೯೯೫)



ಶ್ರೀಮತಿ ಲಿಲಾದೇವಿ ಆರ್. ಪ್ರಸಾದ ಅವರಿಂದ ರನ್ನ ಸಾಹಿತ್ಯ ಪ್ರಶಸ್ತಿ ಸ್ವೀಕರಿಸುತಿರುವದು. ಮಾಜಿ ಮೇಯರ ಜಿ. ನಾರಾಯಣ ರವರು ಚಿತ್ರದಲ್ಲಿದ್ದಾರೆ.







ಗದಗಿನ ತೋಂಟದ ಜಗದ್ಗುರುಗಳಿಂದ ಸನ್ಮಾನ





ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದಲ್ಲಿ ಹಿರಿಯ ಕವಿ ಚನ್ನವೀರ ಕಣವಿ ಅವರಿಂದ ಸನ್ಮಾನ







ಬಾಲ್ಕಿ ಸಂಸ್ಥಾನಮಠದಲ್ಲಿ ಸನ್ಮಾನ ಸ್ವೀಕಾರ




ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾ ಭವನದಲ್ಲಿ ಮೇ ೧೩ ೨೦೦೧ ರಲ್ಲಿ ಜರುಗಿದ ರಾಜ್ಯ ಮಟ್ಟದ ಮಕ್ಕಳ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷತೆ.








ಮಧ್ಯಪ್ರದೇಶದ ಬೋಪಾಲ ನಗರದ ಭಾರತ ಭವನದಲ್ಲಿ ಜರುಗಿದ ಹಿಂದಿ - ಕನ್ನಡ ಅನುವಾದ ಕಮ್ಮಟದಲ್ಲಿ ಭಾಗವಹಿಸಿದಾಗ (೧೯೯೦)



ಬಹುಭಾಷಾ ಮಕ್ಕಳ ಸಾಹಿತಿಗಳ ಕಾರ್ಯಾಗಾರದಲ್ಲಿ ಭಾಗವಹಿಸಿದಾಗಿನ ಚಿತ್ರ (೧೯೯೧)







ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ವೇದಿಕೆಯ ಉದ್ಘಾಟನಾ ಸಮಾರಂಭದಲ್ಲಿ




ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ವೇದಿಕೆಯ ಉದ್ಘಾಟನಾ ಸಮಾರಂಭದಲ್ಲಿ ಡಾ॥ ದೇ.ಜ.ಗೌ. ಹಾಗೂ ಸಾ.ಸಿ. ಮರುಳಯ್ಯನವರ ಜೊತೆಯಲ್ಲಿ








ಪ್ರಕಟಿತ ಹಲವು ಮಕ್ಕಳ ಸಾಹಿತ್ಯ ಕೃತಿಗಳು



# बाल साहित्य पुरस्कार

राष्ट्रीय शैक्षिक अनुसंधान और प्रशिक्षण परिषद्

प्रमाणित किया जाता है कि *श्री कंच्यानी शरणप्पा* द्वारा *कन्नड़* में लिखित तथा *प्रतिमा प्रकाशन, मालघन* द्वारा प्रकाशित पुस्तक *अउजना हाडू* को **छब्बीसवीं राष्ट्रीय बाल साहित्य पुरस्कार प्रतियोगिता** 1990-91 के लिए सर्वोत्तम प्रविष्टि के रूप में निर्णीत किया गया।

*श्री कंच्यानी शरणप्पा* को दस हज़ार रुपये मात्र का पुरस्कार प्रदान किया गया।

अर्जुन देव
(अर्जुन देव)
*विभागाध्यक्ष*
सामाजिक विज्ञान एवं
मानविकी शिक्षा विभाग

डा. के. गोपालन
(डॉ. के. गोपालन)
*निदेशक*
राष्ट्रीय शैक्षिक अनुसंधान
और प्रशिक्षण परिषद्

राष्ट्रीय बाल साहित्य पुरस्कार प्रतियोगिता
**26**





ಹತ್ತು ಸಾವಿರ ರೂಪಾಯಿಗಳ ನಗದು ಬಹುಮಾನದ ರಾಷ್ಟ್ರೀಯ ಬಾಲ ಸಾಹಿತ್ಯ ಪುರಸ್ಕಾರದ ಪ್ರಶಸ್ತಿ ಪತ್ರ

ಅನುಬಂಧ–೨

# ಕಂಚ್ಯಾಣಿಯವರ ಒಟ್ಟು ಕೃತಿಗಳು.

೧. ಅಜ್ಜನ ಹಾಡು (ಕವಿತೆಗಳು)

೨. ಜಾಗ್ರತ ಭಾರ (ಕವಿತೆಗಳು)

೩. ಆಯ್ದ ನೂರೊಂದು (ಕವಿತೆಗಳು)

೪. ತೊಟ್ಟಿಲು ಗುಬ್ಬಿ (ಕವಿತೆಗಳು)

೫. ತಿಪ್ಪನ ಕಥೆಗಳು

೬. ಕನ್ನಡ ಕವಿಕೀರ್ತಿ (ಗದ್ಯ ಚರಿತ್ರ)

೭. ಬಸವ ಪ್ರದೀಪ (ಖಂಡ ಕಾವ್ಯ)

೮. ಮಕ್ಕಳ ಮನೆ (ಕವಿತೆಗಳು)

೯. ಹುಟ್ಟು ಹಬ್ಬ (ಕವಿತೆಗಳು)

೧೦. ತಮ್ಮನ ಶಾಲೆ (ಕವಿತೆಗಳು)

೧೧. ತೋಟದ ಆಟ (ಕವಿತೆಗಳು)

೧೨. ಗುಡು ಗುಡು ಗುಂಡ (ಶಿಶು ಪ್ರಾಸಗಳು)

೧೩. ಚಲುವಿನ ಚಿಟ್ಟಿ (ಕವಿತೆಗಳು)

೧೪. ರಾಜಯೋಗಿ ಬೀಳೂರು ಅಜ್ಜನವರ (ಚರಿತ್ರೆ)

೧೫. ಗಿಲ್ ಗಿಲ್ ಗಿಡ್ಡ (ಕಥೆಗಳು)

೧೬. ಪುಟ್ಟಿಯ ತೋಟ (ಕವಿತೆಗಳು)]

೧೭. ತಿಪ್ಪನ ಮತ್ತಷ್ಟು ಕಥೆಗಳು

೧೮. ಬೆದರು ಬೆಚ್ಚ (ಕವಿತೆಗಳು)

೧೯. ಚತುರ ಬೆಣ್ಣರು (ಕಥೆಗಳು)

೨೦. ಹಾಡುವ ಹಕ್ಕಿ (ಕಥೆಗಳು)

ಇನ್ನೂ ಅಪ್ರಕಟಿತ ಮೂರು ಕೃತಿಗಳನ್ನು ಮತ್ತು ಒಂದು ಶಿಶು ಚುಟುಕು ಎಂಬ ಕೃತಿ ಹಸ್ತ ಪ್ರತಿಯಲ್ಲಿ ಸಿದ್ಧಗೊಂಡಿದೆ.

## ಅನುಬಂಧ–೩

# ಆಕರ ಗ್ರಂಥಗಳು

| ಕ್ರಸಂ | ಕೃತಿ | ಲೇಖಕರು | ಪ್ರಕಾಶನ |
|---|---|---|---|
| ೧. | ಒಲವೇ ನಮ್ಮ ಬದುಕು | ಸಂ. ವಾಮನ ಬೇಂದ್ರೆ | ಗೀತಾಬುಕ್ ಹೌಸ. ೧೯೮೬, ಮೈಸೂರು. |
| ೨. | ಕನ್ನಡ ಕಾವ್ಯತತ್ವ ಚಿಂತನೆ | ಜಿ.ಎಸ್. ಶಿವರುದ್ರಪ್ಪ | ಕ.ವಿ.ವಿ. ಹಂಪಿ. ೨೦೦೧ |
| ೩. | ಕನ್ನಡ ಸಾಹಿತ್ಯ ಮೀಮಾಂಸೆ | ಸಂ. ರಹಮತ್ ತರೀಕೆರೆ | ಕ.ವಿ.ವಿ. ಹಂಪಿ.೨೦೦೧ |
| ೪. | ಕನ್ನಡ ಸಾಹಿತ್ಯ ಮತ್ತು ಮಹಿಳೆ | ಸಂ. ಸಭಿಹಾ ಭೂಮಿಗೌಡ | ಕ.ಸಾ.ಪ. ಬೆಂಗಳೂರು.೨೦೦೬ |
| ೫. | ಕಾವ್ಯ ಭಾಷೆ | ಎಂ.ಎಚ್. ಕೃಷ್ಣಯ್ಯ | ಅಂಕಿತ ಪ್ರಕಾಶನ ಬೆಂಗಳೂರು.೧೯೯೩ |
| ೬. | ಕಾವ್ಯರ್ಥ ಚಿಂತನ | ಜಿ.ಎಸ್. ಶಿವರುದ್ರಪ್ಪ | ಶಾರದಾ ಪ್ರಕಾಶನ ಬೆಂಗಳೂರು.೧೯೮೩ |
| ೭. | ಕೆ.ಎಸ್.ನರಸಿಂಹಸ್ವಾಮಿ | ಚೆ.ರಾ.ಗೋವಿಂದರಾಜು | ಕ.ವಿ.ವಿ.ಹಂಪಿ.೧೯೯೫ |
| ೮. | ನಲ್ವಾಡುಗಳು | ಆನಂದ ಕಂದ | ಸಮಾಜ ಪುಸ್ತಕಾಲಯ, ಧಾರವಾಡ.೧೯೯೦ |
| ೯. | ಬಂಡಾಯ ಸಾಹಿತ್ಯ | ಬಸವರಾಜ ಸಬರದ | ಕ.ವಿ.ವಿ. ಹಂಪಿ.೨೦೦೧ |
| ೧೦. | ಬ.ಗಿ.ಯಲ್ಲಟ್ಟಿ ಸಮಗ್ರಕಾವ್ಯ | ಬ.ಗಿ.ಯಲ್ಲಟ್ಟಿ | ವಾತ್ಸಲ್ಯ ಪ್ರಕಾಶನ ಬನಹಟ್ಟಿ.೨೦೦೧ |
| ೧೧. | ಬೆವು ಬೆಲ್ಲ | ಸೋಮಶೇಖರ ಇಮ್ರಾಪೂರ | ಸಾಹಿತ್ಯ ಭಂಡಾರ, ಹುಬ್ಬಳ್ಳಿ.೧೯೯೦ |
| ೧೨. | ಮಲ್ಲಿಗೆ ಮಾಲೆ | ಕೆ.ಎಸ್.ನರಸಿಂಹಸ್ವಾಮಿ | ಲಿಪಿ ಪ್ರಕಾಶನ, ಬೆಂಗಳೂರು.೧೯೯೪ |
| ೧೩. | ಮಿರ್ಜಿ ಅಣ್ಣಾರಾಯರು ಒಂದು ಅಧ್ಯಯನ | ಶಿವಾನಂದ ಗಾಳಿ | ಸುಂದರ ಪ್ರಕಾಶನ, ಧಾರವಾಡ.೧೯೯೫ |
| ೧೪. | ಯುಗದ ಕವಿ ಕುವೆಂಪು, ಜೀವನ & ಸಾಹಿತ್ಯ ಸಾಧನೆ | ಕೆ.ಸಿ.ಶಿವಾರೆಡ್ಡಿ | ಪುಸ್ತಕ ಪ್ರಕಾಶನ, ಮೈಸೂರು.೨೦೦೨ |
| ೧೫. | ವಿಜಾಪುರ ಜಿಲ್ಲೆಯ ಲಾವಣಿ ಮೇಳಗಳು | ನಿಜಲಿಂಗಪ್ಪ ಮಟ್ಟಿಹಾಳ | ಬೆಳಗು ಪ್ರಕಾಶನ, ನಾಗರದಿನ್ನಿ.೨೦೦೧ |
| ೧೬. | ಶತಮಾನದ ಕಾವ್ಯ | ಸಂ.ಎಚ್.ಎಸ್. ವೆಂಕಟೇಶಮೂರ್ತಿ | ಕ.ಸಾ.ಅಕಾಡಮಿ ಬೆಂಗಳೂರು.೨೦೦೧ |
| ೧೭. | ಸಖೀಗೀತೆ | ಸಂ.ವಾಮನ ಬೇಂದ್ರೆ | ಶ್ರೀಮಾತಾ ಪ್ರಕಾಶನ, ಧಾರವಾಡ.೧೯೯೦ |

| | | | |
|---|---|---|---|
| ೧೮. | ಸಂಸ್ಕೃತಿ-ಶ್ರಮ ಮತ್ತು ಸೃಜನಶೀಲತೆ | ಬರಗೂರು ರಾಮಚಂದ್ರಪ್ಪ | ಅಂಕಿತ ಪ್ರಕಾಶನ, ಬೆಂಗಳೂರು.೨೦೦೧ |
| ೧೯. | ಹಾಡೋಣು ಬಾರs ಪ್ರೇಮದ ಹಾಡಾ. | ಶ್ರೀರಾಮ ಇಟ್ಟಣ್ಣವರ | ದೃವರಂಗ, ಹುನಗುಂದ.೧೯೯೧ |

೨೦. ಕಂಚ್ಯಾಣಿಯವರ ೧೬ ಕೃತಿಗಳನ್ನು ಆಕರವಾಗಿ ಬಳಸಿಕೊಳ್ಳಲಾಗಿದೆ.

| | | |
|---|---|---|
| ೧. | ಅಜ್ಜನ ಹಾಡು (೧೯೭೭) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೨. | ಜಾಗ್ರತ ಭಾರತ (೧೯೯೮) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೩. | ನೂರೊಂದು ಕವಿತೆಗಳು (೧೯೯೪) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೪. | ತೊಟ್ಟಿಲು ಗುಬ್ಬಿ (೧೯೯೯) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೫. | ತಿಪ್ಪನ ಕಥೆಗಳು (೨೦೦೩) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೬. | ಬಸವ ಪ್ರದೀಪ (೧೯೭೩) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೭. | ಮಕ್ಕಳ ಮನೆ (೧೯೮೮) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೮. | ಹುಟ್ಟು ಹಬ್ಬ (೧೯೯೦) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೯. | ತಮ್ಮನ ಶಾಲೆ (೧೯೯೧) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೧೦. | ತೋಟದ ಆಟ (೧೯೯೩) | ನವಕರ್ನಾಟಕ ಪಬ್ಲಿಕೇಷನ್,ಬೆಂಗಳೂರು. |
| ೧೧. | ಗುಡು ಗುಡು ಗುಂಡ (೧೯೯೦) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೧೨. | ಚಲುವಿನ ಚಿಟ್ಟಿ | ಗ್ರಾಮೀಣ ಪ್ರಕಾಶನ,ವಿಜಾಪುರ |
| ೧೩. | ಗಿಲ್ ಗಿಲ್ ಗಿಡ್ಡ (೨೦೦೧) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೧೪. | ಪುಟ್ಟಿಯ ತೋಟ (೨೦೦೨) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೧೫. | ಬೆದರು ಬೆಚ್ಚ (೨೦೦೫) | ಗ್ರಾಮೀಣ ಪ್ರಕಾಶನ,ವಿಜಾಪುರ |
| ೧೬. | ಹಾಡುವ ಹಕ್ಕಿ (೨೦೦೮) | ಗ್ರಾಮೀಣ ಪ್ರಕಾಶನ,ವಿಜಾಪುರ |

| | | | |
|---|---|---|---|
| ೨೧. | ಹೊಳಿಸಾಲ ಬಳ್ಳೀ | ಶ್ರೀರಾಮ ಇಟ್ಟಣ್ಣವರ | ಶ್ರೀರಾಮ ಇಟ್ಟಣ್ಣವರ, ಬೀಳಗಿ,೧೯೯೩ |
| ೨೨. | ಕಣವಿಯವರ ಕವಿತೆ: ಒಂದು ಹೊಸ ಓದು | ಸಂ.ಗುರುಲಿಂಗ ಕಾಪಸೆ ಜಿ.ಎಂ. ಹೆಗಡೆ | ಸಮುಖ ಪ್ರಕಾಶನ ಬೆಂಗಳೂರು-೨೦೦೮. |
| ೨೩. | ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು | ಸಂ.ಜಿ.ಎಸ್.ಶಿವರುದ್ರಪ್ಪ | ಬೆಂ.ವಿ.ವಿ. ಬೆಂಗಳೂರು.೧೯೮೧ |
| ೨೪. | ಮಕ್ಕಳ ಸಾಹಿತ್ಯ ಚಿಂತನೆ ಮತ್ತು ಸಿಸು ಸಂಗಮೇಶ | ಸಂ.ಡಾ.ಗುರುಲಿಂಗ ಕಾಪಸೆ | ಕ.ಸಾ.ಅಕಾಡಮಿ ಸ್ಮರಣಿ. |
| ೨೫. | ಹೊಯ್ಸಳ ಸಂಪದ | ಸಂ.ಮಳಲಿ ವಸಂತ ಕುಮಾರ್ | ೬೫.ಅ.ಭಾ.ಕ.ಸಾ. ಸಮ್ಮೇಳನದ ಸಾಕ್ಷೀ ಸಂಪುಟ-೧೯೯೬ |

## ಅನುಬಂಧ-೪

| | | | |
|---|---|---|---|
| ೨೬. | ಆಧುನಿಕ ಕನ್ನಡ ಸಾಹಿತ್ಯ ರೂಪಗಳು. | ವಿವಿಧ ಲೇಖಕರು | ಪ್ರಸಾರಂಗ. ಕ.ವಿ.ವಿ. |
| ೨೭. | ಕನ್ನಡ ವಿಶ್ವಕೋಶ ಸಂಪುಟ-೧ | ಸಂ.ದೇ. ಜವರೇಗೌಡ | ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ.-೧೯೬೯ |
| ೨೮. | ಕನ್ನಡ ವಿಶ್ವಕೋಶ ಸಂಪುಟ-೩ | ಸಂ.ಹಾ.ಮಾ. ನಾಯಕ | ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ. ೧೯೭೧. |
| ೨೯. | ಕನ್ನಡ ಸಾಹಿತ್ಯ ಚರಿತ್ರೆ | ರಂ.ಶ್ರೀ. ಮುಗಳಿ | ಉಷಾಸಾಹಿತ್ಯ ಮಲೆ ಮೈ.ವಿ.ವಿ. ೧೯೭೧. |
| ೩೦. | ಖಲೀಲ್ ಗಿಬ್ರಾನ್ | ಪ್ರಭುಶಂಕರ | ಪ್ರಸಾರಂಗ ಮೈ.ವಿ.ವಿ. ಮೈಸೂರು-೧೯೭೦. |
| ೩೧. | ಜಾನಪದ ಸಂವಹನ | ಡಾ.ಎಚ್.ಎಂ. ಮಹೇಶ್ವರಯ್ಯ | ಸಹಿತಾ ಪ್ರಕಾಶನ ಧಾರವಾಡ-೧೯೯೦. |
| ೩೨. | ದುರ್ಗಸಿಂಹನ ಪಂಚತಂತ್ರ ಕಥೆಗಳು | ಸಂ.ಡಿ.ಕೆ. ಜೋಶಿ | ಪ್ರಕಾಶ ಕೃಷ್ಣ ಜೋಶಿ ಪ್ರಕಾಶನಾಲಯ ಧಾರವಾಡ-೧೯೮೯. |
| ೩೩. | ಪಾಂಚಜನ್ಯ | ಕುವೆಂಪು | ಉದಯರವಿ ಪ್ರಕಾಶನ ಮೈಸೂರ-೧೯೯೪. |
| ೩೪. | ಬಸವಣ್ಣನವರ ವಚನ ಸಂಪುಟ-೧ | ಡಾ.ಎಂ.ಎಂ.ಕಲಬುರ್ಗಿ | ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು-೧೯೯೩. |
| ೩೫. | ಬೆಳ್ಳಿ ಬೆಳಕು | ಸಂ.ಶಂ.ಗು.ಬಿರಾದಾರ | ಜಿಲ್ಲಾ ಸಾಹಿತ್ಯ ಸಂಸ್ಕೃತಿ ಸಂಘ ವಿಜಾಪುರ-೧೯೯೨. |
| ೩೬. | ವಿಚಾರ ಸಾಹಿತ್ಯ ಭಾಗ-೧ | ಸಂ.ಜಿ.ಎಸ್.ಶಿವರುದ್ರಪ್ಪ | ಪ್ರಸಾರಂಗ ಬೆ.ವಿ.ವಿ ಬೆಂಗಳೂರು-೧೯೮೬. |
| ೩೭. | ಶಿಕ್ಷಣ ಸಮಸ್ಯಗಳು | ಎಸ್. ಕೃಷ್ಣಪ್ಪ | ಗೀತಾ ಬುಕ್ ಏಜನ್ಸಿ, ಮೈಸೂರು. |
| ೩೮. | ಸಂಶೋಧನೆ | ಡಾ.ಎಂ.ಚಿದಾನಂದಮೂರ್ತಿ | ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೧೯೯೪. |
| ೩೯. | ಸಾಹಿತ್ಯ ಮತ್ತು ಭಾಷೆ | ಶಾಂತಿನಾಥ ದೇಸಾಯಿ | ಬೆಂ.ವಿ.ವಿ. ಬೆಂಗಳೂರು-೧೯೮೦. |
| ೪೦. | ಹೊಸಗನ್ನಡ ಸಾಹಿತ್ಯ | ಎಲ್.ಎಸ್.ಶೇಷಗಿರಿರಾವ್ | ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು-೧೯೯೩. |
| ೪೧. | ಕರ್ನಾಟಕ ಗಾಂಧಿ | ಡಾ.ಮಲ್ಲಿಕಾರ್ಜುನ ಮೇತ್ರಿ | ಸಂಗಮ ಪ್ರಕಾಶನ ವಿಜಾಪುರ-೨೦೦೨. |
| ೪೨. | ಹನ್ನೆರಡನೆಯ ಶತಮಾನದ ಕಾಯಕ ಜೀವಿಗಳ ಚಳುವಳಿ. | ಸಿ.ವೀರಣ್ಣ | ನವಕರ್ನಾಟಕ ಪ್ರಕಾಶನ ಬೆಂಗಳೂರು-೧೯೮೬. |

## ಅನುಬಂಧ–೫

| | | | |
|---|---|---|---|
| ೪೩. | ಶತಮಾನದ ಮಕ್ಕಳ ಸಾಹಿತ್ಯ | ರಘುನಾಥ ಎನ್.ಎಸ್. | ಕ.ಸಾ.ಅಕಾಡಮಿ ಬೆಂಗಳೂರು–೨೦೦೧. |
| ೪೪. | ಡಾ.ಹೋ.ಶ್ರೀನಿವಾಸಯ್ಯ ಅಭಿನಂದನ ಗ್ರಂಥ | ಸಂ.ಮಲ್ಲೇಶ್ವರಂ ಜಿ.ವಂಕಟೇಶ, ಚಂದ್ರಶೇಖರ | ೧೯೯೯ |
| ೪೫. | ಹೂವಿನ ಹಂದರ | ಸಂ.ಕಂಚ್ಯಾಣಿ ಶರಣಪ್ಪ | ಶಂ.ಗು.ಬಿರಾದಾರ ಸನ್ಮಾನ ಸಮೀತಿ ವಿಜಾಪುರ–೧೯೬೮. |
| ೪೬. | ಜೀವನಾಡಿ ಪತ್ರಿಕೆ | | ೨೦೦೫. |